ಗುರುವಾರ, ಜೂನ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 155 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದುಡ್ಡು, ಕಾಸು ಕುರಿತ ಹೊಸ ಪುರವಣಿ

ಹಣಕಾಸು, ಹೂಡಿಕೆಗಳ ಕುರಿತ ಮಾಹಿತಿಯನ್ನು ಒದಗಿಸುವ ಹೊಸ ಪುರವಣಿ 'ಹಣಕಾಸು' ಇಂದಿನಿಂದ ಪ್ರತಿ ಗುರುವಾರ ಪ್ರಕಟವಾಗುತ್ತದೆ...



ಸೇವಾ ವಲಯದಲ್ಲಿ ಅಲ್ಪ ಪ್ರಗತಿ 10

ಮೊಬೈಲ್ ಪತ್ತೆ: 2ನೇ ಸ್ಥಾನಕ್ಕೆ ಕುಸಿತ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,998	24,620	₹1.02 ಲಕ್ಷ (ಬೆಂಗಳೂರು)	₹1.07 ಲಕ್ಷ (ಬೆಂಗಳೂರು)	85.87

ಆರ್‌ಸಿಬಿ ವಿಜಯೋತ್ಸವಕ್ಕೆ ಹರಿದು ಬಂದ ಅಭಿಮಾನಿಗಳ ಪಡೆ ● ಕಾಲ್ತುಳಿತದಲ್ಲಿ ಹಲವರಿಗೆ ಗಂಭೀರ ಗಾಯ ● ನೂಕು ನುಗ್ಗಲು ನಿಯಂತ್ರಿಸಲು ಪೊಲೀಸರಿಂದ ಲಾಠಿ ಪ್ರಹಾರ

ಸಂಭ್ರಮವಲ್ಲ, ಶೋಕಸಾಗರ: 11 ಸಾವು

ಮೃತರ ವಿವರ

- ಭೂಮಿಕ್ (20)
- ಸಹನಾ (19)
- ಪೂರ್ಣಚಂದ್ರ (32)
- ಚಿನ್ಮಯಿ (19)
- ದಿವ್ಯಾಂಶಿ (13)
- ಶ್ರವಣ್ (20)
- ದೇವಿ (19)
- ಶಿವಲಿಂಗ್ (17)
- ಮನೋಜ್ (33)
- ಅಕ್ಷತಾ
- 20 ವರ್ಷದ ಮತ್ತೊಬ್ಬರು ಮೃತಪಟ್ಟಿದ್ದು, ಹೆಸರು ಪತ್ತೆಯಾಗಿಲ್ಲ

ಗಾಯಾಳುಗಳಿಗೆ ಚಿಕಿತ್ಸೆ

ಆಸ್ಪತ್ರೆ	ಗಾಯಾಳು
ಮಣಿಪಾಲ ಆಸ್ಪತ್ರೆ	5
ಸ್ಪರ್ಶ್ ಆಸ್ಪತ್ರೆ	5
ವೈದೇಹಿ ಆಸ್ಪತ್ರೆ	14
ಬೌರಿಂಗ್ ಆಸ್ಪತ್ರೆ	18

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೆಂಟು ವರ್ಷದ ಬಳಿಕ ಐಪಿಎಲ್ ಟ್ರೋಫಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವಕ್ಕೆ ಬುಧವಾರ ಸಾಗರೋಪಾದಿಯಲ್ಲಿ ಜನ ಹರಿದುಬಂದಿದ್ದು, ಆ ವೇಳೆ ಉಂಟಾದ ಕಾಲ್ತುಳಿತದಿಂದ 11 ಮಂದಿ ದುರಂತ ಸಾವು ಕಂಡರು.

ಆರ್‌ಸಿಬಿ ತಂಡ ನಗರಕ್ಕೆ ಬಂದಿಳಿಯುತ್ತಿದ್ದಂತೆ ಕಡಲಾಗಿದ್ದ ಸಂಭ್ರಮ, ಒಂದರ್ಧ ಗಂಟೆ ಕಳೆಯುವ ಹೊತ್ತಿಗೆ ಸಾವಿನ ಮನೆಯ ಶೋಕಾಚರಣೆಯ ಕಡೆಗೆ ತಿರುಗಿತು. ಕ್ರೀಡಾಂಗಣ ಹಾಗೂ ವಿಧಾನಸೌಧದ ಆವರಣದಲ್ಲಿ ನೆರೆದಿದ್ದ ಯುವ ಸಮೂಹಕ್ಕೆ ಈ ಯಾವುದೂ ಗಮನಕ್ಕೆ ಬರದೇ, ಕೇಕೆ ಹಾಕುತ್ತಲೇ ಇದ್ದರು. ಇತ್ತ ಕಾಲ್ತುಳಿತದಿಂದ ಅಭಿಮಾನಿಗಳು ಪ್ರಾಣ ಕಳೆದುಕೊಂಡಿದ್ದರೆ, ಅತ್ತ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸರ್ಕಾರದಿಂದ, ಬಳಿಕ ಕ್ರೀಡಾಂಗಣದಲ್ಲಿ ಆರ್‌ಸಿಬಿ ಫ್ರಾಂಚೈಸಿಯಿಂದ ತಂಡದ ಆಟಗಾರರಿಗೆ ಸನ್ಮಾನವೂ ನಡೆಯಿತು.

ನೂಕುನುಗ್ಗಲು ಹಾಗೂ ಕಾಲ್ತುಳಿತದಿಂದಾಗಿ 47 ಗಾಯಾಳುಗಳು ವೈದೇಹಿ ಆಸ್ಪತ್ರೆ, ಶಿವಾಜಿನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ದಾಖಲಾಗಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ.

ಕ್ರೀಡಾಂಗಣದ ಕೆಲವು ಗೇಟ್‌ಗಳ ಬಳಿ ಕಾಲ್ತುಳಿತ ಉಂಟಾದ ತಕ್ಷಣ ಆಕ್ರಂದನ, ಗೊಂದಲದ ವಾತಾವರಣ ನಿರ್ಮಾಣ ಆಗಿತ್ತು. ನೂಕುನುಗ್ಗಲು ವೇಳೆ ಹಲವರು ಅಸ್ವಸ್ಥಗೊಂಡು ಕುಸಿದು ಬಿದ್ದರು. ಇನ್ನೂ ಕೆಲವರಿಗೆ ಕೈ–ಕಾಲಿಗೆ ಗಾಯವಾಯಿತು.

ಸ್ಥಳದಲ್ಲಿದ್ದವರು ಅಂಗಿ ಕಳಚಿ ಗಾಯಗೊಂಡವರಿಗೆ ಗಾಳಿ ಬೀಸಲು ಪ್ರಯತ್ನಿಸಿದರು. ಭಾರಿ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರಿಂದ ರಕ್ಷಣೆಯೂ ಸಾಧ್ಯವಾಗದೇ ಗಾಯಾಳುಗಳು ನರಳಾಡಿದರು. ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟರು.


ಗಾಯಗೊಂಡವರನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ಯಲು ವ್ಯವಸ್ಥೆ ಇರಲಿಲ್ಲ. ಆಂಬುಲೆನ್ಸ್ ಇಲ್ಲದೆ ಗಾಯಾಳುಗಳನ್ನು ಪೊಲೀಸರು ಕೈಯಲ್ಲೇ ಎತ್ತಿಕೊಂಡು ಹೋಗಿ ರಕ್ಷಣೆ ಮಾಡಲು ಮುಂದಾದರು. ಆಸ್ಪತ್ರೆಗೆ ಕರೆದೊಯ್ಯುವ ದಾರಿ ಮಧ್ಯೆ ಬಾಲಕ ಮೃತಪಟ್ಟರೆ, ಉಳಿದವರು ಆಸ್ಪತ್ರೆಯಲ್ಲಿ ಮೃತಪಟ್ಟರು. ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ವಿಧಾನಸೌಧದ ಆವರಣಕ್ಕೆ ನಿರೀಕ್ಷೆಗೂ ಮೀರಿ ಅಭಿಮಾನಿಗಳು ಬಂದಿದ್ದರು.

12ನೇ ಪುಟ ನೋಡಿ



ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಿಕ್ಕಿರಿದು ಸೇರಿದ್ದ ಆರ್‌ಸಿಬಿ ಅಭಿಮಾನಿಗಳನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು ಚಿತ್ರ: ಪುಷ್ಕರ್ ವಿ.

ಕಾಲ್ತುಳಿತ ಎಲ್ಲಿ?



ಪೂರ್ವಸಿದ್ಧತೆ ಮಾಡಿಕೊಳ್ಳದಿರುವುದು ಮತ್ತು ಯಾವುದೇ ಮುನ್ನೆಚ್ಚರಿಕೆ ವಹಿಸದಿರುವುದೇ ಈ ಮಹಾದುರಂತಕ್ಕೆ ಕಾರಣ. ದುರಂತದ ಹೊಣೆಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರವೇ ಹೊತ್ತುಕೊಳ್ಳಬೇಕು

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಕಾಂಗ್ರೆಸ್ ಸರ್ಕಾರದ ವಿವೇಚನಾರಹಿತ ದುರಾಡಳಿತ ಅಮಾಯಕ ಜೀವಗಳನ್ನು ಬಲಿ ತೆಗೆದುಕೊಂಡಿದೆ. ಆರ್‌ಸಿಬಿ ತಂಡದ ಗೆಲುವಿನಲ್ಲಿ ಕ್ರೆಡಿಟ್ ಪಡೆಯಲು ಹೋಗಿ ಅನಾಹುತ ಮಾಡಿದೆ

ಆರ್. ಅಶೋಕ

ವಿಧಾನಸಭೆ ವಿರೋಧ ಪಕ್ಷದ ನಾಯಕ

ತಲಾ ₹10 ಲಕ್ಷ ಪರಿಹಾರ'

ಬೆಂಗಳೂರು: 'ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ರಾತ್ರಿ ಮಾತನಾಡಿದ ಅವರು, 'ಘಟನೆಯಲ್ಲಿ 47 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ' ಎಂದರು. 'ಈ ದುರಂತದ ಬಗ್ಗೆ ಮ್ಯಾಜಿಸ್ಟ್ರೀಯಲ್ ತನಿಖೆಗೆ ಆದೇಶ ನೀಡಲಾಗಿದೆ. 15 ದಿನಗಳ ಒಳಗೆ ತನಿಖಾ ವರದಿ ಸಲ್ಲಿಸಲು ತಿಳಿಸಲಾಗಿದೆ. ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಮುಖ್ಯಮಂತ್ರಿ ಅವರು ಹೇಳಿಕೆ ನೀಡಿದ ಬೆನ್ನಹಿಂದೆಯೇ ಮ್ಯಾಜಿಸ್ಟ್ರೀಯಲ್ ವಿಚಾರಣಾಧಿಕಾರಿಯನ್ನಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಅವರನ್ನು ನೇಮಿಸಿ ಆದೇಶ ಹೊರಬಿತ್ತು.

ಸಾವಿನ ಮನೆಯ ಬಾಗಿಲು ತೆರೆದ ಕಾರಣಗಳೇನು?

- ಮಧ್ಯಾಹ್ನ 1.30ರವರೆಗೂ ಮೆಟ್ರೊ ನಿಲ್ದಾಣಗಳಲ್ಲಿ, ಮೆಟ್ರೊ ರೈಲಿನಲ್ಲಿ, ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜನಸಂದಣಿ ಸಾಮಾನ್ಯವಾಗಿಯೇ ಇತ್ತು. 'ಆರ್‌ಸಿಬಿ ತಂಡದ ಆಟಗಾರರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬರುತ್ತಾರೆ', 'ಅವರನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವಾಗತಿಸುತ್ತಾರೆ', 'ವಿಧಾನಸೌಧದಲ್ಲಿ ಅವರನ್ನು ಸನ್ಮಾನಿಸಲಾಗುತ್ತದೆ', 'ಅಲ್ಲಿಂದ ತೆರೆದ ಬಸ್‌ನಲ್ಲಿ ಅವರ ಮೆರವಣಿಗೆ ನಡೆಯುತ್ತದೆ' ಎಂಬ ಮಾಹಿತಿ ಸುದ್ದಿವಾಹಿನಿಗಳಲ್ಲಿ ಬಿತ್ತರವಾಯಿತು. ಮಧ್ಯಾಹ್ನ 2ರ ವೇಳೆಗೆ ಜನರು ಈ ಸ್ಥಳಗಳತ್ತ ದೌಡಾಯಿಸಲಾರಂಭಿಸಿದರು.
- ಭದ್ರತೆ ಕಾರಣಕ್ಕೆ ತೆರೆದ ಬಸ್‌ನಲ್ಲಿ ಮೆರವಣಿಗೆ ನಡೆಸಲಾಗುವುದಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು. ಕೆಲವೇ ನಿಮಿಷಗಳಲ್ಲಿ ಮೆರವಣಿಗೆ ರದ್ದಾಗಿದೆ ಎಂಬ ಸುದ್ದಿ ಹರಿದಾಡಿತು. ವಿರೋಧ ಪಕ್ಷಗಳ ಅಧಿಕೃತ 'ಎಕ್ಸ್' ಖಾತೆಯಲ್ಲಿ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಪೋಸ್ಟ್ ಮಾಡಲಾಯಿತು. ಮೆರವಣಿಗೆ ನಡೆಯುತ್ತದೆಯೇ ಅಥವಾ ಇಲ್ಲವೇ ಎಂಬ ಗೊಂದಲ ಮುಂದುವರಿದ ಕಾರಣ, ಆಟಗಾರರನ್ನು ಕಣ್ತುಂಬಿಕೊಳ್ಳಲು ಬಹುತೇಕ ಅಭಿಮಾನಿಗಳು ಚಿನ್ನಸ್ವಾಮಿ ಕ್ರೀಡಾಂಗಣದತ್ತ ಬರಲಾರಂಭಿಸಿದರು.
- ಕ್ರೀಡಾಂಗಣಕ್ಕೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂಬ ಮಾಹಿತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಅದರ ಬೆನ್ನಲ್ಲೇ ಆರ್‌ಸಿಬಿಯ ಅಧಿಕೃತ ಎಕ್ಸ್ ಖಾತೆಯಲ್ಲೂ, 'ಉಚಿತ ಪ್ರವೇಶ. ಆದರೆ ಸೀಮಿತ ಆಸನಗಳು' ಎಂದು ಪೋಸ್ಟ್ ಮಾಡಲಾಯಿತು. ಈ ಮಧ್ಯೆ ಕ್ರೀಡಾಂಗಣದತ್ತ ಅಭಿಮಾನಿಗಳು ನುಗ್ಗಿದರು.
- ಕ್ರಿಕೆಟ್ ಜೀನಿ ಆ್ಯಪ್‌ನಲ್ಲಿ ಕ್ರೀಡಾಂಗಣ ಪ್ರವೇಶದ ಟಿಕೆಟ್ ಖರೀದಿಸಬಹುದು ಎಂಬ ಮಾಹಿತಿ ಸಂಜೆ 5ರ ವೇಳೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಆದರೆ ಆ್ಯಪ್ ಸರ್ವರ್ ಡೌನ್ ಆಗಿದ್ದರಿಂದ, ಕ್ರೀಡಾಂಗಣದ ಬಳಿ ಸಾಲುಗಟ್ಟಿ ನಿಂತಿದ್ದವರಲ್ಲಿ ಗೊಂದಲ ಉಂಟಾಯಿತು. ಹೀಗಾಗಿ ಹಲವರು ಕ್ರೀಡಾಂಗಣ ಪ್ರವೇಶಕ್ಕೆ ನೂಕುನುಗ್ಗಲು ಉಂಟಾಯಿತು.





ಕಾರ್ಯಕ್ರಮದಲ್ಲಿ ಎಂ.ಕೃಷ್ಣ ಅವರಿಗೆ 'ಎಂ.ಎಲ್ ಮಾದಯ್ಯ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪದ್ಮಿನಿ ನಾಗರಾಜು,ಕೆ.ಪಿ.ಪುತ್ತೂರಾಯ, ಮಹೇಶ ಜೋಶಿ, ಪಟೇಲ್ ಪಾಂಡು, ವೂಡೇ ಪಿ. ಕೃಷ್ಣ, ಎಸ್‌ರಾಮದಾಸ್ ಎಂ.ಎಲ್ ಮಾದಯ್ಯ ಹಾಗೂ ನೇ.ಭ. ರಾಮಲಿಂಗ ಶೆಟ್ಟಿ ಉಪಸ್ಥಿತರಿದ್ದರು

'ಸಮಯ ಸಾಧಕರನ್ನು ದೂರವಿಡಲಾಗುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಮಯ ಸಾಧಕರನ್ನು ದೂರವಿಟ್ಟು, ನೈಜ ಸಾಧಕರನ್ನು ಪುರಸ್ಕರಿಸುತ್ತಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಕಸಾಪ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೋಲಾರದ ಸಿವಿಲ್ ಎಂಜಿನಿಯರ್ ಎಂ.ಕೃಷ್ಣ ಅವರಿಗೆ 2025ನೇ ಸಾಲಿನ 'ಎಂ.ಎಲ್. ಮಾದಯ್ಯ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ವೇಳೆ ಮಾತನಾಡಿದ ಜೋಶಿ, 'ಪರಿಷತ್ತು ಸಾಹಿತ್ಯ ಕ್ಷೇತ್ರದಿಂದಾಚೆಗೂ ತನ್ನ ಸಾಂಸ್ಕೃತಿಕ ಸರಹದ್ದನ್ನು ವಿಸ್ತರಿಸಿಕೊಳ್ಳುತ್ತಿದೆ. ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದ ಸಾಧಕರಿಗೆ ನೀಡುವ ದತ್ತಿ ಪುರಸ್ಕಾರ ಅದಕ್ಕೆ ಸಾಕ್ಷಿ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ಈ ದತ್ತಿ ಪ್ರಶಸ್ತಿ ಸ್ಥಾಪಿಸಿದ ಎಂ.ಎಲ್. ಮಾದಯ್ಯ ಅವರು ರೈತರ ಬಗ್ಗೆ ಕಾಳಜಿ ಹೊಂದಿದ್ದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೋಲಾರ ಜಿಲ್ಲೆಯ ನೀರಿನ ಸಮಸ್ಯೆ ಬಗ್ಗೆ ವಿವರಿಸಿದ ಲೋಕೋಪಯೋಗಿ ಇಲಾಖೆ ನಿವೃತ್ತ ಮುಖ್ಯ ಎಂಜಿನಿಯರ್ ಎಸ್.ರಾಮದಾಸ್, ಎಂ.ಕೃಷ್ಣ ಅವರು ಜಿಲ್ಲೆಗೆ ನೀರು ಒದಗಿಸಲು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು.

ಶಿಕ್ಷಣ ತಜ್ಞ ಕೆ.ಪಿ. ಪುತ್ತೂರಾಯ, ದತ್ತಿದಾನಿ ಎಂ.ಎಸ್.ಮಾದಯ್ಯ, ಕಸಾಪ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗಶೆಟ್ಟಿ, ನಾಗರಾಜು, ಪದ್ಮಿನಿ ಪಟೇಲ್ ಪಾಂಡು, ಉಪಸ್ಥಿತರಿದ್ದರು.

'ಉಬುಂಟು' ಒಕ್ಕೂಟದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

16 ಸಾಧಕಿಯರಿಗೆ 'ವಾವ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಕೈಗಾರಿಕೋದ್ಯಮಿಗಳ ಒಕ್ಕೂಟ 'ಉಬುಂಟು' ಬುಧವಾರ ನಗರದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ನಟಿ ಉಮಾಶ್ರೀ, ರಂಗಕರ್ಮಿ ಬಿ.ಜಯಶ್ರೀ ಹಾಗೂ ಕಲಬುರಗಿಯ ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಸೇರಿ ವಿವಿಧ ಕ್ಷೇತ್ರಗಳ 16 ಸಾಧಕಿಯರಿಗೆ 'ವುಮೆನ್ ಆಫ್ ವರ್ತ್(ವಾವ್) 2025' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ನಿರ್ದೇಶಕ ನಿತೇಶ್ ಕೆ. ಪಾಟೀಲ್, 'ಸ್ಪರ್ಧಾತ್ಮಕ ಡಿಜಿಟಲ್ ಮಾರುಕಟ್ಟೆ ವ್ಯವಸ್ಥೆಯಲ್ಲಿ ಯಶಸ್ವಿಯಾಗಲು ಅಗತ್ಯವಿರುವ ಪರಿಕರಗಳನ್ನು ಮಹಿಳೆಯರ ನೇತೃತ್ವದ ಉದ್ಯಮಗಳಿಗೆ ಒದಗಿಸಲಾಗುತ್ತದೆ' ಎಂದು ತಿಳಿಸಿದರು.

ಉಬುಂಟು ಒಕ್ಕೂಟದ ಸ್ಥಾಪಕಿ ಕೆ.ರತ್ನಪ್ರಭಾ ಅವರು, ಡಿಜಿಟಲ್ ಕೌಶಲ ಮತ್ತು ಸ್ಪರ್ಧೆ ಹೆಚ್ಚಿಸಲು ಹೆಚ್ಚಿಸಲು 1,000 ಮಹಿಳಾ ಉದ್ಯಮಿಗಳಿಗೆ ನೂತನ ಡಿಜಿಟಲ್ ಮಾರ್ಕೆಟಿಂಗ್ ಕಾರ್ಯಕ್ರಮವನ್ನು ಆಯೋಜಿಸುವುದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ಸೈಬರ್ ಸುರಕ್ಷತೆ, ಇ-ಕಾಮರ್ಸ್ ಮತ್ತು ವ್ಯವಹಾರ ಜಾಲಗಳ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಅಸೋಸಿಯೇಷನ್ ಆಫ್ ಬಿಸಿನೆಸ್ ವುಮೆನ್ ಇನ್ ಕಾಮರ್ಸ್(ಎಬಿಡಬ್ಲ್ಯುಸಿಐ) ಸಮಾಲೋಚಕ ಸಂಸ್ಥಾಪಕಿ ಮತ್ತು ಪ್ರಧಾನ ಕಾರ್ಯದರ್ಶಿ ಪಾರುಲ್ ಸೋನಿ ಅವರು, 'ಮಹಿಳೆಯರು ನಡೆಸುವ ಉದ್ಯಮಗಳಿಗೆ ಅವಕಾಶಗಳನ್ನು ಸೃಷ್ಟಿಸುವಲ್ಲಿ ಇ-ಪ್ಲಾಟ್‌ಫಾರ್ಮ್‌ಗಳ ಪಾತ್ರವನ್ನು ವಿವರಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜ್‌ಕುಮಾರ್ ಖತ್ರಿ ಮಾತನಾಡಿದರು. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಮಳಿಗೆಗಳಿದ್ದವು. ಗೋವಾ, ಮಹಾರಾಷ್ಟ್ರ, ಮಧ್ಯಪ್ರದೇಶ, ಅಸ್ಸಾಂ ಮತ್ತು ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ 300 ಪ್ರತಿನಿಧಿಗಳು ಭಾಗವಹಿಸಿದ್ದರು.



ಕಾರ್ಯಕ್ರಮದಲ್ಲಿ ನಟಿ ಉಮಾಶ್ರೀ, ರಂಗಕರ್ಮಿ ಬಿ.ಜಯಶ್ರೀ, ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಸೇರಿ ವಿವಿಧ ಕ್ಷೇತ್ರಗಳ 16 ಸಾಧಕಿಯರಿಗೆ 'ವಾವ್' ಪ್ರಶಸ್ತಿ ನೀಡಿ ಗೌರವಿಸಲಾಯಿತು

28ಕ್ಕೆ ನಿಮ್ಹಾನ್ಸ್‌ನಲ್ಲಿ ನಡಿಗೆ



ನಿಮ್ಹಾನ್ಸ್

ಬೆಂಗಳೂರು: ಮಾನಸಿಕ ಆರೋಗ್ಯ ಹಾಗೂ ರೋಗಿಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 28ಕ್ಕೆ 'ವಾಕಿಂಗ್ ಟೂರ್ ಆಫ್ ನಿಮ್ಹಾನ್ಸ್' ಅಭಿಯಾನ ಹಮ್ಮಿಕೊಂಡಿದೆ.

ಬೆಳಿಗ್ಗೆ 8.45ಕ್ಕೆ ಸಂಸ್ಥೆಯ ಡಾ.ಎಂ.ವಿ. ಗೋವಿಂದಸ್ವಾಮಿ ಕೇಂದ್ರದಲ್ಲಿ ನಡಿಗೆ ಪ್ರಾರಂಭವಾಗಲಿದೆ. 300 ಎಕರೆ ವಿಸ್ತೀರ್ಣ ಹೊಂದಿರುವ ನಿಮ್ಹಾನ್ಸ್ ಕ್ಯಾಂಪಸ್‌ನ ವಿಶೇಷತೆಗಳನ್ನು ಸಂಸ್ಥೆಯ ವೈದ್ಯರು ಪರಿಚಯ ಮಾಡಿಸಲಿದ್ದಾರೆ. ಸಂಸ್ಥೆಯು 2019ರಿಂದ ಈ ಅಭಿಯಾನ ನಡೆಸುತ್ತಿದೆ.

ಮಾನಸಿಕ ರೋಗಿಗಳ ಸಾಮಾನ್ಯ ವಾರ್ಡ್, ವಿಶೇಷ ವಾರ್ಡ್‌ಗಳನ್ನು ವೀಕ್ಷಿಸಬಹುದು. ವೈದ್ಯರು, ರೋಗಿಗಳ ಜೊತೆಗೆ ಸಮಾಲೋಚನೆ ನಡೆಸಬಹುದು. ಚಿಕಿತ್ಸೆ ಕುರಿತು ಮಾಹಿತಿ ಪಡೆಯ ಬಹುದಾಗಿದೆ. ಮಾನಸಿಕ ರೋಗಿಗಳ ಪುನರ್ವಸತಿ ಕೇಂದ್ರ, ಚಿಕಿತ್ಸಾ ವಿಭಾಗ, ಮ್ಯೂಸಿಯಂ, ಯೋಗ ಸೇರಿದಂತೆ ವಿವಿಧ ಕೇಂದ್ರಗಳ ಪರಿಚಯ ಮಾಡಿಕೊಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.

'ಮಾನಸಿಕ ಅಸ್ವಸ್ಥತೆಯಿಂದ ಬಳಲುವ ಜನರನ್ನು ಮೊದಲಿನಿಂದಲೂ ದೇಶದಲ್ಲಿ ಕಳಂಕಿತರಂತೆ ನೋಡಲಾಗುತ್ತಿದೆ. ಇದಕ್ಕೆ ಅರಿವಿನ ಕೊರತೆಯೇ ಮುಖ್ಯ ಕಾರಣ. ಆದ್ದರಿಂದ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಸೀಮಿತ ಜನರಿಗೆ ಮಾತ್ರ ಅವಕಾಶ ಇರಲಿದ್ದು, ಹೆಸರು ನೋಂದಣಿಗೆ ಇದೇ 16 ಕಡೆಯ ದಿನಾಂಕವಾಗಿದೆ. ನೋಂದಣಿ ಶುಲ್ಕ ₹500 ನಿಗದಿಪಡಿಸಲಾಗಿದೆ' ಎಂದು ಸಂಸ್ಥೆ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

ದೂರವಾಣಿ ಸಂಪರ್ಕಕ್ಕೆ: 080 26995156

'ಸುಳ್ಳು ಪ್ರಕರಣಗಳನ್ನು ಹಿಂಪಡೆಯಲಿ'

ಬೆಂಗಳೂರು: ರಾಜ್ಯ ಸರ್ಕಾರ ಹಿಂದೂ ಕಾರ್ಯಕರ್ತರ ಮೇಲೆ ದಾಖಲಿಸುತ್ತಿರುವ ಸುಳ್ಳು ಪ್ರಕರಣಗಳನ್ನು ಕೂಡಲೇ ಹಿಂಪಡೆದುಕೊಳ್ಳಬೇಕು ಎಂದು ವಿಶ್ವ ಹಿಂದೂ ಪರಿಷದ್ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷದ್ ಅಧ್ಯಕ್ಷ ದೀಪಕ್ ರಾಜ್‌ಗೋಪಾಲ್, ಪ್ರಾಂತ ಕಾರ್ಯದರ್ಶಿ ಜಗನ್ನಾಥ್ ಶಾಸ್ತ್ರಿ, 'ಹಿಂದೂ ಧರ್ಮದ ಸಂಸ್ಕೃತಿಯನ್ನು ರಕ್ಷಣೆ ಮಾಡುತ್ತಿರುವ ಹಿಂದೂ ಕಾರ್ಯಕರ್ತರ ಮೇಲೆ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ. ಪೊಲೀಸರ ಮೂಲಕ ದೌರ್ಜನ್ಯ ಮಾಡುತ್ತಿರುವುದು ಖಂಡನೀಯ ಎಂದರು.

'ಹಿಂದೂ ಕಾರ್ಯಕರ್ತರ ಮನೆ ಮೇಲೆ ದಾಳಿ ಮಾಡುತ್ತಿರುವ ಪೊಲೀಸ್ ಅಧಿಕಾರಿಗಳ ವಿರುದ್ಧವೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಪ್ಲಾಸ್ಟಿಕ್ ನಿಯಂತ್ರಣಕ್ಕೆ ತುರ್ತು ಕ್ರಮ ಅಗತ್ಯ'

ಪ್ರಜಾವಾಣಿ ವಾರ್ತೆ

ಯಲಹಂಕ: ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವ ಸಂಕಲ್ಪದೊಂದಿಗೆ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇಂಡಿಯನ್ ಎಕನಾಮಿಕ್ ಟ್ರೇಡ್ ಆರ್ಗನೈಸೇಶನ್(ಐಇಟಿಒ) ಮತ್ತು ಮಣಿಪಾಲ್ ಸೆಂಟರ್ ಫಾರ್ ದ್ವೀಪ ಸಂಸ್ಥೆಯ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಗಿಡನೆಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿಯ ಕುಲಪತಿ ಪ್ರೊ.ಮಧು ವೀರರಾಘವನ್, 'ಪ್ರತಿ ವರ್ಷ ವಿಶ್ವದಾದ್ಯಂತ 40 ಕೋಟಿ ಟನ್‌ನಷ್ಟು ಪ್ಲಾಸ್ಟಿಕ್ ಉತ್ಪಾದನೆಯಾಗುತ್ತಿದೆ. ಇದರಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ನಿಯಂತ್ರಣಕ್ಕಾಗಿ ತಕ್ಷಣದ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ' ಎಂದರು.

'ಜವಾಬ್ದಾರಿಯುತ ವಿಶ್ವವಿದ್ಯಾಲಯವಾಗಿ ನಾವು ಶೂನ್ಯ-ತ್ಯಾಜ್ಯ ಪರಿಸರ ರೂಪಿಸುವುದಕ್ಕೆ ಬದ್ಧರಾಗಿದ್ದೇವೆ. ಕ್ಯಾಂಪಸ್‌ನಲ್ಲಿ ಪ್ಲಾಸ್ಟಿಕ್ ಬಾಟಲಿಗಳ ಬಳಕೆ ನಿಷೇಧಿಸಿದ್ದು, ಸುಸ್ಥಿರ ಪರ್ಯಾಯವಾಗಿ ಗಾಜಿನ ಬಾಟಲಿಗಳನ್ನು ಬಳಸಲು ಪ್ರಾರಂಭಿಸಿ ದ್ದೇವೆ. ವೇದಾಂತ ಸಂಸ್ಥೆಯ ಪಾಲುದಾರಿಕೆಯೊಂದಿಗೆ ಸಮಗ್ರ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸಿದ್ದೇವೆ ಎಂದು ತಿಳಿಸಿದರು.

ಭಾರತದಲ್ಲಿರುವ ಈಕ್ವೆಡಾರ್‌ನ ರಾಯಭಾರಿ ಫರ್ನಾಂಡೋ ಬುಚೆಲಿ ಮಾತನಾಡಿದರು. ಮಣಿಪಾಲ್ ಸೆಂಟರ್ ಫಾರ್ ದ್ವೀಪ ಸಂಸ್ಥೆಯ ಪ್ರೊ.ದೀಪ್ತಾ ಸತೀಶ್, ಐಐಎಂನ ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ ಕೇಂದ್ರದ ಅಧ್ಯಕ್ಷ ಪ್ರೊ. ಎಂ.ವಿ.ರಾಜೀವ್‌ಗೌಡ, ಐಇಟಿಒ ಅಧ್ಯಕ್ಷ ಡಾ.ಆಸಿಫ್ ಇಕ್ಬಾಲ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ನಡೆದ ಸಂವಾದದಲ್ಲಿ ಯೂನಿಫೈಡ್ ಇಂಟೆಲಿಜೆನ್ಸ್ ಪ್ರೈ. ಲಿಮಿಟೆಡ್‌ನ ಸಹ-ಸಂಸ್ಥಾಪಕ ಟಿ.ಪಾಲ್ ಕೋಶಿ, ಸಮುದ್ರ ಆಹಾರ ಉದ್ಯಮ ತಜ್ಞ ದಾವೂದ್ ಸೇಟ್, ಶಿಕ್ಷಣ ತಜ್ಞೆ ಮೀರಾ ಬೈಂದೂರ್ ಹಾಗೂ ಪ್ರೊ.ಎಂ.ವಿ. ರಾಜೀವ್‌ಗೌಡ ಪ್ಲಾಸ್ಟಿಕ್ ನಿರ್ಮೂಲನೆಯ ವಿವಿಧ ವಿಚಾರಗಳನ್ನು ಹಂಚಿಕೊಂಡರು.



ಕಾರ್ಯಕ್ರಮದಲ್ಲಿ ಭಾರತದಲ್ಲಿರುವ ಈಕ್ವೆಡಾರ್‌ನ ರಾಯಭಾರಿ ಫರ್ನಾಂಡೋ ಬುಚೆಲಿ ಸಸಿನೆಟ್ಟರು. ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿಯ ಕುಲಪತಿ ಪ್ರೊ. ಮಧು ವೀರರಾಘವನ್, ಐಐಎಂನ ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ ಕೇಂದ್ರದ ಅಧ್ಯಕ್ಷ ಪ್ರೊ.ಎಂ.ವಿ.ರಾಜೀವ್‌ಗೌಡ ಹಾಜರಿದ್ದರು

ಸಂಕ್ಷಿಪ್ತ ಸುದ್ದಿ

ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ

ಬೆಂಗಳೂರು: ಮಾಗಡಿ ತಾಲ್ಲೂಕಿನ ಸೋಲೂರು ಆರ್ಯ ಈಡಿಗರ ಮಹಾಸಂಸ್ಥಾನದ ಆವರಣದಲ್ಲಿರುವ ಆರ್.ಎಲ್.ಜಾಲಪ್ಪಅಕಾಡೆಮಿ ವತಿಯಿಂದ ಪದವೀಧರ ಬಡ ಹಾಗೂ ಗ್ರಾಮೀಣ ಯುವಕ ಯುವತಿಯರಿಗಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೆ.ಎ.ಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳು ಉಚಿತ ತರಬೇತಿ ನೀಡಲಾಗುತ್ತದೆ. ಜೂನ್ 20ರಿಂದ ತರಬೇತಿ ಆರಂಭ ವಾಗುತ್ತದೆ. ಆಸಕ್ತರು www, rljacademy.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಆರ್. ಎಲ್.ಜಾಲಪ್ಪ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕ ಸಂಖ್ಯೆಗಳು: 9900606042, 9731480759, 7337705513, 7483314717.

'ಗಣತಿ ಅವಧಿ ವಿಸ್ತರಿಸಿ'

ಬೆಂಗಳೂರು: ಒಳಮೀಸಲಾತಿಗಾಗಿ ನಡೆಸುತ್ತಿರುವ ಪರಿಶಿಷ್ಟ ಜಾತಿಯ ಗಣತಿಯ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಲು ಆಲ್ ಇಂಡಿಯಾ ಬಹುಜನ ಪಾರ್ಟಿ ಆಗ್ರಹಿಸಿದೆ.

ನ್ಯಾ. ನಾಗಮೋಹನ್‌ದಾಸ್ ಏಕಸದಸ್ಯ ಆಯೋಗ ನಡೆಸುತ್ತಿರುವ ಗಣತಿಯು ಶೇ 70ರಷ್ಟು ಕೂಡ ಆಗಿಲ್ಲ. ಸದಾಶಿವ ಆಯೋಗದ ವರದಿ ತಯಾರಿಸಲು ಏಳು ವರ್ಷ ಜಾತಿ ಗಣತಿ ನಡೆಸಿದ್ದರು. ಹೀಗಿರುವಾಗ ಹತ್ತಿಪ್ಪತ್ತು ದಿನಗಳಲ್ಲಿ ಜಾತಿ ಗಣತಿ ಪೂರ್ಣಗೊಳಿಸಲು ಹೇಗೆ ಸಾಧ್ಯ ಎಂದು ಆಲ್ ಇಂಡಿಯಾ ಬಹುಜನ ಪಾರ್ಟಿಯ ಮಾರಸಂದ್ರ ಮುನಿಯಪ್ಪ ಪ್ರಶ್ನಿಸಿದ್ದಾರೆ.

ಮೊದಲು ಮೇ 5ರಿಂದ 17ರವರೆಗೆ ಸಮೀಕ್ಷೆಗೆ ಅವಕಾಶ ನೀಡಲಾಗಿತ್ತು. ಅದರಲ್ಲಿ 7–8 ದಿನಗಳು 'ಸರ್ವರ್ ಬ್ಯುಸಿ'ಯಲ್ಲೇ ಕಳೆದುಹೋಗಿದೆ. ಕೆಲವು ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ತರಬೇತಿ ಸಿಗದೇ ಗಣತಿ ನಿಧಾನವಾಗಿದೆ. ಮೇ 28ರವರೆಗೆ ಆ ನಂತರ ಜೂನ್ 6ರವರೆಗೆ ಅವಧಿ ವಿಸ್ತರಿಸಲಾಗಿದೆ. ಇದು ಸಾಲದು ಜೂನ್ ಅಂತ್ಯದವರೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಹಾಗೂ ಸಾಹಿತ್ಯ ಸಂಸ್ಕೃತಿ ವೇದಿಕೆಯ ವತಿಯಿಂದ ರಾಜ್ಯಮಟ್ಟದ ಬಂಜಾರ ಕಾವ್ಯ, ನಾಟಕ ಮತ್ತು ಸಾಹಿತ್ಯ ರಚನಾ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಕಲಾವಿದರು ಜೂನ್ 12ರೊಳಗೆ ಅರ್ಜಿ ಸಲ್ಲಿಸಬಹುದು. ಶೇಕಡ 80ರಷ್ಟು ಬಂಜಾರರು ಹಾಗೂ ಶೇ 20ರಷ್ಟು ಇತರೆ ಸಮುದಾಯದವರು ಭಾಗವಹಿಸಲು ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ರಿಜಿಸ್ಟ್ರಾರ್, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಕನ್ನಡ ಭವನ, ಒಂದನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು-560002. **ಮಾಹಿತಿಗೆ:** 080 29917745, 94480 29712.

ನಿಧನ ವಾರ್ತೆ

ಮುನಿಗಂಗಮ್ಮ



ಮುನಿಗಂಗಮ್ಮ

ನೆಲಮಂಗಲ: ಪಟ್ಟಣದ ಸುಭಾಷ್‌ನಗರ ನಿವಾಸಿ ಮುನಿಗಂಗಮ್ಮ(91) ಅವರು ವಯೋಸಹಜ ಅನಾರೋಗ್ಯದಿಂದ ಬುಧವಾರ ಮುಂಜಾನೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಮೃತರಿಗೆ ಪತಿ,ನಾಲ್ವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಸ್ವಗ್ರಾಮ ಬೆಟ್ಟಹಳ್ಳಿಯಲ್ಲಿ ಸಂಜೆ ಅಂತ್ಯಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು


ವಿಶ್ವ ಪರಿಸರ ದಿನಾಚರಣೆ: ಅತಿಥಿ: ಮಾಳವಿಕಾ ಅವಿನಾಶ್, ಅಧ್ಯಕ್ಷತೆ: ಡಿ. ಮಹೇಂದ್ರ, ಆಯೋಜನೆ ಮತ್ತು ಸ್ಥಳ: ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಯೋಗ ದಿನ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಜಿ. ಪರಮೇಶ್ವರ, ವಿ. ಸೋಮಣ್ಣ, ಎಚ್.ಆರ್. ನಾಗೇಂದ್ರ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಸಿ. ಭಗವಾನ್, ಡಾ. ವಿಜಯಲಕ್ಷ್ಮಿ ದೇಶಮಾನೆ, ಆಯೋಜನೆ: ಎಸ್–ವ್ಯಾಸ್, ಸ್ಥಳ: ರಾಯಲ್ ಸೆನೆಟ್, ಗೇಟ್ ಸಂಖ್ಯೆ–6, ಅರಮನೆ ಮೈದಾನ, ಮಧ್ಯಾಹ್ನ 12ರಿಂದ

ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸಂಪಾದಿಸಿದ 'ದೇವುಡು ಹೇಳಿದ ಮಕ್ಕಳ ಕಥೆಗಳು' ಐದು ಪುಸ್ತಕಗಳ ಬಿಡುಗಡೆ, 'ಮಲ್ಲೇಪುರಂ ಸಾಹಿತ್ಯ' ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಜಗದೀಶ ಶಿವಯ್ಯ ಗುಡಗುಂಟಿ, ಪುಸ್ತಕಗಳ ಬಿಡುಗಡೆ: ವೂಡೇ ಪಿ. ಕೃಷ್ಣ, ಪ್ರಶಸ್ತಿ ಪ್ರದಾನ: ಕುಂ. ವೀರಭದ್ರಪ್ಪ, ಪ್ರಶಸ್ತಿ ಸ್ವೀಕರಿಸುವವರು: ತಮಿಳ್ ಸೆಲ್ವಿ, ಅತಿಥಿಗಳು: ಪ್ರತಿಭಾ ನಂದಕುಮಾರ್, ಕೆ.ಜಿ. ಲಕ್ಷ್ಮೀನಾರಾಯಣ, ಆಯೋಜನೆ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಭರತನಾಟ್ಯ ಪ್ರದರ್ಶನ: ವೀಣಾ ನರ್ತನ ಶಾಲೆ ವಿದ್ಯಾರ್ಥಿಗಳು, ನಿರ್ದೇಶನ: ಆಕಾಶ್ ನರಸೀಪುರ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.30

'ಪು.ತಿ. ನರಸಿಂಹಾಚಾರ್ ವಿರಚಿತ ಶ್ರೀಹರಿ ಚರಿತೆ' ವಾಚನ ಮತ್ತು ವ್ಯಾಖ್ಯಾನ: ಆಕಾಶ್ ಹಲ್ಕೋಡು, ಆದಿತ್ಯ ಹಲ್ಕೋಡು, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30



ಎಚ್ಚೆಸ್ವಿ

ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ರಂಗ ನಮನ: ಭಾಗವಹಿಸುವವರು: ಬಿ.ಆರ್. ಲಕ್ಷ್ಮಣರಾವ್, ವಸುಧೇಂದ್ರ, 'ಕಂಸಾಯಣ' ನಾಟಕ ಪ್ರದರ್ಶನ, ಆಯೋಜನೆ: ತಾರ ಅರೇನಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ದಾಸ ವೈಭವ: ಗಾಯನ: ಭುವನಾ, ಪ್ರೇರಣಾ, ಪಿಟೀಲು: ಅಭಿರಾಮ್ ಭಟ್, ಮೃದಂಗ: ಕೃಷ್ಣ ವೇದಾಂತ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಬೆಂಗಳೂರಿನಲ್ಲಿ ನಡೆದ ವಿಜಯೋತ್ಸವದ ಸಂದರ್ಭದಲ್ಲಿ ಎಂ ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಲೂ ಅಪಾರ ಸಂಖ್ಯೆಯ ಜನರು ಸೇರಿದ್ದರು. ನಿಯಂತ್ರಿಸಲು ಪೊಲೀಸರು ಪರದಾಡಿದರು ಚಿತ್ರ: ಪ್ರಶಾಂತ್ ಎಚ್.ಜಿ.

ಅಳಲು ತೋಡಿಕೊಂಡ ಗೃಹ ರಕ್ಷಕ ದಳದ ಸಿಬ್ಬಂದಿ

‘ಜಂಗುಳಿ...ಮಾಡೋದೇನು?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್, ಇಲ್ಲಿ ಇಷ್ಟೊಂದು ಜನರಿದ್ದಾರೆ. ಇವರನ್ನೆಲ್ಲಾ ನಿಯಂತ್ರಿಸೋದು ಹೇಗೆ? ನೀವು ನಮ್ಮನ್ನು ಬಿಟ್ಟು ಹೋಗಬೇಡಿ. ನಾನಿಲ್ಲೇ ಅಳುತ್ತಾ ಕೂತುಬಿಡುತ್ತೇನೆ’... ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಭದ್ರತೆಗೆ ನಿಯೋಜಿತರಾಗಿದ್ದ ಗೃಹ ರಕ್ಷಕ ದಳದ ಮಹಿಳಾ ಸಿಬ್ಬಂದಿಯೊಬ್ಬರು ತನ್ನ ಹಿರಿಯ ಸಹೋದ್ಯೋಗಿ ಬಳಿ ಅಲವತ್ತುಕೊಂಡ ಬಗೆ ಇದು.

ನೂಕುನುಗ್ಗಲು, ಕಾಲ್ತುಳಿತದಲ್ಲಿ ಗಾಯಗೊಂಡವರನ್ನು ಹೊತ್ತು ಸಾಗುತ್ತಿದ್ದ ಆಂಬುಲೆನ್ಸ್‌ಗಳಿಗೆ ದಾರಿ ಮಾಡಿಕೊಡಲು ಹರಸಾಹಸ ಮಾಡುತ್ತಿದ್ದ ಪೊಲೀಸರ ನೆರವಿಗೆಂದು ಗೃಹ ರಕ್ಷಕ ದಳದ ತಂಡವೊಂದನ್ನು ನಿಯೋಜಿಸಲಾಗಿತ್ತು. ಎಂ.ಜಿ.ರಸ್ತೆಯ ಕಾವೇರಿ ಎಂಪೋರಿಯಂ ಬಳಿಯಿಂದ ಪರಸ್ಪರ ಕೈಹಿಡಿದುಕೊಂಡೇ ಸಾಗಿಬಂದಿದ್ದ ಈ ತಂಡದ ಬಹುತೇಕ ಸದಸ್ಯರು ಗಾಬರಿಗೊಂಡಿದ್ದರು.

ಅವರಲ್ಲೊಬ್ಬರನ್ನು ಮಾತಿಗೆ ಎಳೆದಾಗ, ‘ನಮ್ಮನ್ನು ಈವರೆಗೆ ಇಂತಹ ದೊಡ್ಡ ‘ಡ್ಯೂಟಿ’ಗೆ ನಿಯೋಜಿಸಿರಲಿಲ್ಲ. ನಮ್ಮಲ್ಲಿ ಎಷ್ಟೋ ಜನ ಎಂ.ಜಿ.ರಸ್ತೆಯನ್ನೇ ನೋಡಿಲ್ಲ. ಈಗ ದಿಢೀರ್ ಎಂದು ನಮ್ಮನ್ನು ಇಲ್ಲಿಗೆ ಕರೆಸಿದ್ದಾರೆ’ ಎಂದರು.

‘ಭದ್ರತಾ ಲೋಪ’: ದುರಂತದ ಬಗ್ಗೆ ಪ್ರಶ್ನಿಸಿದಾಗ ಬಹುತೇಕ ಮಂದಿ, ‘ಇದು ಭದ್ರತಾ ವೈಫಲ್ಯ. ಸರ್ಕಾರ ಸರಿಯಾದ ವ್ಯವಸ್ಥೆ ಮಾಡಬೇಕಿತ್ತು’ ಎಂದೇ ಉತ್ತರಿಸಿದರು.

ಜಯನಗರ 4ನೇ ಬ್ಲಾಕ್‌ನ ನಿವಾಸಿ ತೇಜಸ್, ‘ಎಷ್ಟು ಟಿಕೆಟ್ ಇರಲಿದೆ, ಎಷ್ಟು ಮಾರಾಟವಾಗಿದೆ, ಎಷ್ಟು ಜನ ಬರಬಹುದು ಎಂದು ಸರ್ಕಾರ ಮಾಹಿತಿ ನೀಡಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ. ಇಲ್ಲಿ ನೋಡಿದರೆ ಜನಸಾಗರವೇ ಇದೆ. ನಾನು ಬಸ್ಸೂ ಹತ್ತುವುದಿಲ್ಲ, ಮೆಟ್ರೊಗೂ ಹೋಗುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟು ದೂರ ನಡೆದುಕೊಂಡೇ ಹೋಗುತ್ತೇನೆ’ ಎಂದರು.

ಎಂಜಿನಿಯರಿಂಗ್ ವಿದ್ಯಾರ್ಥಿ ಮೋಹನ್, ‘ಆರ್‌ಸಿಬಿ ವಿಜಯೋತ್ಸವದಲ್ಲಿ ಲಕ್ಷಾಂತರ ಜನರು ಭಾಗವಹಿಸುತ್ತಾರೆ ಎಂಬುದು ಎಲ್ಲರಿಗೂ ತಿಳಿದಿತ್ತು. ಆದರೆ, ರಾಜ್ಯ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದ ಕಾರಣ, ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿದೆ. ಜನ ಮಧ್ಯಾಹ್ನದ ವೇಳೆಗೆ ವಿಧಾನಸೌಧದ ಮುಂಭಾಗ ಹಾಗೂ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಲಕ್ಷಾಂತರ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದು ನಿರ್ಲಕ್ಷ್ಯದಿಂದ ಸಂಭವಿಸಿದ ದುರಂತ’ ಎಂದರು.

‘ಸೆಲಬ್ರೇಟ್ ಮಾಡಬೇಕಲ್ಲಾ’: ಸಂಜೆ ಆರರ ವೇಳೆಗೆ ಯುವಕರಿಬ್ಬರು ಕ್ರೀಡಾಂಗಣದತ್ತ ಸಂಭ್ರಮದಲ್ಲಿ ಹೆಜ್ಜೆ ಹಾಕುತ್ತಿದ್ದರು. ‘ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಇಷ್ಟು ದಟ್ಟಣೆಯ ಮಧ್ಯೆ ನೀವು ಅಲ್ಲಿಗೆ ಹೋಗುತ್ತಿದ್ದೀರಲ್ಲಾ’ ಎಂದು ಪ್ರಶ್ನಿಸಿದಾಗ, ‘ಆರ್‌ಸಿಬಿ ಗೆದ್ದಿದೆಯಲ್ಲಾ. ಸೆಲಬ್ರೇಟ್ ಮಾಡಬೇಕು’ ಎಂದು ಮುಂದೆ ಹೋದರು.

ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ವಿಜಯೋತ್ಸವದ ನಂತರ ಹೊರಬಂದ ಯುವಕನನ್ನು ಮಾತನಾಡಿಸಿದಾಗ, ‘ನಾನಂತೂ ಕಾರ್ಯಕ್ರಮವನ್ನು ಚೆನ್ನಾಗಿ ಎಂಜಾಯ್ ಮಾಡಿದೆ. 11 ಜನ ಸತ್ತುಹೋದರಂತೆ. ಏನು ಮಾಡಲಾಗುತ್ತದೆ’ ಎಂದು ಮರುಪ್ರಶ್ನೆ ಹಾಕಿದೆ.

ನಾನು ಮತ್ತು ನನ್ನ ಸ್ನೇಹಿತರು ಚಿಕ್ಕಬಳ್ಳಾಪುರದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವವನ್ನು ವೀಕ್ಷಿಸಲು ಬಂದಿದ್ದೆವು. ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಲಕ್ಷಾಂತರ ಜನ ಸೇರಿದ್ದರು. ನಾವು ಕ್ರೀಡಾಂಗಣದ ಒಳಗಡೆ ಪ್ರವೇಶಿಸುವ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಗಿ, ನನ್ನ ಕಾಲಿನ ಮೇಲೆ ಬ್ಯಾರಿಕೇಡ್ ಬಿದ್ದು, ಗಾಯವಾಗಿತ್ತು. ನನ್ನ ಸ್ನೇಹಿತರು ಆಸ್ಪತ್ರೆಗೆ ಕರೆದುಕೊಂಡು ಬಂದು, ಚಿಕಿತ್ಸೆ ಕೊಡಿಸಿದ್ದಾರೆ. ಈ ವಿಜಯೋತ್ಸವದಲ್ಲಿ ಲಕ್ಷಾಂತರ ಜನ ಭಾಗವಹಿಸಿದ್ದರು. ಆದರೆ, ಯಾವುದೇ ರೀತಿಯ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳದ ಕಾರಣ ಈ ದುರಂತವಾಗಿದೆ.

ಮಂಜುನಾಥ್, ಚಿಕ್ಕಬಳ್ಳಾಪುರ

ಆರ್‌ಸಿಬಿ ತಂಡದ ಗೆಲುವಿನ ಸಂಭ್ರಮಾಚರಣೆಗೆ ಸಾವಿರಾರು ಜನರು ಸೇರುವುದನ್ನು ರಾಜ್ಯ ಸರ್ಕಾರ ಅಂದಾಜಿಸಿ ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲ್ಲದ ಪರಿಣಾಮ 11 ಮಂದಿ ಮೃತಪಟ್ಟಿದ್ದಾರೆ. ಭದ್ರತಾ ವೈಫಲ್ಯದಿಂದಲೇ ಈ ಕಾಲ್ತುಳಿತ ಸಂಭವಿಸಿದೆ.

ಕಿರಣ್, ಶಿವಾಜಿನಗರ

ಐಪಿಎಲ್ ವಿಜಯೋತ್ಸವ ಶಾಲಾ ಮಕ್ಕಳ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ಕಾರಣ ಸಂಚಾರ ದಟ್ಟಣೆ ಉಂಟಾಯಿತು. ಶಾಲಾ ವಾಹನಗಳ ಚಾಲಕರು ನಿಗದಿತ ಸಮಯಕ್ಕೆ ಮಕ್ಕಳನ್ನು ಮನೆಗೆ ತಲುಪಿಸಲು, ಪೋಷಕರು ಮಕ್ಕಳನ್ನು ಕರೆದುಕೊಂಡು ಹೋಗಲು ಪರದಾಡಿದರು.

ಸಂಚಾರ ದಟ್ಟಣೆ ಪರಿಗಣಿಸಿ, ನಗರದ ಹಲವು ಶಾಲೆಗಳು ಮಧ್ಯಾಹ್ನದ ಬಳಿಕ ರಜೆ ಘೋಷಿಸಿ, ಮಕ್ಕಳನ್ನು ಬೇಗನೆ ಮನೆಗೆ ಕಳುಹಿಸಿದರೂ, ವಾಹನಗಳು ರಸ್ತೆಯಲ್ಲಿ ಸಾಗಲು ಪ್ರಯಾಸ ಪಡಬೇಕಾಯಿತು.

ಬಿಷಪ್ ಕಾಟನ್ ಗ್ರೂಪ್ ಶಾಲೆಗಳು, ಸೇಂಟ್ ಜೋಸೆಫ್ ಶಾಲೆ ಮತ್ತು ಕಾಲೇಜು, ಸೋಫಿಯಾ ಪ್ರೌಢಶಾಲೆ ಮತ್ತು ಕ್ಯಾಥೆಡ್ರಲ್ ಶಾಲೆ ಸೇರಿದಂತೆ ಹಲವು ಶಾಲಾ ಆಡಳಿತ ಮಂಡಳಿಗಳು ಮಧ್ಯಾಹ್ನದ ವೇಳೆಗೆ ಮಕ್ಕಳನ್ನು ಕರೆದುಕೊಂಡು ಹೋಗುವಂತೆ ಪೋಷಕರಿಗೆ ಸಂದೇಶಗಳನ್ನು ಕಳುಹಿಸಿದ್ದವು. ಕೆಲವೆಡೆ ಪೊಲೀಸರೇ ಶಾಲೆಗಳನ್ನು ಬೇಗನೆ ಬಂದ್ ಮಾಡುವಂತೆ ಸೂಚನೆ ನೀಡಿದ್ದರು.

ತಡೆಗೋಡೆಗೆ ಬೈಕ್ ಡಿಕ್ಕಿ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನವೊಂದು ನಿಯಂತ್ರಣ ತಪ್ಪಿ ರಸ್ತೆ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಹಾಗೂ ಹಿಂಬದಿ ಸವಾರ ಮೃತಪಟ್ಟಿದ್ದಾರೆ.

ಅಸ್ಸಾಂನ ಅರ್ಜುನ್(26) ಮತ್ತು ದ್ರೋಣ್ ಬಹದ್ದೂರ್ (25) ಮೃತಪಟ್ಟವರು.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊಡಿಗೇಹಳ್ಳಿ ಮೇಲ್ಸೇತುವೆ ಡೌನ್ ರ‍್ಯಾಂಪ್ ಬಳಿ ಈ ದುರ್ಘಟನೆ ನಡೆದಿದೆ.

ಮೃತ ಸವಾರರು ಸ್ನೇಹಿತರಾಗಿದ್ದು, ನಗರದ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಕೊಡಿಗೇಹಳ್ಳಿ ಮೇಲ್ಸೇತುವೆ ಡೌನ್ ರ‍್ಯಾಂಪ್ ಬಳಿ ಹೋಗುವಾಗ ನಿಯಂತ್ರಣ ತಪ್ಪಿ ರಸ್ತೆಬದಿಯ ತಡೆಗೋಡೆಗೆ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ದ್ವಿಚಕ್ರ ವಾಹನ ಸಹಿತ ರಸ್ತೆಗೆ ಬಿದ್ದ ಸವಾರರಿಬ್ಬರೂ ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಇಬ್ಬರೂ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

‘ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ’ ಎಂದು ಪೊಲೀಸರು ಹೇಳಿದರು. ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿಚಕ್ರ ವಾಹನ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಬಳ್ಳಾರಿ ರಸ್ತೆಯ ಸರ್ವಿಸ್ ರಸ್ತೆಯ ಯಶೋಧರ ನಗರ ಕ್ರಾಸ್ ಬಳಿ ಕಾರು ಹಾಗೂ ದ್ವಿಚಕ್ರ ವಾಹನ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಮೃತಪಟ್ಟಿದ್ದಾರೆ.

ಕೊಡಿಗೇಹಳ್ಳಿ ನಿವಾಸಿ ಅರುಣ್(25) ಮೃತ ಸವಾರ. ಬುಧವಾರ ನಸುಕಿನ ವೇಳೆ ಅಪಘಾತ ನಡೆದಿದೆ. ಮೃತ ಸವಾರ ಅರುಣ್ ತಮ್ಮ ದ್ವಿಚಕ್ರ ವಾಹನದಲ್ಲಿ ಬರುವಾಗ ಹಿಂದಿನಿಂದ ವೇಗವಾಗಿ ಬಂದ ಕಾರೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ದ್ವಿಚಕ್ರ ವಾಹನ ಸಹಿತ ರಸ್ತೆಗೆ ಬಿದ್ದ ಅರುಣ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ಚಾಲಕ ಪರಾರಿಯಾಗಿದ್ದಾನೆ.

ಕಾರು ಚಾಲಕನ ಪತ್ತೆಗೆ ಘಟನಾ ಸ್ಥಳದ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೆಟ್ರೊದಲ್ಲಿ 8.7 ಲಕ್ಷ ಜನರ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ರೈಲುಗಳಲ್ಲಿ ಬುಧವಾರದಂದು ರಾತ್ರಿ 9 ಗಂಟೆಯವರೆಗೆ 8.7 ಲಕ್ಷ ಜನರು ಪ್ರಯಾಣಿಸಿದ್ದಾರೆ.

ಐಪಿಎಲ್ 18ನೇ ಆವೃತ್ತಿಯನ್ನು ಗೆದ್ದಿರುವ ಆರ್‌ಸಿಬಿ ತಂಡಕ್ಕೆ ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದರಿಂದ ಅಭಿಮಾನಿಗಳು ಪ್ರವಾಹೋಪಾದಿಯಲ್ಲಿ ಹರಿದು ಬಂದಿದ್ದರು. ಬುಧವಾರ ಸಂಜೆವರೆಗೆ ನಗರದೆಡೆಗೆ ಮತ್ತು ಸಂಜೆ 5 ಗಂಟೆಯ ಬಳಿಕ ನಗರದಿಂದ ಹೊರಗೆ ಹೋಗುವವರ ಸಂಖ್ಯೆ ಅಧಿಕ ಇದ್ದಿದ್ದರಿಂದ 8.7 ಲಕ್ಷ ಜನರು ಸಂಚರಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ರಾತ್ರಿ 11.30ರವರೆಗೆ ಮೆಟ್ರೊ ಸಂಚಾರ ಇತ್ತು. ಹೀಗಾಗಿ ಒಟ್ಟು ಪ್ರಯಾಣಿಕರ ಸಂಖ್ಯೆ 9 ಲಕ್ಷ ದಾಟುವ ನಿರೀಕ್ಷೆ ಇದೆ.

ಸಂಚಾರ ದಟ್ಟಣೆ: ಹೈರಾಣಾದ ಸವಾರರು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ವಿಧಾನಸೌಧದತ್ತ ಲಕ್ಷಾಂತರ ಮಂದಿ ಏಕಕಾಲಕ್ಕೆ ಬಂದಿದ್ದರಿಂದ ಈ ಭಾಗಗಳ ಎಲ್ಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ವಾಹನ ಸವಾರರು ದಟ್ಟಣೆಯಲ್ಲಿ ಸಿಲುಕಿ ಪರದಾಡಿದರು.

ಬುಧವಾರ ಮಧ್ಯಾಹ್ನ ಏಕಕಾಲಕ್ಕೆ ಸ್ವಂತ ಕಾರು, ದ್ವಿಚಕ್ರ ವಾಹನಗಳಲ್ಲಿ ಕ್ರೀಡಾಂಗಣದತ್ತ ದೌಡಾಯಿಸಿದರು. ಭಾರಿ ದಟ್ಟಣೆ ಉಂಟಾಗಿತ್ತು.

ನೃಪತುಂಗ ರಸ್ತೆ, ಕೆ.ಆರ್ ವೃತ್ತ, ಕಬ್ಬನ್‌ಪಾರ್ಕ್ ರಸ್ತೆ, ಹಡ್ಸನ್ ವೃತ್ತ, ವಿಠಲ್ ಮಲ್ಯ ರಸ್ತೆ, ರೆಸಿಡೆನ್ಸಿ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ರಾಜಭವನ ರಸ್ತೆ, ಮೇಖ್ರಿ ವೃತ್ತ, ಹೆಬ್ಬಾಳ ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆಯಲ್ಲಿ ದಟ್ಟಣೆ ಉಂಟಾಗಿ ವಾಹನಗಳು ನಿಂತಲ್ಲೇ ನಿಂತಿದ್ದವು.

ಕ್ರೀಡಾಂಗಣದ ಆಸು-ಪಾಸಿನಲ್ಲಿರುವ ಎಲ್ಲ ರಸ್ತೆಗಳಲ್ಲಿ ಸುಮಾರು 2 ಗಂಟೆ ವಾಹನ ಸವಾರರು ನಿಂತಲ್ಲೇ ನಿಲ್ಲುವ ಸ್ಥಿತಿ ಉಂಟಾಯಿತು.

ಸೇಂಟ್ ಜೋಸೆಫ್ಸ್ ಇಂಡಿಯನ್ ಸ್ಕೂಲ್ ಮೈದಾನ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ, ಹಳೆ ಕೆಜಿಐಡಿ ಬಿಲ್ಡಿಂಗ್, ಕಿಂಗ್ಸ್ ರಸ್ತೆ (ಕಬ್ಬನ್‌ಪಾರ್ಕ್ ಒಳಬಾಗ)ಯಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲಿ ವಾಹನಗಳ ನಿಲುಗಡೆಗೆ ಸ್ಥಳ ಇರಲಿಲ್ಲ.

ಖರ್ಚು ಕಡಿಮೆ ಮಾಡಿ ಉಳಿತಾಯ ಮಾಡಬಹುದು. ಬಯಕೆಗಳು ಕಡಿಮೆ ಇದ್ದರೆ ಖರ್ಚನ್ನು ಕಡಿಮೆ ಮಾಡಬಹುದು. ನಿಮ್ಮ ಬಗ್ಗೆ ಇತರರು ಏನು ಅಂದುಕೊಳ್ಳುತ್ತಾರೆ ಎಂಬುದರ ಕುರಿತು ನೀವು ಚಿಂತಿಸುವುದು ಕಡಿಮೆ ಆದರೆ ನಿಮ್ಮ ಬಯಕೆಗಳೂ ಕಡಿಮೆ ಆಗುತ್ತವೆ

ಮಾರ್ಗನ್ ಹೌಸೆಲ್, 'ದಿ ಸೈಕಾಲಜಿ ಆಫ್ ಮನಿ' ಪುಸ್ತಕದ ಲೇಖಕ

ದುಡ್ಡಿನಂಥಾ ಮಾತು

ಬಿದ್ದು ಎದ್ದ ಮಾರುಕಟ್ಟೆ

ಈಗ ಯಾವುದು ಒಳಿತು?

ಷೇರುಪೇಟೆ ಸೂಚ್ಯಂಕಗಳು ಈಚಿನ ಕೆಲವು ತಿಂಗಳಲ್ಲಿ ಭಾರಿ ಕುಸಿತ ಕಂಡು, ನಂತರದಲ್ಲಿ ಒಂದಿಷ್ಟು ಚೇತರಿಕೆ ದಾಖಲಿಸಿವೆ. ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಸಂಪೂರ್ಣವಾಗಿ ದೂರವಾಗಿಲ್ಲ ಎಂದು ತಜ್ಞರು ಹೇಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹೂಡಿಕೆದಾರರಿಗೆ ಯಾವುದು ಉತ್ತಮ ಆಯ್ಕೆ?

ಷೇರು ಅಥವಾ ಎಂ.ಎಫ್?

• ಸಂದೀಪ್ ವಾಲುಂಜ್

ಭಾರತದ ಷೇರು ಮಾರುಕಟ್ಟೆಯು ಒಂದು ವರ್ಷದ ಅವಧಿಯಲ್ಲಿ ತೀವ್ರ ಏರಿಳಿತ ದಾಖಲಿಸಿದೆ. ಈಚಿನ ಒಂದು ವರ್ಷದ ಅವಧಿಯನ್ನು ಪರಿಗಣಿಸಿದರೆ ಆರಂಭದ ಕೆಲವು ತಿಂಗಳುಗಳಲ್ಲಿ ಸೂಚ್ಯಂಕಗಳು ಏರುಗತಿಯಲ್ಲಿ ಇದ್ದವು. ಆದರೆ ಕಂಪನಿಗಳ ವರಮಾನ ಏರಿಕೆ ಪ್ರಮಾಣ ಇಳಿಕೆ ಕಂಡಿದ್ದು ಹಾಗೂ ಜಾಗತಿಕ ಬಿಕ್ಕಟ್ಟುಗಳು ಪರಿಸ್ಥಿತಿ ಬದಲಾಗುವಂತೆ ಮಾಡಿದವು. ನಂತರದಲ್ಲಿ, ಅಮೆರಿಕದ ತೆರಿಗೆ ನೀತಿಗಳು, ಅಮೆರಿಕ ಮತ್ತು ಚೀನಾ ನಡುವಿನ ವಾಣಿಜ್ಯ ಸಮರ ತೀವ್ರವಾಗಬಹುದು ಎಂಬ ಭೀತಿಯು ಮಾರುಕಟ್ಟೆ ಮೇಲೆ ಪರಿಣಾಮ ಬೀರಿದವು. ಈಚಿನ ಕೆಲವು ವಾರಗಳಿಂದ ಮಾರುಕಟ್ಟೆ ಸೂಚ್ಯಂಕಗಳು ಮತ್ತೆ ಜಿಗಿಯುತ್ತಿವೆ.

ಈಗ ಕಾಣುತ್ತಿರುವ ಅನಿರೀಕ್ಷಿತ ಏರಿಕೆಗೆ ಕಾರಣಗಳು ಹಲವು. ದೇಶದಲ್ಲಿ ಹಣದ ಹರಿವು ಹೆಚ್ಚಾಗಿರುವುದು, ಕಾರ್ಪೊರೇಟ್ ವರಮಾನವು ಒಂದು ಮಟ್ಟವನ್ನು ಕಾಯ್ದುಕೊಂಡಿರುವುದು, ಕಡಿಮೆ ಬೆಲೆಗೆ ದೊರೆಯುವ ಗುಣಮಟ್ಟದ ಷೇರುಗಳನ್ನು ಹೂಡಿಕೆದಾರರು ಖರೀದಿಸುತ್ತಿರುವುದು, ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ಕಡಿಮೆ ಆಗಿರುವುದು... ಇವೆಲ್ಲವೂ ಅದಕ್ಕೆ ಕಾರಣಗಳು. ಈಗಿನ ಪರಿಸ್ಥಿತಿಯು ಹಲವರಲ್ಲಿ 'ನಾವು ಮಾರುಕಟ್ಟೆಯತ್ತ ನೋಟ ಹರಿಸೋಣವೇ' ಎಂಬ ಪ್ರಶ್ನೆ ಮೂಡಿಸಿದೆ.

ಆದರೆ ಈಚೆಗಷ್ಟೇ ಕೈಸುಟ್ಟುಕೊಂಡ ಅನುಭವ ಇರುವ ಹಲವರು ಮ್ಯೂಚುವಲ್ ಫಂಡ್ ಮೂಲಕ ಹೂಡಿಕೆ ಮಾಡಬೇಕೇ ಅಥವಾ ನೇರವಾಗಿ ಷೇರುಗಳನ್ನು ಕೊಳ್ಳಬೇಕೇ ಎಂಬ ಅನುಮಾನದಲ್ಲಿ ಇದ್ದಾರೆ.

ಈಚೆಗೆ ಮಾರುಕಟ್ಟೆಯಲ್ಲಿ ಕಂಡ ಕುಸಿತವು ಬಹಳ ತೀವ್ರವಾಗಿತ್ತು. ಒಂದು ಸಂದರ್ಭದಲ್ಲಿ ಅಮೆರಿಕದ 'ಡವ್ ಜೋನ್ಸ್' ಸೂಚ್ಯಂಕವು ಎರಡು ದಿನಗಳಲ್ಲಿ 4,000 ಅಂಶಗಳಷ್ಟು ಕುಸಿದಿತ್ತು. ಇದು ಎರಡು ದಿನಗಳ ಅವಧಿಯಲ್ಲಿ ಈ ಸೂಚ್ಯಂಕ ಕಂಡ ಅತ್ಯಂತ ದೊಡ್ಡ ನಷ್ಟ. ಭಾರತದ ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಕೂಡ ತೀವ್ರವಾಗಿ ಕುಸಿದವು. ಭಾರತದ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ₹87.29ರ ಮಟ್ಟಕ್ಕೆ ಕುಸಿದಿತ್ತು.

ಆದರೆ ಕುಸಿದಷ್ಟೇ ವೇಗವಾಗಿ ಮಾರುಕಟ್ಟೆಗಳು ಪುಟಿದೆದ್ದವು. ವಿವಿಧ ಷೇರುಗಳ ಮೌಲ್ಯವು ಆಕರ್ಷಕವಾಗಿದೆ ಅನ್ನಿಸಿದ್ದರಿಂದ ಹಾಗೂ ಜಾಗತಿಕ ವಹಿವಾಟುಗಳ ವಿಚಾರವಾಗಿ ಒಂದಿಷ್ಟು ಸ್ಪಷ್ಟತೆ ಮೂಡಿದ ಕಾರಣದಿಂದಾಗಿ ಹೂಡಿಕೆದಾರರಲ್ಲಿ ಮತ್ತೆ ಮಾರುಕಟ್ಟೆಯನ್ನು ಪ್ರವೇಶಿಸುವ ಉಮೇದು ಮೂಡಿದೆ. ಈಗ ಮಾರುಕಟ್ಟೆ ಪ್ರವೇಶಿಸದೆ ಇದ್ದರೆ ತಾವೇನೋ ಕಳೆದುಕೊಳ್ಳಬಹುದು ಎಂಬ ಆತಂಕವು ಅವರಲ್ಲಿ ಇದೆ.

ಈಗ ಹೂಡಿಕೆದಾರರು ಯಾವ ಬಗೆಯಲ್ಲಿ ಹೂಡಿಕೆ ಮಾಡಬೇಕು? ಮ್ಯೂಚುವಲ್ ಫಂಡ್‌ಗಳ (ಎಂ.ಎಫ್) ಮೂಲಕ ಹೂಡಿಕೆ ಮಾಡಬೇಕೋ ಅಥವಾ ಅವರು ನೇರವಾಗಿ ಷೇರುಗಳನ್ನು ಖರೀದಿಸಬೇಕೋ? ಅಥವಾ ಬೇರೆ ಮಾರ್ಗ ಅನುಸರಿಸಿ ಹೂಡಿಕೆಯನ್ನು ಇನ್ನಷ್ಟು ವೈವಿಧ್ಯಮಯ ಆಗಿಸಬೇಕೋ?



ಎಂ.ಎಫ್ – ಸುರಕ್ಷತೆ, ಸ್ಥಿರತೆ

ಮಾರುಕಟ್ಟೆಗಳಲ್ಲಿ ಅಸ್ಥಿರತೆಯು ತೀವ್ರವಾಗಿ ಇರುವಾಗ, ಮ್ಯೂಚುವಲ್ ಫಂಡ್‌ಗಳ ಮೂಲಕ ಹಣ ತೊಡಗಿಸುವುದು ಹೆಚ್ಚು ವಿವೇಕಯುತ ನಡೆಯಾಗುತ್ತದೆ. ಮ್ಯೂಚುವಲ್ ಫಂಡ್‌ಗಳು ಬೇರೆ ಬೇರೆ ಕಂಪನಿಗಳ ಷೇರುಗಳಲ್ಲಿ ಹಣ ತೊಡಗಿಸುತ್ತವೆ, ಹೂಡಿಕೆದಾರರ ಹಣವನ್ನು ವೃತ್ತಿಪರರು ನಿರ್ವಹಿಸುತ್ತಾರೆ. ಈ ಕಾರಣಗಳಿಂದಾಗಿ ಅವು ಮಾರುಕಟ್ಟೆಯನ್ನು ಪ್ರವೇಶಿಸಲು ಬಯಸುವವರಿಗೆ ಸೂಕ್ತವಾಗುತ್ತವೆ.

ಈಗ ಏಕೆ ಮ್ಯೂಚುವಲ್ ಫಂಡ್:

- **ವೈವಿಧ್ಯ:** ಹಣವನ್ನು ಬೇರೆ ಬೇರೆ ಕಂಪನಿಗಳ ಷೇರುಗಳಲ್ಲಿ, ಬೇರೆ ಬೇರೆ ಹಣಕಾಸು ಉತ್ಪನ್ನಗಳಲ್ಲಿ ತೊಡಗಿಸುವ ಕಾರಣಕ್ಕೆ ರಿಸ್ಕ್ ಕಡಿಮೆ.
- **ಎಸ್‌ಐಪಿ ಪ್ರಯೋಜನ:** ವ್ಯವಸ್ಥಿತವಾಗಿ ಆಗುವ ಹೂಡಿಕೆಯು ಅನಿಶ್ಚಿತತೆಯಿಂದಾಗುವ ಸಮಸ್ಯೆಯನ್ನು ನಿವಾರಿಸುತ್ತದೆ.
- **ವೃತ್ತಿಪರರಿಂದ ನಿರ್ವಹಣೆ:** ಹೂಡಿಕೆದಾರರ ಹಣವನ್ನು ವೃತ್ತಿಪರರು ವಿವಿಧೆಡೆ ತೊಡಗಿಸುತ್ತಾರೆ. ಹೀಗಾಗಿ ಹೂಡಿಕೆದಾರರು ಒತ್ತಡದಿಂದ ಮುಕ್ತವಾಗಿ ಇರಬಹುದು.

ನೇರವಾಗಿ ಷೇರುಗಳಲ್ಲಿ ಹೂಡಿಕೆ

ಹೂಡಿಕೆಗಳನ್ನು ತಾವೇ ನೇರವಾಗಿ ಮಾಡಬೇಕು ಎಂದು ಬಯಸುವವರಿಗೆ ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುವುದು ಉತ್ತಮ ಆಯ್ಕೆಯಾಗಬಹುದು. ಹೀಗೆ ಹಣ ತೊಡಗಿಸುವವರಿಗೆ ತಮ್ಮ ಹಣವನ್ನು ಯಾವ ಷೇರಿನಲ್ಲಿ ತೊಡಗಿಸಬೇಕು ಎಂಬ ವಿಚಾರವಾಗಿ ಪೂರ್ತಿ ಸ್ವಾತಂತ್ರ್ಯ ಇರುತ್ತದೆ. ಇವರು ಮಾರುಕಟ್ಟೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಲಾಭ ಪಡೆಯುವ ಸಾಧ್ಯತೆಯೂ ಇರುತ್ತದೆ – ಅದರಲ್ಲೂ ಮುಖ್ಯವಾಗಿ, ಕೆಲವು ಉತ್ತಮ ಕಂಪನಿಗಳ ಷೇರುಗಳು ಬಹಳ ಒಳ್ಳೆಯ ದರಕ್ಕೆ ಸಿಗುತ್ತಿರುವಾಗ ಈ ರೀತಿ ಹೆಚ್ಚಿನ ಲಾಭ ಪಡೆಯುವ ಅವಕಾಶ ಇರುತ್ತದೆ.

ಪ್ರಯೋಜನಗಳು:

- ಕೆಲವು ಷೇರುಗಳು ಒಳ್ಳೆಯ ಮೌಲ್ಯಕ್ಕೆ ಸಿಗಬಹುದು
- ಕೆಲವು ನಿರ್ದಿಷ್ಟ ಕಂಪನಿಗಳನ್ನು ಕೇಂದ್ರೀಕರಿಸಿಕೊಂಡು ಉತ್ತಮ ಪೋರ್ಟ್‌ಫೋಲಿಯೊ ಕಟ್ಟಲು ಸಾಧ್ಯವಾಗುತ್ತದೆ.

ಒಂದಿಷ್ಟು ಎಚ್ಚರಿಕೆ:

- ಷೇರುಗಳಲ್ಲಿ ನೇರವಾಗಿ ಹೂಡಿಕೆ ಮಾಡುವವರು ಅದಕ್ಕಾಗಿ ಹೆಚ್ಚು ಸಮಯ ಮೀಸಲಿಡಬೇಕಾಗುತ್ತದೆ, ಹೂಡಿಕೆಯ ವಿಚಾರದಲ್ಲಿ ಶಿಸ್ತನ್ನು ಪಾಲಿಸಬೇಕಾಗುತ್ತದೆ. ಮಾರುಕಟ್ಟೆಯ ಅನಿಶ್ಚಿತತೆಗಳನ್ನು ನಿಭಾಯಿಸುವ ಸಾಮರ್ಥ್ಯ ಅವರಲ್ಲಿ ಇರಬೇಕು.

ಚಿನ್ನ ಹಾಗೂ ಬೆಳ್ಳಿ

ಬಂಡವಾಳ ಮಾರುಕಟ್ಟೆಗಳ ರಿಸ್ಕ್‌ಗಳನ್ನು ಮೈಮೇಲೆ ಎಳೆದುಕೊಳ್ಳಲು ಸಿದ್ಧರಿರದ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿಯ ಮೇಲೆ ಹಣ ತೊಡಗಿಸುವ ಪರಿಶೀಲನೆ ನಡೆಸಬಹುದು. ಹಣದುಬ್ಬರ ಪ್ರಮಾಣ ಹೆಚ್ಚಿದ್ದಾಗ, ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಹೆಚ್ಚಿದ್ದರೆ ಈ ಹೂಡಿಕೆಗಳಿಂದ ಹೆಚ್ಚಿನ ಲಾಭ ಸಿಗುತ್ತದೆ.

ಚಿನ್ನ ಹಾಗೂ ಬೆಳ್ಳಿಯಲ್ಲಿ ಹಣ ತೊಡಗಿಸುವುದಕ್ಕೆ ಮ್ಯೂಚುವಲ್ ಫಂಡ್‌ಗಳು ಒಳ್ಳೆಯ ಆಯ್ಕೆ. ಈ ಸರಕುಗಳ ಮೇಲೆ ಹಣ ತೊಡಗಿಸುವ ಮ್ಯೂಚುವಲ್ ಫಂಡ್‌ಗಳು ಲಭ್ಯವಿವೆ. ಹಾಗೆಯೇ ಚಿನ್ನದ ಇಟಿಎಫ್, ಚಿನ್ನ ಮತ್ತು ಬೆಳ್ಳಿಯನ್ನು ಕೂಡ ಒಳಗೊಂಡಿರುವ ಮಲ್ಟಿ ಅಸೆಟ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು.

ಈಗ ಸಣ್ಣ ಹೂಡಿಕೆದಾರರಿಗೆ ಯಾವುದು ಉತ್ತಮ?

ಈಗ ಸಣ್ಣ ಹೂಡಿಕೆದಾರರ ಪೈಕಿ ಹೆಚ್ಚಿನವರಿಗೆ ವಿವಿಧ ಹೂಡಿಕೆ ಉತ್ಪನ್ನಗಳ ಸಮ್ಮಿಶ್ರಣವು ಹೆಚ್ಚು ಉತ್ತಮವಾಗಬಹುದು. ಹೂಡಿಕೆದಾರರು ಈಗ ತಮ್ಮ ಪ್ರಧಾನ ಪೋರ್ಟ್‌ಫೋಲಿಯೊವನ್ನು ಮ್ಯೂಚುವಲ್ ಫಂಡ್‌ಗಳ ಮೂಲಕ ಕಟ್ಟಬೇಕು. ಅದರಲ್ಲೂ ಮುಖ್ಯವಾಗಿ, ಲಾರ್ಜ್ ಕ್ಯಾಪ್ ಅಥವಾ ಫ್ಲೆಕ್ಸಿ ಕ್ಯಾಪ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಆಗಬೇಕು. ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುವಾಗ ಆಯ್ದ ಕೆಲವು ಕಂಪನಿಗಳ ಷೇರುಗಳನ್ನು ಖರೀದಿಸಬಹುದು.

ದೇಶದ ಷೇರುಪೇಟೆಗಳು ಈಗ ಚೇತರಿಕೆಯ ಹಾದಿಯಲ್ಲಿ ಇದ್ದಿರಬಹುದು. ಆದರೆ ಅನಿಶ್ಚಿತತೆ ಪೂರ್ತಿಯಾಗಿ ಹೋಗಿಲ್ಲ. ಈಗ ಕಂಡುಬಂದಿರುವ ಏರುಗತಿಯು ಹೀಗೆಯೇ ಮುಂದುವರಿಯಬಹುದು ಅಥವಾ ಮತ್ತೆ ಕುಸಿತ ಎದುರಾಗಬಹುದು. ಆದರೆ ಹೂಡಿಕೆಯಲ್ಲಿ ವೈವಿಧ್ಯ ಇದ್ದರೆ, ಹೂಡಿಕೆಯಲ್ಲಿ ಶಿಸ್ತು ಇದ್ದರೆ ಅನಿಶ್ಚಿತತೆಯನ್ನು ಎದುರಿಸಬಹುದು.

ಲೇಖಕ: ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಮೂಹ ಸಿಎಂಒ

ಸಣ್ಣ ಹೂಡಿಕೆದಾರರಿಗೆ ದೊಡ್ಡ ಅನುಕೂಲ

ಮಾಹಿತಿ ಕಣಜ

ಭಾರತದಲ್ಲಿ ಸರ್ಕಾರದ ಬಾಂಡ್‌ಗಳ ಮೇಲಿನ ಹೂಡಿಕೆಯಲ್ಲಿ ಸಣ್ಣ ಹೂಡಿಕೆದಾರರ ಪಾಲು ಹೆಚ್ಚಬೇಕು ಎಂಬ ಉದ್ದೇಶದಿಂದ ಆರ್‌ಬಿಐ ಆರಂಭಿಸಿರುವ ಯೋಜನೆ 'ಆರ್‌ಬಿಐ ರಿಟೇಲ್ ಡೈರೆಕ್ಟ್'.

ಸಣ್ಣ ಹೂಡಿಕೆದಾರರಿಗೆ ನೆರವಾಗುವ ಉದ್ದೇಶದಿಂದ ಆರ್‌ಬಿಐ, ರಿಟೇಲ್ ಡೈರೆಕ್ಟ್ ಹೆಸರಿನಲ್ಲಿ ಪೋರ್ಟಲ್ ಒಂದನ್ನು ಕೂಡ ತೆರೆದಿದೆ. ಈ ಪೋರ್ಟಲ್‌ಗೆ ಭೇಟಿ ನೀಡಿ, ಅಗತ್ಯ ಮಾಹಿತಿ ಒದಗಿಸಿ ಹೂಡಿಕೆದಾರರು ಖಾತೆ ತೆರೆಯಬಹುದು. ನಂತರ ಸರ್ಕಾರಿ ಬಾಂಡ್‌ಗಳಲ್ಲಿ ಹಣ ತೊಡಗಿಸಬಹುದು. ವಿವಿಧ ರಾಜ್ಯ ಸರ್ಕಾರಗಳು ಹೊರಡಿಸುವ ಬಾಂಡ್‌ಗಳಲ್ಲಿಯೂ ಹಣ ಹೂಡಿಕೆ ಮಾಡಬಹುದು.

https://rbiretaildirect.org.in ವೆಬ್‌ಸೈಟ್‌ಗೆ ಭೇಟಿ ನೀಡಿ ಈ ಎಲ್ಲ ಕೆಲಸಗಳನ್ನು ಮಾಡಬಹುದು. ಅಲ್ಲದೆ, ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಬಳಕೆದಾರರಿಗೆ ಅಗತ್ಯವಿರುವ ಆ್ಯಪ್‌ಗಳನ್ನು ಕೂಡ ಅಭಿವೃದ್ಧಿಪಡಿಸಲಾಗಿದೆ. ಆ್ಯಪ್ ಬಳಸಿಯೂ ಖಾತೆ ತೆರೆಯಬಹುದು.

ಈ ಪೋರ್ಟಲ್‌ನಲ್ಲಿ ಇರುವ ಮಾಹಿತಿ ಅನ್ವಯ, ಮೊಬೈಲ್ ದೂರವಾಣಿ ಸಂಖ್ಯೆ, ಪ್ಯಾನ್ ಕಾರ್ಡ್, ವಿಳಾಸದ ದಾಖಲೆ, ಇ-ಮೇಲ್ ವಿಳಾಸ ಮತ್ತು ಬ್ಯಾಂಕ್ ಖಾತೆ ಇದ್ದರೆ ಹೂಡಿಕೆಗೆ ಖಾತೆ ತೆರೆಯಲು ಸಾಧ್ಯ.



ಐಪಿಒ ಜಿ- ಒಂದು ಆ್ಯಪ್ ಹತ್ತಾರು ಮಾಹಿತಿ

ಹೊಸ ಕಂಪನಿಗಳು, ಹಳೆಯ ಕಂಪನಿಗಳು ಐಪಿಒ ಮೂಲಕ ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ, ಸಾಂಸ್ಥಿಕ ಹೂಡಿಕೆದಾರರಿಗೆ ನೀಡುವ ಭರಾಟೆ ಜೋರಾಗಿ ಇರುವ ಸಂದರ್ಭ ಇದು.

ಈ ಹೊತ್ತಿನಲ್ಲಿ ಹೊಸ ಐಪಿಒಗಳ ಬಗ್ಗೆ ಕಾಲಕಾಲಕ್ಕೆ ಮಾಹಿತಿ ಒದಗಿಸುವುದಕ್ಕೆಂದೇ ಸಿದ್ಧವಾಗಿರುವ ಆ್ಯಪ್ 'ಐಪಿಒಜಿ'. ಇದು ಹತ್ತು ಹಲವು ಕಂಪನಿಗಳ ಐಪಿಒ ಯೋಜನೆಗಳ ಬಗ್ಗೆ ತಾಜಾ ಮಾಹಿತಿ ಒದಗಿಸುತ್ತ ಇರುತ್ತದೆ.



ಸದ್ಯ ಯಾವೆಲ್ಲ ಕಂಪನಿಗಳ ಐಪಿಒಗೆ ಅರ್ಜಿ ಸಲ್ಲಿಸಬಹುದು, ಮುಂದೆ ಕೆಲವು ದಿನಗಳಲ್ಲಿ ಯಾವೆಲ್ಲ ಕಂಪನಿಗಳ ಐಪಿಒ ನಿಗದಿಯಾಗಿದೆ ಎಂಬ ಮಾಹಿತಿಯನ್ನು ಇದು ನೀಡುತ್ತದೆ. ದೊಡ್ಡ ಪ್ರಮಾಣದ ಕಂಪನಿಗಳ ಐಪಿಒ ವಿವರ ಮಾತ್ರವೇ ಅಲ್ಲದೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕಂಪನಿಗಳ ಐಪಿಒ ಬಗ್ಗೆಯೂ ಇದರಲ್ಲಿ ಮಾಹಿತಿ ಸಿಗುತ್ತದೆ.

ಅರ್ಜಿ ಸಲ್ಲಿಸಿದವರು ತಮಗೆ ಷೇರುಗಳು ದೊರೆತಿವೆಯೇ ಎಂಬುದನ್ನೂ ಈ ಆ್ಯಪ್ ಮೂಲಕವೇ ಪರಿಶೀಲಿಸಬಹುದು. ಕಂಪನಿಗಳು ಐಪಿಒ ಪ್ರಕ್ರಿಯೆಯ ಭಾಗವಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸುವ ಅಗತ್ಯ ದಾಖಲೆಪತ್ರಗಳನ್ನು ಈ ಆ್ಯಪ್ ಮೂಲಕ ಪಡೆದುಕೊಳ್ಳುವ ಸೌಲಭ್ಯ ಇದೆ.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ದೇಶದ ರಕ್ಷಣಾ ಉಪಕರಣಗಳ ಉದ್ಯಮ ವಲಯದಲ್ಲಿ ಮುಂಚೂಣಿ ಸ್ಥಾನವನ್ನು ಪಡೆದುಕೊಂಡಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ (ಬಿಇಎಲ್) ಷೇರು ಬೆಲೆಯು ₹441ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಹೇಳಿದೆ.

ಜೂನ್ 3ರಂದು ಹಂಚಿಕೊಂಡಿರುವ ವರದಿಯಲ್ಲಿ ಸಂಸ್ಥೆಯು ಈ ಮಾತು ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಬಿಇಎಲ್ ಷೇರು ಮೌಲ್ಯವು ₹390.95 ಆಗಿದೆ.

ದೇಶದ 'ನವರತ್ನ' ಉದ್ಯಮಗಳಲ್ಲಿ ಒಂದಾಗಿರುವ ಬಿಇಎಲ್, ಭಾರತದ ರಕ್ಷಣಾ ವಲಯದ ಎಲೆಕ್ಟ್ರಾನಿಕ್ಸ್ ಮಾರುಕಟ್ಟೆಯಲ್ಲಿ ಶೇಕಡ 37ರಷ್ಟು ಪಾಲು ಹೊಂದಿದೆ. ಕಂಪನಿಯ ವರಮಾನವು 2024–25ರ ನಾಲ್ಕನೆಯ ತ್ರೈಮಾಸಿಕದಲ್ಲಿ ಶೇಕಡ 7ರಷ್ಟು ಬೆಳವಣಿಗೆ ಕಂಡಿದೆ, ಲಾಭವು ಶೇ 18ರಷ್ಟು ಹೆಚ್ಚಳ ಆಗಿದೆ ಎಂದು ಜಿಯೋಜಿತ್ ವರದಿಯಲ್ಲಿ ಹೇಳಲಾಗಿದೆ.

भारत इलेक्ट्रॉनिक्स
BHARAT ELECTRONICS

(ಬ್ರೋಕರೇಜ್ ಸಂಸ್ಥೆಗಳು ನೀಡುವ ವಿವರಕ್ಕೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH
Unit-2 PROSE

There's a Girl by the Tracks!

Share your responses

1. Where did Baleshwar find Roma at last?

Ans: Mr Baleswar was far away from Roma. After running for several minutes, he found her sprawled by the side of the tracks.

2."Behenji, aap theek hai?" But there was no response and no help in sight. Why was it so? Read paragraph 6 and answer

Ans: The fall had resulted in gash behind Ms Roma's head and blood oozing out of it, as a result she had lost her consciousness. Hence there was no response to Mr Baleshwar's words. Mr Baleswar and Ms Roma were alone somewhere between two stations five kilometers apart in Thane district, hence no help was insight.

3. Fill in the table with appropriate details.

Name	Age	Education	State they belong to	Profession	Reason for boarding the train
Roma					
Baleshawar Mishra					

Ans:-

Name	Age	Education	State they belong to	Profession	Reason for boarding the train
Roma	*21*	*B Com*	*Pune, Maharashtra*	*Executive in a call centre*	*Returning home*
Baleshawar Mishra	*20*	*High School dropout*	*Mirzapur, Uttar Pradesh*	*Unemployed*	*Returning home, after spending day with a friend having lunch and watching movies*

Check your understanding

1. Who volunteered to help Baleshwar?

Ans: A middle aged Gujarati speaking driver of a tempo truck, volunteered to help Mr Baleshwar.

2. **"Roma stirred and her eyes fluttered open." What could have made her react so?**

Ans: Ms Roma was woken up by jerks given by lurching of the vehicle in which she was being carried to the hospital

3. **Some details of Roma's brother are given paragraph 14. Read and fill in the columns appropriately**

Name	Job	Place	Vehicle

Ans:-

Name	Job	Place	Vehicle
Dinesh Talreja	*Marketing*	*Retail outlet, Ulhasnagar*	*Motor cycle*

Share your responses

1)``Oh, I couldn't thank him," Baleshwar thought. Who do you think he couldn't think?

Ans: Mr Baleshwar meant the Gujarati speaking middle aged driver of tempo truck who helped all he could, had gone away quietly.

2) Why did Baleshwar revisit the spot where Roma had fallen?

Ans: Mr Baleshwar revisited the spot where Ms Roma had fallen, to look for her belongings as her brother Dinesh Talreja had told him that her cell phone and hand bag are missing.

3) Baleshwar got some assurance from a railway employee. What was that?

Ans: Railway employee assured Mr. Baleshwar that some of the belongings of Ms Roma have been found.

4) Roma said. "I think it's astonishing". What was astonishing?

Ans: It is astonishing that a stranger would jump off a train running in an opposite direction on parallel tracks and risk his life to save Ms Roma lying by side of tracks unconscious and bleeding after fall from her train.

Think about the Text

1. **Some incidents relating to Roma Talreja are given below. Put them in the right order.**
   a. Roma lost her foothold
   b. The train hurtled ahead.
   c. Roma was thrown out of the coach.
   d. Roma was jammed between two women.
   e. Roma panicked

Ans: d, b, a, e, c.

2. **Baleshwar jumped into action to save the girl. His actions in doing so are given in a jumbled manner. Set them in the right sequence, as in the text.**
   a. Baleshwar crossed the track.
   b. He carried the girl.
   c. He saw the girl bleeding.
   d. He requested motorists to help him
   e. he prayed silently

Ans: c, e, b, a, d.

3. **Write briefly about the personal details such as qualification and Profession of Roma Talreja and Baleshwar Mishra after discussion with your classmates.**

Ans: Roma Talreja is a B Com graduate from Pune, had been working in a call centre in Mumbai since last two years. She loved her job of talking and connecting to customers and making new customers there. She used to have long phone chat with her fiancé Vijay.

Baleshwar Mishra is an unemployed high school dropout, who had recently come to Mumbai in search of a job. He lived with his two older brothers. ***(Contd…….)***

Biology

REPRODUCTION

Human Reproduction

4. Mention some of the differences between Morula and Blastocyst.

Ans:- Differences between Morula & Blastocyst

Morula	*Blastocyst*
1. It is a solid ball of cells called blastomeres.	It is a hollow ball of cells due to development of a blastocoel.
2. All the cells are similar.	There are atleast two types of cells, trophoblast and inner cell mass.
3. All the cells are nearly rounded.	Some cells are flat while others are rounded.
4. Zona pellucida forms a tight covering around the morula.	Zona pollucida is stretched and liable to break.
5. Morula is early stage in embryo development.	It is later stage in embryo development.
6. The size is the same as that of egg.	The size is larger.
7. Divisions are nearly synchronous	Synchrony is absent in division of cells.

5. Mention some of the differences between Blastula and Gastrula.

Ans:- Differences between Blastula & Gastrula

Blastula	*Gastrula*
1. It is early stage of embryo.	It is later stage of embryo.
2. It contains a cavity called blastocoel.	It contains a cavity called archenteron.
3. The embryo is single layered.	The embryo comes to have three layers.
4. There are no cell movements.	A lot of cell movements occur in gastrula stage.

6. What is Chorion? What are its functions?

Ans:- Chorion is the outermost foetal membrane which is formed by the outer layer of trophoblast. It forms villi and other foetal parts of placenta.

The functions of Chorion are –

(a) It forms the foetal part of placenta.
(b) It provides attachment to foetus.
(c) Foetus obtains nutrients from the mother through chorionic structures.
(d) Excretory materials of the foetus are transferred to mother's blood through chorion.
(e) It is the site of exchange of gases between foetus and the mother.

7. What is Amnion? What are its functions?

Ans:- Amnion is the innermost foetal membrane which is formed by the inner layer of trophoblast. It lies immediately around the embryo. It encloses a cavity called amniotic cavity. The cavity is filled with a clear fluid called the amniotic fluid.

The functions of Amnion are –

(a) Amniotic fluid surrounds the embryo. It protects the embryo from any injury by functioning as shock absorber.
(b) Amniotic fluid regulates pressure and temperature around the embryo.
(c) It prevents desiccation of the embryo.
(d) It allows for growth and movement of the foetus.
(e) Amniotic fluid can be taken out with the help of a needle and studied for foetal cells so as to know the genetic defects, if any.

8. What is Allantois?

Ans:- Allantois is a membrane lined small sac which develops from embryonic gut close to yolk sac. It forms blood vessels for the placenta. Because of it, human placenta is called chorioallantoic.

9. What is Yolk Sac?

Ans:- Yolk Sac is a membrane lined sac which develops from the embryonic gut. The sac contains yolk in egg laying animals. It is non-functional in mammals where yolk is not stored. It contains a clear fluid which is believed to help in the synthesis of blood corpuscles in the early embryo before the function is taken up by liver. It shrinks afterwards.

Multiple Choice questions:-

1. Role of placenta is to
A) Provide nutrition to developing embryo
B) Protect embryo from shock
C) Act as storage organ
D) Convey nerve impulses

2. In mammals, failure of testis to descend into the scrotum is known as
A) Paedogenesis
B) Castration
C) Cryptrochidism
D) Impotency

3. Gastrulation involves the differentiation of
A) Ectoderm and endoderm
B) Ectoderm, endoderm & mesoderm
C) Ectoderm and mesoderm
D) Mesoderm and endoderm

4. Eutherian placenta is derived from
A) Allantois B) Amnion
C) Chorion and allantois
D) Yolk sac ***(Contd…)***

ಬಿಬಿಎಂಪಿ: ಅತಿಥಿ ಶಿಕ್ಷಕರಿಗೇ ಮಣೆ

ಶಿಕ್ಷಣ ಇಲಾಖೆ 2 ವರ್ಷಗಳ ಹಿಂದೆ ನೀಡಿದ್ದ ನೇಮಕಾತಿ ಭರವಸೆ ಈಡೇರಿಲ್ಲ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಶಾಲಾ–ಕಾಲೇಜುಗಳಿಗೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಸಂಬಂಧ ಎರಡು ವರ್ಷಗಳ ಹಿಂದೆ ನೀಡಿದ್ದ ಭರವಸೆಯನ್ನೂ ಈಡೇರಿಸದೆ, 378 ಅತಿಥಿ ಶಿಕ್ಷಕರನ್ನು ಎಸ್‌ಡಿಎಂಸಿ, ಸಿಡಿಸಿ ಮೂಲಕ ನಿಯೋಜಿಸಿಕೊಳ್ಳಲು ಪಾಲಿಕೆ ಮುಂದಾಗಿದೆ.

ಹೊರಗುತ್ತಿಗೆ ವ್ಯವಸ್ಥೆಯನ್ನು ತೆಗೆದುಹಾಕಿ, ಶಿಕ್ಷಣ ಇಲಾಖೆಯಿಂದಲೇ ನೇರವಾಗಿ ಬಿಬಿಎಂಪಿ ಶಾಲಾ–ಕಾಲೇಜುಗಳಿಗೆ ಶಿಕ್ಷಕರು/ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಭರವಸೆ ನೀಡಿ ಸುದೀರ್ಘಾವಧಿ ಕಳೆದರೂ ಇದುವರೆಗೆ ಪ್ರಕ್ರಿಯೆ ಆರಂಭವಾಗಿಲ್ಲ.

ಖಾಲಿ ಹುದ್ದೆಗಳಿಗೆ ಖಾಸಗಿ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಪ್ರತಿ ವರ್ಷವೂ ಗುತ್ತಿಗೆ ನವೀಕರಣ ವಾಗುತ್ತಿತ್ತು. 2024ರ ಮೇ ತಿಂಗಳಲ್ಲಿ ಡಿಟೆಕ್ಟೀವ್, ಸೆಕ್ಯುರಿಟಿ ಏಜೆನ್ಸಿ ಮೂಲಕ ಹೊರಗುತ್ತಿಗೆಯಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಒಪ್ಪಂದವಾಗಿತ್ತು. ಇದಕ್ಕೆ ಪ್ರತಿರೋಧ ಉಂಟಾದಾಗ, ಆ ಒಪ್ಪಂದವನ್ನು ರದ್ದುಪಡಿಸಲಾಗಿತ್ತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಶಾಲೆಗಳಿಗೆ ಶಿಕ್ಷಣ ಇಲಾಖೆಯಿಂದಲೇ ಶಿಕ್ಷಕರನ್ನು ನೇಮಿಸ ಲಾಗುತ್ತದೆ ಎಂದು ಹೇಳಿದ್ದರು.

‘ಬಿಬಿಎಂಪಿ ಶಾಲಾ–ಕಾಲೇಜುಗಳಲ್ಲಿ ಬೋಧಿಸುತ್ತಿರುವ ಶೇ 15ರಿಂದ ಶೇ 20ರಷ್ಟು ಶಿಕ್ಷಕರಿಗೆ ಸೂಕ್ತ ವಿದ್ಯಾರ್ಹತೆ ಇಲ್ಲ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಿಬಿಎಂಪಿ ಶಾಲೆಗಳಿಗೆ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರನ್ನು ಒದಗಿಸುತ್ತದೆ. ನಮ್ಮಲ್ಲಿ ಕಾಯಂ ಶಿಕ್ಷಕರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆ ಯಾಗುತ್ತಿದೆ. ಹೊರಗುತ್ತಿಗೆಯಲ್ಲಿರುವ ಎಲ್ಲ ಶಿಕ್ಷಕರೂ ಮುಂದುವರಿಯುವ ಅರ್ಹತೆ ಹೊಂದಿಲ್ಲ’ ಎಂದು ಬಿಬಿಎಂಪಿಯ ಅಂದಿನ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು 2024ರ ಜನವರಿ 8ರಂದು ಹೇಳಿದ್ದರು.

‘ಬಿಬಿಎಂಪಿ ಶಾಲೆ–ಕಾಲೇಜುಗಳಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕ ರನ್ನು ಹಿಂದಿನಂತೆಯೇ ಏಜೆನ್ಸಿ ಮೂಲಕ ಮುಂದುವರಿಸಬೇಕು. ‘ಹೊರಗುತ್ತಿಗೆ’ ತೆಗೆದುಹಾಕಿ, ಬಿಬಿಎಂಪಿ ವತಿಯಿಂದಲೇ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳ ಬೇಕು. ಸೇವಾ ಭದ್ರತೆ ನೀಡಬೇಕು’ ಎಂದು ಆಗ್ರಹಿಸಿ ಹೊರಗುತ್ತಿಗೆ ಶಿಕ್ಷಕರು ಮುಷ್ಕರ ನಡೆಸಿದ್ದರು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿಯಿಂದ (ಸಿಡಿಸಿ) ಶಿಕ್ಷಕರು, ಉಪನ್ಯಾಸಕರನ್ನು ನಿಯೋಜಿಸಿಕೊಳ್ಳಲಾಗುತ್ತದೆ. ಅರ್ಹತೆ ಇರುವವರು ಅಲ್ಲಿ ಅರ್ಜಿ ಸಲ್ಲಿಸಿ ಸೇರಿಕೊಳ್ಳಬಹುದು ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದರು. 2024–25ನೇ ಸಾಲಿನಲ್ಲಿ ಈ ಪ್ರಕ್ರಿಯೆ ನಡೆದು, ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕ ರನ್ನು ನೇಮಿಸಿಕೊಳ್ಳಲಾಗಿತ್ತು.

2025–26ನೇ ಸಾಲಿನಲ್ಲಿ ಶಿಕ್ಷಕರ ಕೊರತೆಯನ್ನು ಲೆಕ್ಕಾಚಾರ ಮಾಡಿರುವ ಬಿಬಿಎಂಪಿ, ಎಸ್‌ಡಿಎಂಸಿ ಮತ್ತು ಸಿಡಿಸಿ ಮೂಲಕ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ವಿದ್ಯಾರ್ಥಿಗಳಿಗೆ ಅನುಗುಣವಾಗಿ ನೇಮಿಸಿಕೊಳ್ಳಲು ನಿರ್ಧರಿಸಿದೆ. ಈ ಬಗ್ಗೆ ಮುಖ್ಯ ಆಯುಕ್ತರು ಸುತ್ತೋಲೆ ಹೊರಡಿಸಿದ್ದು, ಜೂನ್ 16ರೊಳಗೆ ಅತಿಥಿ ಶಿಕ್ಷಕರ ನೇಮಕ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದ್ದಾರೆ.

93	ಶಿಶುವಿಹಾರಗಳು
15	ನಿಯೋಜಿಸಲಾಗುವ ಅತಿಥಿ ಶಿಕ್ಷಕಿಯರು
16	ಪ್ರಾಥಮಿಕ ಶಾಲೆಗಳು
16	ನಿಯೋಜಿಸಲಾಗುವ ಅತಿಥಿ ಶಿಕ್ಷಕರು
35	ಪ್ರೌಢಶಾಲೆಗಳು
100	ನಿಯೋಜಿಸಲಾಗುವ ಅತಿಥಿ ಶಿಕ್ಷಕರು
20	ಪದವಿಪೂರ್ವ ಕಾಲೇಜುಗಳು
181	ನಿಯೋಜಿಸಲಾಗುವ ಅತಿಥಿ ಉಪನ್ಯಾಸಕರು
4	ಪದವಿ ಕಾಲೇಜುಗಳು/
2	ಸ್ನಾತಕೋತ್ತರ ಪದವಿ ಕಾಲೇಜುಗಳು
66	ನಿಯೋಜಿಸಲಾಗುವ ಅತಿಥಿ ಉಪನ್ಯಾಸಕರು

ಅತಿಥಿ ಶಿಕ್ಷಕರು/ ಉಪನ್ಯಾಸಕರ ಗೌರವ ಸಂಭಾವನೆ

ಶಿಶುವಿಹಾರ, ಪ್ರಾಥಮಿಕ ಶಾಲೆ	₹19,366
ಪ್ರೌಢಶಾಲೆ	₹22,840
ಪದವಿಪೂರ್ವ ಕಾಲೇಜು	₹25,697
ಪದವಿ ಕಾಲೇಜು	₹27,897
ಸ್ನಾತಕೋತ್ತರ ಕಾಲೇಜು	₹30,897
ಗಣಕಯಂತ್ರ ಅತಿಥಿ ಉಪನ್ಯಾಸಕರು	₹25,697
ಗಣಕಯಂತ್ರ ಅತಿಥಿ ಶಿಕ್ಷಕರು	₹22,053



‘ನಮ್ಮ ಅನುಭವ, ಶ್ರಮಕ್ಕೆ ಬೆಲೆ ಇಲ್ಲ’

‘ಹೊರಗುತ್ತಿಗೆಯನ್ನು ತೆಗೆದುಹಾಕಿ ಶಿಕ್ಷಣ ಇಲಾಖೆಯಿಂದಲೇ ಕಾಯಂ ನೇಮಕ ಮಾಡಿಕೊಳ್ಳುವ ಭರವಸೆ ನೀಡಲಾಗಿತ್ತು. ಕಳೆದ ಶೈಕ್ಷಣಿಕ ಸಾಲಿನಲ್ಲೇ ಈ ಪ್ರಕ್ರಿಯೆ ನಡೆಯಬೇಕಾಗಿತ್ತಾದರೂ, ಮೊದಲ ವರ್ಷವಾದ್ದರಿಂದ ಅತಿಥಿ ಶಿಕ್ಷಕರನ್ನಾಗಿ ನೇಮಿಸಿಕೊಳ್ಳುತ್ತೇವೆ. ಮುಂದಿನ ವರ್ಷ ಕಾಯಂ ನೇಮಕ ವಾಗುತ್ತದೆ ಎಂದು ಹೇಳಿದ್ದರು. ಆದರೆ, 2025–26ರ ಶೈಕ್ಷಣಿಕ ವರ್ಷಕ್ಕೂ ಅತಿಥಿ ಶಿಕ್ಷಕರನ್ನೇ ನೇಮಿಸಿಕೊಳ್ಳಲಾಗುತ್ತಿದೆ. 10–15 ವರ್ಷ ಬೋಧನೆ ಮಾಡಿದವರು ಪ್ರತಿ ವರ್ಷ ತಮ್ಮ ಸಾಧನೆ ಹೇಳಿಕೊಳ್ಳಬೇಕಾಗಿದೆ. ನಮ್ಮ ಅನುಭವ, ಶ್ರಮಕ್ಕೆ ಬಿಬಿಎಂಪಿಯಲ್ಲಿ ಬೆಲೆಯೇ ಇಲ್ಲ’ ಎಂದು ಶಿಕ್ಷಕರೊಬ್ಬರು ಅಳಲು ತೋಡಿಕೊಂಡರು.

‘ಸರ್ಕಾರದಲ್ಲಿದೆ ಪ್ರಸ್ತಾವ’

‘ಶಿಕ್ಷಣ ಇಲಾಖೆಯಿಂದ ಬಿಬಿಎಂಪಿ ಶಾಲಾ–ಕಾಲೇಜುಗಳಿಗೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಪ್ರಸ್ತಾವ ಸರ್ಕಾರದ ಮುಂದಿದೆ. ಅಲ್ಲಿ ಇದುವರೆಗೆ ಯಾವುದೇ ನಿರ್ಧಾರವಾಗಿಲ್ಲ. ಹೀಗಾಗಿ, ಅತಿಥಿ ಶಿಕ್ಷಕರನ್ನು ನಿಯೋಜಿಸಿಕೊಳ್ಳಲಾಗುತ್ತಿದೆ. 2024–25ನೇ ಸಾಲಿನಲ್ಲಿ ಬೋಧಿಸಿದ್ದ ಅತಿಥಿ ಶಿಕ್ಷಕರನ್ನು ಏಪ್ರಿಲ್‌ನಲ್ಲೇ ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

2025–26ನೇ ಸಾಲಿಗೆ ಅವರೂ ಅತಿಥಿ ಶಿಕ್ಷಕರಾಗಿ ಬರಬಹುದು. 1:3 ಅನುಪಾತದಲ್ಲಿ ಅವರಿಗೆ ಆದ್ಯತೆ ನೀಡಲಾಗುತ್ತದೆ’ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಬರಡು ನೆಲ ಹಸಿರಾಗಿಸಲು ಎಲ್‌ಆರ್‌ಐ ಸಹಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬರಡು ಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಲು ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ (ಎಲ್‌ಆರ್‌ಐ) ಯೋಜನೆ ಸಹಕಾರಿ ಆಗಲಿದೆ. ಈಗಾಗಲೇ ಇದನ್ನು ಕರ್ನಾಟಕ, ಒಡಿಶಾದಲ್ಲಿ ಅನುಷ್ಠಾನಗೊಳಿಸಲಾಗಿದೆ’ ಎಂದು ಕೇಂದ್ರ ಸರ್ಕಾರದ ಭೂ ಸಂಪನ್ಮೂಲ ಇಲಾಖೆ ಜಂಟಿ ಕಾರ್ಯದರ್ಶಿ ನಿತಿನ್ ಖಾಡೆ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಜಲಾನಯನ ನಿರ್ವಹಣೆಯ ಉತ್ಕೃಷ್ಟ ಕೇಂದ್ರ, ಜಲಾನಯನ ಅಭಿವೃದ್ಧಿ ಇಲಾಖೆ, ಭೂ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿರುವ ‘ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ’ ಕುರಿತು ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಜಲಾನಯನ ಪ್ರದೇಶದಲ್ಲಿ ಬರುವ ಸರ್ವೆ ನಂಬರ್‌ವಾರು ನಿರ್ದಿಷ್ಟ ಸಮಸ್ಯೆಗಳು ಹಾಗೂ ಕಾರಣಗಳನ್ನು ಭೂ ಸಮೀಕ್ಷೆ ಹಾಗೂ ಜಲವಿಜ್ಞಾನ ಅಧ್ಯಯನಗಳಿಂದ ತಿಳಿದುಕೊಳ್ಳಲಾಗುತ್ತದೆ. ಈ ಸಮಸ್ಯೆಗಳನ್ನು ಪರಿಹರಿಸಲು ನಿಖರವಾದ ಭೂ ಹಾಗೂ ನೀರು ಸಂರಕ್ಷಣೆಯ ವಿಧಾನಗಳನ್ನು ಆಯ್ಕೆ ಮಾಡಿ, ಅನುಷ್ಠಾನ ಗೊಳಿಸಲಾಗುತ್ತದೆ. ಜಲಾನಯನ ಪ್ರದೇಶದಿಂದ ಹರಿದುಹೋಗುವ ನೀರನ್ನು ತಡೆಹಿಡಿಯಲು ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗುತ್ತದೆ. ಭೂ ಸಂಪನ್ಮೂಲ ಸಮೀಕ್ಷೆಯ ಆಧಾರದ ಮಾಹಿತಿಯ ಪ್ರಕಾರ ರೈತರ ಜಮೀನಿಗೆ ಸೂಕ್ತ ಬೆಳೆಗಳ ಆಯ್ಕೆಯನ್ನೂ ಮಾಡಲಾಗುತ್ತದೆ’ ಎಂದರು.



‘ಈ ಯೋಜನೆ ಅಡಿಯಲ್ಲಿ ಈಗಾಗಲೇ 35 ಸಾವಿರ ರೈತರಿಗೆ ಹವಾಮಾನ ಆಧಾರಿತ ಬೆಳೆಗಳನ್ನು ಬೆಳೆಯಲು ತರಬೇತಿ ನೀಡಲಾಗಿದೆ. ಇದರಲ್ಲಿ 16 ಸಾವಿರ ರೈತರು ತಮ್ಮ ಜಮೀನಿನಲ್ಲಿ ಈ ಪದ್ಧತಿಯ ಅನುಸಾರ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ಜಲಾನಯನ ಉತ್ಕೃಷ್ಟ ಕೇಂದ್ರದಿಂದ ದೇಶದ ವಿವಿಧ ರಾಜ್ಯಗಳ 923 ಅಧಿಕಾರಿಗಳು, ವಿಜ್ಞಾನಿಗಳು ಹಾಗೂ ಜಲಾನಯನ ನಿರ್ವಹಣೆಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ ನವೀನ ಪದ್ಧತಿಗಳ ಬಗ್ಗೆ ತರಬೇತಿ ನೀಡಲಾಗಿದೆ’ ಎಂದು ಮಾಹಿತಿ ನೀಡಿದರು.

ಜಲಾನಯನ ಇಲಾಖೆಯ ಆಯುಕ್ತ ಮಹೇಶ್ ಬಿ. ಶಿರೂರು, ನಿರ್ದೇಶಕ ಮೊಹಮ್ಮದ ಪರವೇಜ ಬಂತನಾಳ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪಿ.ಎಲ್‌. ಪಾಟೀಲ್, ವಿಶ್ವಬ್ಯಾಂಕ್‌ನ ಸಲಹೆಗಾರ ಜೆ.ವಿ.ಆರ್. ಮೂರ್ತಿ ಉಪಸ್ಥಿತರಿದ್ದರು.



ಪದವಿ ಪ್ರದಾನ

ಅರಿಹಂತ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಬುಧವಾರ ಆಯೋಜಿಸಿದ್ದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಕೆ.ಪಿ. ಪುತ್ತೂರಾಯ, ಅರಿಹಂತ್ ವಿದ್ಯಾಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಯಶಸ್ವಿ ನಗೋರಿ, ಸಂಸ್ಥೆಯ ನಿರ್ದೇಶಕ ಸಿ. ಗಿರೀಶ್, ಪ್ರಾಂಶುಪಾಲರಾದ ಎ.ಎಸ್. ಗುರುದತ್, ಎಸ್. ಅನಿಲ್ ಕುಮಾರ್ ಉಪಸ್ಥಿತರಿದ್ದರು

‘ರೈತರು ಬದುಕಿದ್ದರೆ ಹೋರಾಟದಲ್ಲಿ ಭಾಗವಹಿಸಲಿ’

ಮಾಗಡಿ: ತಾಲ್ಲೂಕಿಗೆ ಹೇಮಾವತಿ ನೀರು ತರುವಂತೆ ಒತ್ತಾಯಿಸಿ ‘ನಮ್ಮ ನೀರು, ನಮ್ಮ ಹಕ್ಕು’ ಘೋಷಣೆ ಅಡಿಜೂನ್ 5ರಂದು ಮರೂರು ಹ್ಯಾಂಡ್ ಪೋಸ್ಟ್‌ನಲ್ಲಿ ರಸ್ತೆ ತಡೆದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ತಾಲೂಕಿನಲ್ಲಿ ರೈತರು ಜೀವಂತ ಇದ್ದರೆ ಹೋರಾಟದಲ್ಲಿ ಭಾಗವಹಿಸುತ್ತಾರೆ ಎಂದು ಶಾಸಕ ಎಚ್‌.ಸಿ.ಬಾಲಕೃಷ್ಣ ಹೇಳಿದ್ದಾರೆ.



ಎಚ್‌.ಸಿ.ಬಾಲಕೃಷ್ಣ

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಪಕ್ಷದ ಕಾರ್ಯಕ್ರಮವೂ ಅಲ್ಲ, ನನ್ನ ಮಗಳ ಮದುವೆಯೂ ಅಲ್ಲ. ಮಾಗಡಿ ತಾಲ್ಲೂಕಿನ ಶಕ್ತಿ ಪ್ರದರ್ಶನ ಮಾಡಲು, ಜನರ ಹಿತದೃಷ್ಟಿಯಿಂದ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದರು.

‘ಮಾಗಡಿ ತಾಲ್ಲೂಕಿಗೆ ಹಂಚಿಕೆಯಾಗಿರುವ ಮುಕ್ಕಾಲು ಟಿಎಂಸಿ ನೀರು ಪಡೆಯುವವರೆಗೆ ಬಿಡಲ್ಲ, ಹೋರಾಟ ನಡೆಸುತ್ತೇವೆ. ತುಮಕೂರು ಜಿಲ್ಲೆಯವರು ಅನವಶ್ಯವಾಗಿ ನಮ್ಮೊಂದಿಗೆ ಜಗಳ ವಾಡುವುದು ಬೇಡ. ನಮಗೆ ಹಂಚಿಕೆಯಾಗಿರುವ ನೀರನ್ನು ನಮಗೆ ಕೊಡಲಿ. ಲಿಂಕ್ ಕೆನಾಲ್ ಕಾಮಗಾರಿ ನಡೆಸಲು ಅವಕಾಶ ಮಾಡಿಕೊಡಲಿ’ ಎಂದು ಮನವಿ ಮಾಡಿದರು.

ಹೇಮಾವತಿ ನೀರನ್ನು ಕನಕಪುರಕ್ಕೆ ತೆಗೆದುಕೊಂಡು ಹೋಗುತ್ತಾರೆ ಎಂದು ತುಮಕೂರಿನವರು ಅಪಪ್ರಚಾರ ಮಾಡುತ್ತಿದ್ದಾರೆ. ಗೃಹ ಸಚಿವ ಜಿ.ಪರಮೇಶ್ವರ ಈ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದಾರೆ ಎಂದರು.

₹8 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕ್ಷೇತ್ರದ ಅಟ್ಟೂರು, ಉಪನಗರ, ಚೌಡೇಶ್ವರಿ ಹಾಗೂ ಕೆಂಪೇಗೌಡ ವಾರ್ಡ್‌ಗಳ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ₹8 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್‌.ಆರ್. ವಿಶ್ವನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಪಾಲಿಕೆಯ ನಾಲ್ಕು ವಾರ್ಡುಗಳ ವ್ಯಾಪ್ತಿಯ 10 ಬಡಾವಣೆಗಳಲ್ಲಿ ರಸ್ತೆ, ಚರಂಡಿ ಹಾಗೂ ಉದ್ಯಾನಗಳ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ. ಮಳೆನೀರು ಕಾಲುವೆಗಳಲ್ಲಿ ಸಂಗ್ರಹವಾಗಿರುವ ಹೂಳನ್ನು ತೆರವುಗೊಳಿಸಿ, ಪ್ರವಾಹಗಳು ಬಂದಾಗ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿದುಹೋಗಲು ಅವಕಾಶ ಕಲ್ಪಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ತಿಳಿಸಿದರು.

ಅಭಿವೃದ್ಧಿ ಕಾರ್ಯಗಳಿಗಾಗಿ ರಾಜ್ಯ ಸರ್ಕಾರದಿಂದ ಅಗತ್ಯ ಅನುದಾನ ಬಿಡುಗಡೆಯಾಗುತ್ತಿಲ್ಲ. ಅನುದಾನದ ಕೊರತೆಯ ನಡುವೆಯೂ ಅಧಿಕಾರಿಗಳಿಗೆ ಮನವಿ ಮಾಡಿ, ಸ್ವಲ್ಪ ಮಟ್ಟಿಗೆ ಅನುದಾನ ಮಂಜೂರು ಮಾಡಿಸಿಕೊಂಡು ಅಭಿವೃದ್ಧಿ ಕಾಮಗಾರಿಗೆ ಹಿನ್ನಡೆಯಾಗದಂತೆ ಗಮನಹರಿಸಲಾಗುತ್ತಿದೆ. ಇನ್ನೂ ₹18 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು. ನಿರ್ವಹಣಾ ಕಾರ್ಯಗಳಿಗಾಗಿ ಅನುದಾನದ ಅಗತ್ಯವಿದ್ದು, ಸರ್ಕಾರ ತಕ್ಷಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಪಾಲಿಕೆ ಮಾಜಿ ಸದಸ್ಯ ಎಂ.ಮುನಿರಾಜು, ಬಿಜೆಪಿ ಮುಖಂಡರಾದ ಚೊಕ್ಕನಹಳ್ಳಿ ವೆಂಕಟೇಶ್, ಎ.ಸಿ.ಮುನಿಕೃಷ್ಣಪ್ಪ, ಮುರಾರಿರಾಮು, ಈಶ್ವರ್, ವಿ.ಪವನ್ ಕುಮಾರ್, ಮುನಿಯಪ್ಪ, ಓಂ ರವೀಂದ್ರ, ಲತಾ ಚಂದ್ರಶೇಖರ್, ಎಚ್‌.ಎಸ್‌.ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಬಿಐಸಿಯಲ್ಲಿ ನಾಳೆ ಸಂಜೆ ‘ದೊಡ್ಡಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ಶುಕ್ರವಾರ (ಜೂನ್ 6) ಸಂಜೆ 6.30ಕ್ಕೆ ‘ದೊಡ್ಡಾಟ’ ಹಮ್ಮಿಕೊಂಡಿದೆ.

ಹುಬ್ಬಳ್ಳಿಯ ಜಿ.ಕೆ ಕಲಾ ವೇದಿಕೆಯು ಬಿಐಸಿ ಕೇಂದ್ರದಲ್ಲಿ ದೊಡ್ಡಾಟ ಪ್ರಸ್ತುತಪಡಿಸಲಿದೆ. ದೊಡ್ಡಾಟವು ಶ್ರೀಮಂತ ಶಬ್ದ ಸಂಪತ್ತು, ಕಾವ್ಯ ಲಹರಿ ಹಾಗೂ ಕನ್ನಡ ಸಂಸ್ಕೃತಿಯ ತಿರುಳನ್ನು ಒಳಗೊಂಡ ಗ್ರಾಮೀಣ ಪ್ರದೇಶದ ಕಲೆ. ಬಯಲಾಟದ ಪ್ರಕಾರವಾಗಿರುವ ಇದು, ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿದೆ. ರಂಗಪೂಜೆ, ಚೆಂಡೆ–ಮದ್ದಳೆಯಂತಹ ಸಾಂಪ್ರದಾಯಿಕ ವಾದನ, ವಿಶಿಷ್ಟ ವೇಷಭೂಷಣ ಸೇರಿ ಹಲವು ವೈಶಿಷ್ಟ್ಯಗಳನ್ನು ಈ ಕಲೆ ಒಳಗೊಂಡಿದೆ.



ದೊಡ್ಡಾಟ (ಸಾಂದರ್ಭಿಕ ಚಿತ್ರ)

ದೊಡ್ಡಾಟವು ಆಧುನೀಕರಣದ ಸವಾಲುಗಳನ್ನು ಎದುರಿಸುತ್ತಿದೆ. ಈ ಅಪರೂಪದ ಕಲಾ ಪ್ರಕಾರವನ್ನು ಉಳಿಸಿಕೊಳ್ಳುವುದು, ಪುನರುಜ್ಜೀವನಗೊಳಿಸುವುದು ಅಗತ್ಯವಾಗಿದೆ. ಕಲಾ ಪ್ರೇಮಿಗಳು, ವಿದ್ಯಾರ್ಥಿಗಳು, ನಾಡಿನ ಶ್ರೀಮಂತ ಸಂಪ್ರದಾಯದ ಬಗ್ಗೆ ಕುತೂಹಲ ಹೊಂದಿರುವವರು ದೊಡ್ಡಾಟದ ಪರಂಪರೆಯನ್ನು ಮುಖಾಮುಖಿಯಾಗಿಸಿಕೊಳ್ಳುವ ಅವಕಾಶವನ್ನು ಒದಗಿಸಲಿದೆ.

ಇದು ‘ಬಿಐಸಿ ಜಾನಪದ’ ಸರಣಿಯ ಮೂರನೇ ಕಾರ್ಯಕ್ರಮವಾಗಿದ್ದು, ‘ತ್ವರಿತ ಆರ್ಟ್ಸ್ ಕಲೆಕ್ಟಿವ್ ಇಂಡಿಯಾ’ದ ಸಹಯೋಗವಿದೆ. ಪ್ರವೇಶ ಉಚಿತ. ಮೊದಲು ಬಂದವರಿಗೆ ಆಸನಗಳು ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭರವಸೆ

‘ಪುಸ್ತಕ ಖರೀದಿ: ತೊಡಕು ನಿವಾರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಖರೀದಿಗೆ ಇರುವ ಕಾನೂನು ತೊಡಕುಗಳನ್ನು ನಿವಾರಣೆ ಮಾಡಬೇಕಿದೆ. ಈ ಸಂಬಂಧ ಸಾಹಿತಿಗಳನ್ನೊಳಗೊಂಡ ನಿಯೋಗವನ್ನು ಮುಖ್ಯಮಂತ್ರಿ ಬಳಿ ಕರೆದೊಯ್ಯಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭರವಸೆ ನೀಡಿದರು.

ಕನ್ನಡ ಪುಸ್ತಕ ಪ್ರಾಧಿಕಾರ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಾಧಿಕಾರದ ನಾಲ್ಕು ವರ್ಷಗಳ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಇದೇ ವೇಳೆ ‘ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ’ ವಿಜೇತ ಲೇಖಕಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಭಾಸ್ತಿ ಅವರನ್ನು ಅಭಿನಂದಿಸಿ, ರಾಜ್ಯ ಸರ್ಕಾರದ ವತಿಯಿಂದ ಘೋಷಿಸಲಾಗಿದ್ದ ತಲಾ ₹10 ಲಕ್ಷದ ಚೆಕ್ ವಿತರಿಸಲಾಯಿತು.

ಈ ವೇಳೆ ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಧಿಕಾರದ ಅಧ್ಯಕ್ಷ ಮಾನಸ, ‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಕೃತಿಯೊಂದರ 300 ಪ್ರತಿಗಳನ್ನು ಖರೀದಿಸಲಾಗುತ್ತಿತ್ತು. ಇದು ಪ್ರಕಾಶಕರು ಹಾಗೂ ಲೇಖಕರಿಗೆ ಸಹಕಾರಿಯಾಗಿತ್ತು. ಆದರೆ, ಈ ಯೋಜನೆಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಿರಲಿಲ್ಲ. ಇದೇ ಕಾರಣಕ್ಕೆ ಯೋಜನೆಯನ್ನು ಸ್ಥಗಿತ ಮಾಡಲಾಗಿದೆ. ಈ ಯೋಜನೆ ಮುಂದುವರಿಸಲು ಎದುರಾಗಿರುವ ಕಾನೂನು ತೊಡಕನ್ನು ತುರ್ತಾಗಿ ನಿವಾರಿಸಬೇಕು. ಕೋಟ್ಯಂತರ ರೂಪಾಯಿ ಗ್ರಂಥಾಲಯ ಕರ ಸಂಗ್ರಹವಾಗುತ್ತಿದ್ದು, ಕಾನೂನು ತಿದ್ದುಪಡಿ ಮಾಡಿದಲ್ಲಿ ಆ ಹಣವನ್ನು ಪುಸ್ತಕ ಖರೀದಿಗೆ ಬಳಸಿಕೊಳ್ಳಬಹುದು. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗದು’ ಎಂದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಶಿವರಾಜ್ ತಂಗಡಗಿ, ‘ಸಾಹಿತಿಗಳ, ಪುಸ್ತಕಗಳ ವಿಚಾರದಲ್ಲಿ ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ಕೆಲಸ ಮಾಡಲಿದೆ. ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಖರೀದಿಗೆ ಎದುರಾಗಿರುವ ಕಾನೂನು ತೊಡಕು ಬಗ್ಗೆ ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು. ಯೋಜನೆ ಪುನರಾರಂಭದಿಂದ ಆರ್ಥಿಕ ಹೊರೆಯಾಗುವುದಿಲ್ಲ ಎಂದಾದರೆ ಕಾನೂನು ತೊಡಕು ನಿವಾರಣೆ ಸಾಧ್ಯವಾಗಲಿದೆ. ಎಲ್ಲ ಅಕಾಡೆಮಿಗಳ ಅಧ್ಯಕ್ಷರು, ಸಾಹಿತಿಗಳನ್ನು ಒಳಗೊಂಡ ನಿಯೋಗವನ್ನು ಮುಖ್ಯಮಂತ್ರಿ ಬಳಿ ಕರೆದೊಯ್ದು, ಅವರಿಗೆ ಮನವರಿಕೆ ಮಾಡಿಸಲಾಗುವುದು’ ಎಂದು ಹೇಳಿದರು.

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್, ‘ಪ್ರಭುತ್ವವು ಜನಪರ ಮತ್ತು ಜೀವಪರ ಆಗಿದ್ದಾಗಲೆ ಕಲೆ, ಸಾಹಿತ್ಯ, ಸಂಸ್ಕೃತಿಯ ಪೋಷಣೆ ಸಾಧ್ಯವಾಗಲಿದೆ. ಯಾವ ಪ್ರಭುತ್ವ ಜನವಿರೋಧಿ ಆಗಿರುತ್ತದೆಯೊ, ಯಾವ ಪ್ರಭುತ್ವವು ಜನರಿಗೆ ಸಾಹಿತ್ಯದ ಮೂಲಕ ರಾಜಕೀಯ, ಐತಿಹಾಸಿಕ ಮತ್ತು ಸಾಮಾಜಿಕ ಒಳನೋಟ ಸಿಗಬಾರದೆಂದು ತೀರ್ಮಾನ ಮಾಡುತ್ತದೆಯೋ ಅಂತಹ ಪ್ರಭುತ್ವ ಸಾಹಿತ್ಯ, ಕಲೆಯನ್ನು ಹತ್ತಿಕ್ಕುತ್ತದೆ. ಸಾಹಿತಿಗಳನ್ನು ಜೈಲಿಗೆ ಅಟ್ಟುತ್ತದೆ’ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಅರವಿಂದ ಮಾಲಗತ್ತಿ ಅವರು ಅಭಿನಂದನಾ ನುಡಿಗಳನ್ನಾಡಿದರು.



ಪ್ರಶಸ್ತಿ ಪುರಸ್ಕೃತರೊಂದಿಗೆ ಶಿವರಾಜ್ ತಂಗಡಗಿ, ಬಾನು ಮುಷ್ತಾಕ್, ದೀಪಾ ಭಾಸ್ತಿ, ಮಾನಸ, ಚನ್ನಪ್ಪ ಕಟ್ಟಿ, ಪುರುಷೋತ್ತಮ ಬಿಳಿಮಲೆ, ಅರವಿಂದ ಮಾಲಗತ್ತಿ, ಕೆ.ಎಂ. ಗಾಯತ್ರಿ, ಕಿರಣ್ ಸಿಂಗ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

> **ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಯ ಸಂಭ್ರಮ ಇಲ್ಲಿಗೆ ನಿಲ್ಲಬಾರದು. ನಮ್ಮಲ್ಲಿ ಸಾಕಷ್ಟು ಅದ್ಭುತ ಕೃತಿಗಳಿದ್ದು, ಅವು ಬೇರೆ ಭಾಷೆಗಳಿಗೆ ಅನುವಾದವಾಗಬೇಕು**
> **ದೀಪಾ ಭಾಸ್ತಿ,** ಅನುವಾದಕಿ

ನಾಲ್ಕು ವರ್ಷಗಳ ಪ್ರಶಸ್ತಿ ಪುರಸ್ಕೃತರು

ಸಮಾರಂಭದಲ್ಲಿ ಪ್ರಾಧಿಕಾರದ ವತಿಯಿಂದ 2021, 2022, 2023 ಮತ್ತು 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಬೆಂಗಳೂರಿನ ರಾಷ್ಟ್ರೋತ್ಥಾನ ಸಾಹಿತ್ಯದ ಪರವಾಗಿ ದಿನೇಶ್ ಹೆಗ್ಡೆ, ಗದಗದ ಲಡಾಯಿ ಪ್ರಕಾಶನದ ಪರವಾಗಿ ಬಸವರಾಜ ಸೂಳಿಭಾವಿ, ಮೈಸೂರಿನ ಅಭಿರುಚಿ ಪ್ರಕಾಶನ ಪರವಾಗಿ ಎ. ಗಣೇಶ ಹಾಗೂ ಕಲಬುರಗಿಯ ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘದ ಪರವಾಗಿ ಅಪ್ಪಾರಾವ ಅಕ್ಕೋಣೆ ಅವರಿಗೆ ‘ಅತ್ಯುತ್ತಮ ಪ್ರಕಾಶನ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ತಲಾ ₹ 1 ಲಕ್ಷ ನಗದು ಹೊಂದಿದೆ.

ಧಾರವಾಡದ ಗುರುಲಿಂಗ ಕಾಪಸೆ ಅವರ ಪರವಾಗಿ ಅವರ ಪುತ್ರ ಚಂದ್ರಶೇಖರ್, ಮೈಸೂರಿನ ಪ್ರೊ.ಪಿ.ವಿ. ನಂಜರಾಜ ಅರಸ್, ಮಂಗಳೂರಿನ ಇಂದಿರಾ ಹೆಗ್ಗಡೆ ಹಾಗೂ ವಿಜಯನಗರದ ಹೊಸಪೇಟೆಯ ಕೆ. ರವೀಂದ್ರನಾಥ್ ಅವರಿಗೆ ‘ಡಾ.ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ತಲಾ ₹ 75 ಸಾವಿರ ನಗದು ಒಳಗೊಂಡಿದೆ.

‘ಡಾ.ಜಿ.ಪಿ.ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ’ಯನ್ನು ಮೂಡಬಿದರೆಯ ಎಂ. ಮೋಹನ ಆಳ್ವ, ಮಂಡ್ಯದ ಪ್ರೊ.ಬಿ.ಜಯಪ್ರಕಾಶಗೌಡ, ಬಳ್ಳಾರಿಯ ಹಗರಿಬೊಮ್ಮನಹಳ್ಳಿಯ ಮೇಟಿಕೊಟ್ರಪ್ಪ, ಮೈಸೂರಿನ ರಂಗನಾಥ ಅವರಿಗೆ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ.

ಬೆಂಗಳೂರಿನ ನಾ. ಸೋಮೇಶ್ವರ, ಮೈಸೂರಿನ ಶ್ರೀಮತಿ ಹರಿಪ್ರಸಾದ್, ಯಾದಗಿರಿಯ ಎಸ್.ಎಸ್. ಗುಬ್ಬಿ ಮತ್ತು ಬಾಗಲಕೋಟೆಯ ಕರವೀರಪ್ರಭು ಕ್ಯಾಲಕೊಂಡ ಅವರಿಗೆ ‘ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ’ ವಿತರಿಸಲಾಯಿತು. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಹೊಂದಿದೆ. ಇದೇ ವೇಳೆ ‘ಪುಸ್ತಕ ಸೊಗಸು’ ಹಾಗೂ ‘ಮುದ್ರಣ ಸೊಗಸು’ ಬಹುಮಾನ ವಿತರಿಸಲಾಯಿತು.

‘ಕಮಲ್ ಹಾಸನ್ ಕ್ಷಮೆ ಕೋರಬೇಕು’

ಬೆಂಗಳೂರು: ‘ಕನ್ನಡ ಭಾಷೆಯ ಹುಟ್ಟಿನ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡುವ ಮೂಲಕ ಕನ್ನಡಿಗರಲ್ಲಿ ಆಕ್ರೋಶವನ್ನುಂಟು ಮಾಡಿರುವ ತಮಿಳು ನಟ ಕಮಲ್ ಹಾಸನ್, ಈಗಲಾದರೂ ತನ್ನ ತಪ್ಪನ್ನು ಒಪ್ಪಿಕೊಂಡು ಕನ್ನಡಿಗರ ಬಳಿ ಕ್ಷಮೆ ಕೋರಬೇಕು’ ಎಂದು ಕರ್ನಾಟಕ ವಿಕಾಸ ರಂಗ ಆಗ್ರಹಿಸಿದೆ.

‘ತಮಿಳು ಭಾಷೆಗೆ ಈವರೆಗೂ ಅಂಕಿಯನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ. ಕನ್ನಡ ಭಾಷೆಗೆ ತನ್ನದೇ ಆದ ಅಂಕಿಗಳಿವೆ. ಇದರಿಂದಲೇ ಗೊತ್ತಾಗಲಿದೆ, ಕನ್ನಡ ಭಾಷೆ ಎಷ್ಟು ಶ್ರೇಷ್ಠವೆಂದು. ಸಾಮಾನ್ಯ ಜ್ಞಾನ ಇಲ್ಲದ, ಇತಿಹಾಸದ ಅರಿವಿಲ್ಲದ ಕಮಲ್ ಹಾಸನ್ ಅನಗತ್ಯವಾಗಿ ಕನ್ನಡಿಗರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಅವರು ಹೈಕೋರ್ಟ್ ತೀರ್ಪನ್ನು ಗೌರವಿಸಬೇಕು’ ಎಂದು ಕರ್ನಾಟಕ ವಿಕಾಸ ರಂಗದ ರಾಜ್ಯ ಘಟಕದ ಅಧ್ಯಕ್ಷ ವ.ಚ. ಚನ್ನೇಗೌಡ ಹೇಳಿದ್ದಾರೆ.

‘ಕನ್ನಡಿಗರ ಆಕ್ರೋಶ ಮುಂದೆ ಹಲವು ತಿರುವುಗಳನ್ನು ಪಡೆದುಕೊಳ್ಳುವ ಸಾಧ್ಯತೆಯಿದೆ. ಮುಂದಿನ ಆಗು ಹೋಗುಗಳಿಗೆ ಅವರೇ ಹೊಣೆಯಾಗಬೇಕಾಗುತ್ತದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಭೂ ರಹಿತರಿಗೆ ಭೂಮಿ ನೀಡುವ ಹೋರಾಟ ಬೇಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂ ರಹಿತರಿಗೆ ಭೂಮಿ ವಿತರಿಸುವ ಹೋರಾಟವನ್ನು ಮತ್ತೆ ಕಟ್ಟುವ ಮೂಲಕ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ವಾದವನ್ನು ಮುಂದುವರಿಸಬೇಕಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಹಾಗೂ ನಿಗಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಸಂಘದ ಆಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ಭೂ ರಹಿತರಿಗೆ ಭೂಮಿ ನೀಡುವ ಕೆಲಸ ನಡೆದಿತ್ತು. ಆದರೂ ಮತ್ತೆ ಜಮೀನು ಕ್ರೋಡೀಕರಣ ವಾಗುತ್ತಿದೆ. ಹೀಗಾಗಿ ಮತ್ತೆ ಭೂ ರಹಿತರಿಗೆ ಭೂಮಿ ನೀಡುವ ಹೋರಾಟ ಕಟ್ಟುವ ಅನಿವಾರ್ಯ ಇದೆ. ಆ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯ-ಬೇಕಿದೆ’ ಎಂದರು.

‘ಅಂಬೇಡ್ಕರ್ ರಚಿಸಿದ ಸಂವಿಧಾನ ಪೂರ್ಣ ಭಾರತೀಯ ಸಂವಿಧಾನ ಅಲ್ಲ ಎಂಬ ಕೂಗು ಈಗ ಬಲವಾಗುತ್ತಿದೆ. ಹೀಗೆ ಕೂಗುತ್ತಿರುವವರು ದೇಶದಲ್ಲಿ ಮನು-ಸ್ಮೃತಿಯನ್ನು ಮತ್ತೆ ಹೇರಲು ಪ್ರಯತ್ನಿ-ಸುತ್ತಿದ್ದಾರೆ. ಆದರೆ, ವಿಶ್ವದಲ್ಲಿ ಎಲ್ಲರನ್ನೂ ಸಮನಾಗಿ ಕಾಣುವ ಗ್ರಂಥವೆಂದರೆ ಅದು ಭಾರತೀಯ ಸಂವಿಧಾನ ಮಾತ್ರ. ಹೀಗಾಗಿ ಸಂವಿಧಾನವನ್ನು ಎತ್ತಿಹಿಡಿಯ-ಬೇಕಾಗಿದೆ’ ಎಂದು ಹೇಳಿದರು.

‘ಅಂಬೇಡ್ಕರ್ ಅವರು ಭಾರತಕ್ಕೆ ಸದಾ ಪ್ರಸ್ತುತವಾಗಿರುವುದು ಏಕೆ ಮತ್ತು ಅವರು ರಚಿಸಿದ ಸಂವಿಧಾನ ಏಕೆ ಶ್ರೇಷ್ಠ ಎಂಬುದರ ಕುರಿತು ಖ್ಯಾತ ನೇತ್ರ ತಜ್ಞ ಡಾ.ಎಚ್.ಆರ್.ಸುರೇಂದ್ರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಕೆಪಿಸಿಎಲ್‌ನ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರ ಮಕ್ಕಳಿಗೆ ಚಿನ್ನದ ಪದಕಗಳನ್ನು ನೀಡಿ ಗೌರವಿಸಲಾಯಿತು.

ಕೆಪಿಸಿಎಲ್‌ನ ಮಾನವ ಸಂಪನ್ಮೂಲ ನಿರ್ದೇಶಕ ನಾಗರಾಜ ಸಿ., ಹಣಕಾಸು ನಿರ್ದೇಶಕ ಆರ್.ನಾಗರಾಜ, ತಾಂತ್ರಿಕ ನಿರ್ದೇಶಕ ಆರ್.ಕೃಷ್ಣಮೂರ್ತಿ, ಪ್ರಧಾನ ವ್ಯವಸ್ಥಾಪಕರಾದ ಆಶಾ, ನಿಗಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಭೀಮಯ್ಯ ನಾಯ್ಕ್, ಪ್ರಧಾನ ಕಾರ್ಯದರ್ಶಿ ಮಿರ್ಜಾ ಕುಮಾರ್, ಬೆಂಗಳೂರು ವಲಯದ ಅಧ್ಯಕ್ಷೆ ಶಿಲ್ಪಾ ಡಿ.ರಾಜು, ಕಾರ್ಯದರ್ಶಿ ಈರಪ್ಪ ಮತ್ತಿತರರು ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ ಪುರುಷೋತ್ತಮ ಬಿಳಿಮಲೆ ಮತ್ತಿತರರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ಅಸ್ಪೃಶ್ಯತೆ ಬಂದಿರುವುದು ಶೂದ್ರರಿಂದ: ಅಗ್ನಿ ಶ್ರೀಧರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಸ್ಪೃಶ್ಯತೆ ಬ್ರಾಹ್ಮಣರಿಂದ ಬಂದಿದೆ ಎಂಬುದು ಸರಿಯಲ್ಲ, ಶೂದ್ರರಿಂದಲೇ ಬಂದಿರುವುದು’ ಎಂದು ಪತ್ರಕರ್ತ ಅಗ್ನಿ ಶ್ರೀಧರ್ ತಿಳಿಸಿದರು.

ಸಮತಾ ಸೈನಿಕ ದಳ (ಎಸ್ಎಸ್‌ಡಿ) ಬುಧವಾರ ಹಮ್ಮಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ, ಎಸ್ಎಸ್‌ಡಿ ರಾಷ್ಟ್ರೀಯ ಅಧ್ಯಕ್ಷ ಎಂ.ವೆಂಕಟಸ್ವಾಮಿ ಅವರ 72ನೇ ಜನ್ಮ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಪರಿವರ್ತನಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಶೂದ್ರರು ಬ್ರಾಹ್ಮಣರಿಗೆ ಶರಣಾಗಿ ಅವರು ಹೇಳುವ ಕಟ್ಟುಪಾಡು ಗಳನ್ನು ಪಾಲಿಸಲು ಒಪ್ಪಿಕೊಂಡಿದ್ದರು. ಅದನ್ನು ಒಪ್ಪದವರೇ ಅಸ್ಪೃಶ್ಯರಾದರು. ಹೊಲೆಯರು, ಮಾದಿಗರೆಲ್ಲ ಒಂದು ಕಾಲದಲ್ಲಿ ಒಕ್ಕಲಿಗರೇ ಆಗಿದ್ದರು ಎಂದು ಅಭಿಪ್ರಾಯಪಟ್ಟರು.

ಮೀಸಲಾತಿ ತೆಗೆದರೆ ಒಬ್ಬನೇ ಒಬ್ಬ ದಲಿತ ಗೆಲ್ಲಲು ಸಾಧ್ಯವಿಲ್ಲ. ಹಾಗಾಗಿ ಮೀಸಲಾತಿ ಅಗತ್ಯ ಎಂದು ಪ್ರತಿಪಾದಿಸಿದರು.

ಸಂಸದ ಡಾ. ಸಿ.ಎನ್. ಮಂಜುನಾಥ್ ಮಾತನಾಡಿ, ‘ಒಬ್ಬರು ಎಲ್ಲರಿಗೂ ಸಹಾಯ ಮಾಡಲು ಆಗುವುದಿಲ್ಲ. ಎಲ್ಲರೂ ಒಬ್ಬೊಬ್ಬರಿಗೆ ಸಹಾಯ ಮಾಡಲು ಸಾಧ್ಯ. ಹಳಸಿದ್ದನ್ನು ಕೊಡುವ ಬದಲು ಉಳಿಸಿದ್ದನ್ನು ಕೊಡಬೇಕು. ಕಿತ್ತು ತಿನ್ನಬಾರದು. ಹಂಚಿ ತಿನ್ನಬೇಕು. ಇನ್ನೊಬ್ಬರಿಗೆ ಸಹಾಯ ಮಾಡಿದರೆ ಜಾಸ್ತಿ ದಿನ ಬದುಕುತ್ತೇವೆ’ ಎಂದು ಹೇಳಿದರು.

‘ನಮಗೆ ನೋವಾಗುವುದು ಅರಿವಾದರೆ ನಾವು ಜೀವಂತ ಇದ್ದೇವೆ ಎಂದರ್ಥ. ಬೇರೆಯವರ ನೋವು ಅರ್ಥವಾದರೆ ನಾವು ಮನುಷ್ಯರು ಎಂದರ್ಥ. ಜ್ಞಾನದ ಭಾಷೆಗಿಂತ ಹೃದಯದ ಭಾಷೆ ಮಿಗಿಲು’ ಎಂದರು.

ಹೋರಾಟಗಾರ್ತಿ ಬಿ.ಟಿ. ಲಲಿತಾನಾಯಕ್ ಮಾತನಾಡಿ, ‘ಒಂದು ಕಡೆಯಿಂದ ದಲಿತ ಸಮುದಾಯದವರು ಬೆಳೆಯುತ್ತಿದ್ದಾರೆ. ಇನ್ನೊಂದು ಕಡೆಯಿಂದ ಬೀಳುತ್ತಿದ್ದಾರೆ. ಇದರ ಬಗ್ಗೆ ವಿಮರ್ಶೆ ನಡೆಯಬೇಕು’ ಎಂದು ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ನಾರಾಯಣ ಕುಮಾರ್ ಅವರಿಗೆ ಮರಣೋತ್ತರವಾಗಿ ನೀಡಿದ್ದು, ಅವರ ಮಗ ಗುರುದೇವ್ ನಾರಾಯಣ ಕುಮಾರ್ ಪ್ರಶಸ್ತಿ ಸ್ವೀಕರಿಸಿದರು. ನಾಗಸೇನಾ ಬುದ್ಧವಿಹಾರದ ಬಿಕ್ಕುಣಿ ಬುದ್ಧಮ್ಮ ಪಂಚಶೀಲ ತತ್ವ ಬೋಧಿಸಿದರು. ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು. ಎಂ. ವೆಂಕಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.



ಸಮತಾ ಸೈನಿಕ ದಳವು ‘ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ’ಯನ್ನು ನಾರಾಯಣ ಕುಮಾರ್ ಅವರಿಗೆ ಮರಣೋತ್ತರವಾಗಿ ನೀಡಿದ್ದು, ಅವರ ಮಗ ಗುರುದೇವ್ ನಾರಾಯಣ ಕುಮಾರ್ ಪ್ರಶಸ್ತಿ ಸ್ವೀಕರಿಸಿದರು ಪ್ರಜಾವಾಣಿ ಚಿತ್ರ

‘ವೃಕ್ಷ ರಕ್ಷಾ ಅಭಿಯಾನ’ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ಪ್ರದೇಶ-ದಲ್ಲಿರುವ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ 368 ಮರಗಳನ್ನು ಕಡಿಯಬಾರದು ಎಂದು ಆಗ್ರಹಿಸಿ, ಪರಿಸರಕ್ಕಾಗಿ ನಾವು ಸಂಘಟನೆ ವತಿಯಿಂದ ಗುರುವಾರ ‘ವೃಕ್ಷ ರಕ್ಷಾ ಅಭಿಯಾನ’ ಆಯೋಜಿಸಲಾಗಿದೆ.

‘ಮರಗಳನ್ನು ರಕ್ಷಿಸುವುದು ಇಂದಿನ ತುರ್ತು ಅಗತ್ಯ. ಹೀಗಾಗಿ, 368 ಮರಗಳನ್ನೂ ಉಳಿಸಬೇಕು ಎಂದು ಪರಿಸರ ದಿನವಾದ ಜೂನ್ 5ರಂದು, ರೈಲ್ವೆ ಕಾಲೊನಿಯಲ್ಲಿ ಅಭಿಯಾನ ನಡೆಸಲಾಗುತ್ತದೆ’ ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಅವರು ಪತ್ರಿಕಾಗೋಷ್ಠಿ-ಯಲ್ಲಿ ಮಂಗಳವಾರ ತಿಳಿಸಿದರು.

‘ಉದ್ಯಾನ ನಗರಿ, ಸುಂದರ ನಗರಿಯಾಗಿದ್ದ ಬೆಂಗಳೂರು ಇಂದು ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಗಳಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪರಿಸರಕ್ಕೆ ಮಾರಕವಾಗಿ ಬೃಹತ್ ಮರಗಳನ್ನು ಕಡಿಯುವ ಮೂಲಕ ನಗರಕ್ಕೆ ದೊಡ್ಡ ಕಳಂಕ ಎದುರಾಗಿದೆ’ ಎಂದರು.

‘ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ಬಾಗ್ಮನೆಯವರಿಗೆ ವಾಣಿಜ್ಯ ಕಟ್ಟಡ ನಿರ್ಮಿಸಲು ಭೂಮಿ ನೀಡಲು ರಾಜ್ಯ–ಕೇಂದ್ರ ಸರ್ಕಾರದ ಅಧಿಕಾರಿಗಳು ಕೈಜೋಡಿಸಿದ್ದಾರೆ. ಇವರು ಕಡಿಯಲು ಉದ್ದೇಶಿಸಿರುವ 368 ಮರಗಳಲ್ಲಿ 84 ಪಾರಂಪರಿಕ ಮರಗಳಿವೆ. ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಗಳು ನಡೆಸಿದ ಸಭೆಯಲ್ಲಿ ಎಲ್ಲ ನಾಗರಿಕರೂ ಮರಗಳನ್ನು ಕಡಿಯಬಾರದು ಎಂದು ಹೇಳಿದ್ದಾರೆ. ಆದರೂ ಈ ಬಗ್ಗೆ ಇನ್ನೂ ಕ್ರಮ ಕೈಗೊಂಡಿಲ್ಲ’ ಎಂದು ಹೇಳಿದರು.

ಕೃಷಿ ವಿ.ವಿ, ತೋಟಗಾರಿಕೆ ವಿ.ವಿ ಹಾಗೂ ಪಶು ವೈದ್ಯಕೀಯ ವಿ.ವಿ ವಿಲೀನ ಪ್ರಕ್ರಿಯೆ

ರಾಜ್ಯದ ಏಕೈಕ ಪಶು ವಿವಿಗೆ ಕುತ್ತು

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಪ್ರಾದೇಶಿಕ ಅಸಮತೋಲನ ನಿವಾರಣೆಯ ಉದ್ದೇಶದಿಂದ ಸ್ಥಾಪನೆಗೊಂಡಿರುವ ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ರಾಜ್ಯದ ಇತರೆ ವಿಶ್ವವಿದ್ಯಾಲಯಗಳೊಂದಿಗೆ ವಿಲೀನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ರಾಯಚೂರಿನ ಕೃಷಿ ವಿವಿ ಮತ್ತು ಬಾಗಲಕೋಟೆಯ ತೋಟಗಾರಿಕೆ ವಿವಿಯೊಂದಿಗೆ ಪಶು ವಿವಿಯನ್ನು ವಿಲೀನಗೊಳಿಸಲು ಉದ್ದೇಶಿಸಲಾಗಿದೆ. ವಿಲೀನ ಪ್ರಕ್ರಿಯೆಗಾಗಿ ರಾಜ್ಯ ಸರ್ಕಾರವು ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ ಐವರ ಕೃಷಿ, ತೋಟಗಾರಿಕೆ ಹಾಗೂ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಪುನರ್ ಸಂಘಟನೆ ಉನ್ನತಾಧಿಕಾರ ಸಮಿತಿ ರಚಿಸಿದೆ.


ಈ ಸಮಿತಿಯು ಈಗಾಗಲೇ ಇದರ ಸಾಧಕ–ಬಾಧಕಗಳ ಕುರಿತು ಅಧ್ಯಯನ ಆರಂಭಿಸಿದೆ. ಸಮಿತಿಯ ಸದಸ್ಯರು ನಗರದ ಪಶು ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟು, ವಿವಿ ಕುಲಪತಿ ಹಾಗೂ ಸಿಬ್ಬಂದಿಯೊಂದಿಗೆ ಚರ್ಚಿಸಿದ್ದಾರೆ. ಯಾವ ವಿಷಯಗಳ ಕುರಿತು ಚರ್ಚೆ ನಡೆದಿದೆ ಎಂಬುದರ ವಿವರ ಹಂಚಿಕೊಳ್ಳಲು ವಿವಿ ಆಡಳಿತ ಮಂಡಳಿ ನಿರಾಕರಿಸಿದೆ.

ಆದರೆ, ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಹಂಚಿಕೆಯಾಗುತ್ತಿರುವ ಅನುದಾನ, ಕಾಯಂ ಹಾಗೂ ಹೊರಗುತ್ತಿಗೆ ನೌಕರರು, ಆದಾಯ, ವಿಲೀನದ ಕುರಿತ ಅಭಿಪ್ರಾಯಗಳು ಸೇರಿದಂತೆ ಹಲವು ವಿಷಯಗಳ ಕುರಿತು ಮಾಹಿತಿ ಕಲೆ ಹಾಕಿದೆ ಎಂದು ಖಚಿತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರಾದೇಶಿಕ ಅಸಮಾನತೆ ನಿವಾರಣೆಗೆ ವಿವಿ: ಪ್ರಾದೇಶಿಕ ಅಸಮತೋಲನ ನಿವಾರಣೆಯ ಹಿನ್ನೆಲೆಯಲ್ಲಿ ಡಾ. ಡಿ.ಎಂ. ನಂಜುಂಡಪ್ಪ ವರದಿ ಆಧರಿಸಿ ಬೀದರ್‌ನಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. ರಾಜ್ಯದ ಉತ್ತರ ಹಾಗೂ ದಕ್ಷಿಣದ ಭಾಗಗಳು ಸಮಾನವಾಗಿ ಅಭಿವೃದ್ಧಿ ಹೊಂದಬೇಕೆನ್ನುವುದು ಇದರ ಆಶಯವಾಗಿದ್ದು, 2005ರಲ್ಲಿ ವಿವಿ ಕಾರ್ಯಾರಂಭ ಮಾಡಿತು. ಒಂದುವೇಳೆ ಇದನ್ನು ಅನ್ಯ ವಿಶ್ವವಿದ್ಯಾಲಯಗಳಲ್ಲಿ ವಿಲೀನಗೊಳಿಸಿದರೆ ಇದರ ಅಸ್ತಿತ್ವ ಕೊನೆಗಾಣಲಿದೆ. ಇದರ ಉದ್ದೇಶಕ್ಕೂ ಕೊಡಲಿ ಏಟು ಬೀಳಲಿದೆ ಎನ್ನುವುದು ತಜ್ಞರು ಹಾಗೂ ವಿವಿ ಸಿಬ್ಬಂದಿಯ ವಾದ.

ಹೈನುಗಾರಿಕೆ, ಮೀನುಗಾರಿಕೆ, ದೇಶಿ ತಳಿಗಳ ಸಂವರ್ಧನೆ, ಜಾನುವಾರುಗಳ ಹಲವಾರು ರೋಗಗಳಿಗೆ ಸಂಬಂಧಿಸಿದಂತೆ ಲಸಿಕೆ ಅಭಿವೃದ್ಧಿ ಸೇರಿದಂತೆ ಅನೇಕ ಆವಿಷ್ಕಾರಗಳು, ಕೆಲಸಗಳು ಪಶು ವಿವಿಯಲ್ಲಿ ನಡೆಯುತ್ತಿವೆ. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಸೇರಿದಂತೆ ಹಲವು ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಇದರ ಅಡಿಯಲ್ಲಿ ಬೀದರ್, ಬೆಂಗಳೂರು, ಶಿವಮೊಗ್ಗ, ಹಾಸನ, ಅಥಣಿ, ಪುತ್ತೂರು ಹಾಗೂ ಗದಗದಲ್ಲಿ ಕಾಲೇಜುಗಳು ಕೆಲಸ ನಿರ್ವಹಿಸುತ್ತಿವೆ. ಶುಲ್ಕ, ಲಸಿಕೆ ಸೇರಿದಂತೆ ಇತರೆ ಮೂಲಗಳಿಂದ ಆದಾಯ ಬರುತ್ತಿದ್ದು, ಸ್ವಾವಲಂಬಿಯಾಗಿ ಮುನ್ನಡೆಯುತ್ತಿದೆ. ಆದರೂ ಸರ್ಕಾರ ವಕ್ರದೃಷ್ಟಿ ಬೀರಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಸ್ಥಳೀಯರು ಹೋರಾಟದ ಎಚ್ಚರಿಕೆ ನೀಡಿದ್ದಾರೆ.

ವಿಲೀನ ಸರಿಯಲ್ಲ



2021ರಲ್ಲಿ ರಾಜ್ಯ ಸರ್ಕಾರವು ಶಿವಮೊಗ್ಗದಲ್ಲಿ ಇನ್ನೊಂದು ಪಶು ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದಾಗಿತ್ತು. ಇದರ ಮಹತ್ವ ಇಷ್ಟಿರುವಾಗ ಬೀದರ್ ಪಶು ವಿವಿ ವಿಲೀನಕ್ಕೆ ಮುಂದಾಗಿರುವುದು ಸರಿಯಲ್ಲ.

ವೀರಭದ್ರಪ್ಪ ಉಪ್ಪಿನ, ಸದಸ್ಯ, ಅಖಿಲ ಭಾರತೀಯ ವಿಶ್ವವಿದ್ಯಾಲಯಗಳ ನೌಕರರ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ


ದೊಡ್ಡ ಅನ್ಯಾಯ



ಹಿಂದುಳಿದ ಪ್ರದೇಶ ಎಂಬ ಕಾರಣಕ್ಕೆ ಸರ್ಕಾರ ಈ ಭಾಗಕ್ಕೆ ವಿಶ್ವವಿದ್ಯಾಲಯ ಕೊಟ್ಟಿದೆ. ಈಗ ಕಸಿದುಕೊಂಡರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಹಾಗೆ ಮಾಡಿದರೆ ಈ ಭಾಗಕ್ಕೆ ದೊಡ್ಡ ಅನ್ಯಾಯವಾಗಲಿದೆ.

ಶಿವಯ್ಯ ಸ್ವಾಮಿ, ಸದಸ್ಯ, ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿ

ಮಾಹಿತಿ ವಿನಿಮಯ



ಕೃಷಿ, ತೋಟಗಾರಿಕೆ ಹಾಗೂ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಪುನರ್ ಸಂಘಟನೆ ಉನ್ನತಾಧಿಕಾರ ಸಮಿತಿ ನಮ್ಮ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟಿದೆ. ವಿವಿಗೆ ಸಂಬಂಧಿಸಿದಂತೆ ಕೇಳಿದ ಮಾಹಿತಿ ನೀಡಲಾಗಿದೆ.

ಪ್ರೊ.ಕೆ.ಸಿ. ವೀರಣ್ಣ, ಕುಲಪತಿ, ಪಶು ವೈದ್ಯಕೀಯ ವಿವಿ



ಬೀದರ್‌ನ ಕರ್ನಾಟಕ ರಾಜ್ಯ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ವಿಲೀನಗೊಳಿಸುವುದೇಕೆ?

'ಪಶು ವೈದ್ಯಕೀಯ ವಿವಿ 20 ವರ್ಷಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ. 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಪ್ರಕಾರದ ಪದವಿ ಪಡೆದು ನೌಕರಿ ಸೇರಿದ್ದಾರೆ. ವಿವಿ ಆರಂಭಗೊಂಡಾಗ ಹತ್ತು ಸಂಸ್ಥೆಗಳಿದ್ದವು. ಈಗ ಅವುಗಳ ಸಂಖ್ಯೆ 35ಕ್ಕೆ ಏರಿದೆ. ವಿವಿ ಕೆಲಸದಿಂದ ಪಶುಪಾಲನಾ ಸಾಮರ್ಥ್ಯ ಶೇ 20ರಿಂದ ಶೇ 30ಕ್ಕೆ ಹೆಚ್ಚಾಗಿದೆ. ಹೊಸ ತಳಿ, ಲಸಿಕೆ ಸೇರಿದಂತೆ ಅನೇಕ ಗಮನಾರ್ಹ ಕೆಲಸಗಳಾದಾಗ ವಿಲೀನಗೊಳಿಸುವುದೇಕೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವಿವಿಯ ಹಿರಿಯ ವಿಜ್ಞಾನಿಗಳು ಪ್ರಶ್ನಿಸಿದ್ದಾರೆ.

'ವಿವಿ ಶ್ರಮದಿಂದ ಮುಧೋಳ ತಳಿಯ ನಾಯಿ ಭಾರತೀಯ ಸೇನೆಗೆ ಸೇರ್ಪಡೆಯಾಗಿದೆ. ಮುಧೋಳನಲ್ಲಿ ಶ್ವಾನ ಸಂಶೋಧನಾ ಸಂಸ್ಥೆ ಸಹ ಆರಂಭಿಸಲಾಗಿದೆ. ವಿಜಯಪುರದಲ್ಲಿ ಮೀನುಗಾರಿಕೆ ಸಂಸ್ಥೆ ಆರಂಭಿಸಲಾಗಿದ್ದು, ಇದರಿಂದ ಉತ್ತರದಲ್ಲಿ ಮೀನುಗಾರಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಕ್ಕಿದೆ. ದಕ್ಷಿಣದ ಪ್ರಭಾವಿಗಳ ಲಾಬಿಗೆ ಒಳಗಾಗಿ ಅನ್ಯ ವಿವಿಯೊಂದಿಗೆ ವಿಲೀನಗೊಳಿಸಿದರೆ ವಿವಿ ಸ್ಥಾಪಿಸಿದ ಉದ್ದೇಶ ಈಡೇರದು. ಇತರೆ ವಿವಿಗಳ ಮೇಲೂ ಇದರ ಪರಿಣಾಮ ಉಂಟಾಗಲಿದೆ' ಎಂದಿದ್ದಾರೆ.

ಖಾದರ್ ಕಾಂಗ್ರೆಸ್ ಏಜೆಂಟ್

ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಬೆಲ್ಲದ ಟೀಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯದ ಎಲ್ಲ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಾಂಗ್ರೆಸ್ ಏಜೆಂಟ್‌ರಂತೆ ಕೆಲಸ ಮಾಡುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆರೋಪಿಸಿದರು.

'ಶಾಂತಿ, ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 36 ಜನರ ಗಡೀಪಾರಿಗೆ ಜಿಲ್ಲಾಡಳಿತ ಮುಂದಾಗಿದೆ. ಕಾಂಗ್ರೆಸ್ ನಾಯಕರ ಮನೆಯಲ್ಲಿ ಯು.ಟಿ. ಖಾದರ್ ನೇತೃತ್ವದಲ್ಲಿ ಗಡೀಪಾರು ಪಟ್ಟಿ ಸಿದ್ಧವಾಗಿದೆ. ರಾಜ್ಯದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ ಇದೆ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ದಕ್ಷಿಣ ಕನ್ನಡದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದ್ದು, ಹಿಂದೂ ಕಾರ್ಯಕರ್ತರ ಮೇಲಿನ ದೌರ್ಜನ್ಯ ಹೆಚ್ಚಾಗಿದೆ. ಅವರನ್ನು ಅನವಶ್ಯವಾಗಿ ಜಿಲ್ಲೆಯಿಂದ ಗಡೀಪಾರು ಮಾಡಲಾಗುತ್ತಿದೆ' ಎಂದು ಹೇಳಿದರು.


'ಕಾಂಗ್ರೆಸ್ ಕಾರ್ಯಕರ್ತರಂತೆ ವರ್ತಿಸುತ್ತಿರುವ ಪೊಲೀಸರು, ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ, ಹರೀಶ್ ಪೂಂಜಾ ಸೇರಿ ವಿರೋಧ ಪಕ್ಷದ ನಾಯಕರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ. ಎಲ್ಲದಕ್ಕೂ ಗೃಹ ಸಚಿವರು ಉಢಾಪೆಯ ಉತ್ತರ ನೀಡುತ್ತಾರೆ. ಪ್ರತಿ ಜಿಲ್ಲೆಯಲ್ಲಿ ಒಬ್ಬೊಬ್ಬ ಗೃಹ ಸಚಿವರು ಇದ್ದಾರೆ' ಎಂದು ಟೀಕಿಸಿದರು.

'ಕಲಬುರಗಿಯಲ್ಲಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಮೇಲೆ ಹಲ್ಲೆಗೆ ಯತ್ನಿಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಅವರನ್ನು ಸಚಿವ ಪ್ರಿಯಾಂಕ್ ಖರ್ಗೆ ರಕ್ಷಿಸುತ್ತಾರೆ. ಅವರು ರಿಪಬ್ಲಿಕ್ ಆಫ್ ಕಲಬುರಗಿ ಮಾಡಿಕೊಂಡಿದ್ದಾರೆ' ಎಂದರು.

'ಬಿಜೆಪಿಗೆ ಹೋಗುವ ರಕ್ತ ನನ್ನದಲ್ಲ'

ಶರಣಾಗುವ ಜಾಯಮಾನದವನಲ್ಲ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಕನಕಪುರ (ರಾಮನಗರ): 'ಇ.ಡಿ, ಐ.ಟಿ ಮತ್ತು ಸಿಬಿಐಗೆ ಹೆದರಿ ಬಿಜೆಪಿಗೆ ಹೋಗುವ ರಕ್ತವಾ ನನ್ನದು? ಕನಕಪುರದವರದ್ದು ಯಾರಿಗೂ ಶರಣಾಗುವ ರಕ್ತ ಅಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಹೇಳಿದ್ದಾರೆ.

'ನನ್ನ ವಿರುದ್ಧದ ಜಾರಿ ನಿರ್ದೇಶನಾಲಯ(ಇ.ಡಿ), ಆದಾಯ ತೆರಿಗೆ ಇಲಾಖೆ(ಐ.ಟಿ) ಹಾಗೂ ಸಿಬಿಐ ಪ್ರಕರಣ ಕೈ ಬಿಡುವಂತೆ ನಾನು ಕೇಂದ್ರ ಸಚಿವರಿಗೆ ದುಂಬಾಲು ಬಿದ್ದಿದ್ದೇನೆ. ಬಿಜೆಪಿ ಸೇರಿಕೊಳ್ಳಲಿದ್ದೇನೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದರು. ಯತ್ನಾಳ ಬಾಯಿ ಬಹಳ ಕೆಟ್ಟದ್ದು' ಎಂದರು.

ಯತ್ನಾಳ ವಿರುದ್ಧ ದಾಖಲಿಸಿರುವ ಮಾನನಷ್ಟ ಮೊಕದ್ದಮೆ ವಿಚಾರಣೆಗೆ ಕನಕಪುರದ ಕೋರ್ಟ್‌ಗೆ ಹಾಜರಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನದು ಬಿಜೆಪಿಗೆ ಹೋಗುವ ರಕ್ತವಲ್ಲ. ನಾನೀಗಾಗಲೇ ಏನೇನು ಅನುಭವಿಸಬೇಕೋ ಎಲ್ಲಾ ಅನುಭವಿಸಿ ಆಗಿದೆ' ಎಂದರು.

'ನಾನು ಬಿಜೆಪಿ ಸೇರಿಕೊಳ್ಳುವೆ ಎಂದು ಯತ್ನಾಳ ಅಪಪ್ರಚಾರ ಮಾಡಿದ್ದರು. ಹಾಗಾಗಿ, ಅವರ ವಿರುದ್ಧ ₹100 ಕೋಟಿ ಮಾನಹಾನಿ ಮೊಕದ್ದಮೆ ಹಾಕಿ ₹1 ಕೋಟಿ ಕೋರ್ಟ್ ಶುಲ್ಕ ಪಾವತಿಸಿದ್ದೇನೆ' ಎಂದರು.

'ಬೆಂಗಳೂರು ಕೋರ್ಟ್‌ಗೆ ಈ ಪ್ರಕರಣ ವರ್ಗಾವಣೆ ಮಾಡುವಂತೆ ಯತ್ನಾಳ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಜಾ ಮಾಡಿದ್ದ ಹೈಕೋರ್ಟ್, ಕನಕಪುರಕ್ಕೆ ಹೋಗಿ ಎಂದು ಸೂಚಿಸಿದೆ. ಇಂದು ವಿಚಾರಣೆ ಇದ್ದಿದ್ದರಿಂದ ಕೋರ್ಟ್‌ಗೆ ಹಾಜರಾಗಿ ದಾಖಲೆ ನೀಡಿದ್ದೇನೆ' ಎಂದರು.

ಸಿಸೋಡಿಯಾ, ಜೈನ್‌ಗೆ ಎಸಿಬಿ ಸಮನ್ಸ್

ನವದೆಹಲಿ (ಪಿಟಿಐ): ಎಎಪಿ ನಾಯಕರಾದ ಸತ್ಯೇಂದರ್ ಜೈನ್ ಹಾಗೂ ಮನೀಷ್ ಸಿಸೋಡಿಯಾಗೆ ವಿಚಾರಣೆಗೆ ಹಾಜರಾಗುವಂತೆ ಎಸಿಬಿ ಬುಧವಾರ ಸಮನ್ಸ್ ನೀಡಿದೆ.

ದೆಹಲಿಯ ಸರ್ಕಾರಿ ಶಾಲೆಗಳಲ್ಲಿ 12 ಸಾವಿರಕ್ಕೂ ಹೆಚ್ಚು ತರಗತಿ ಕೊಠಡಿಗಳ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿಯ ಭ್ರಷ್ಟಾಚಾರ ನಿಗ್ರಹ ದಳವು (ಎಸಿಬಿ) ಈ ಸಮನ್ಸ್ ಹೊರಡಿಸಿದೆ.

ಇದೇ 6ರಂದು ವಿಚಾರಣೆಗೆ ಹಾಜರಾಗಿ ಎಂದು ಜೈನ್‌ಗೆ ತಿಳಿಸಲಾಗಿದ್ದು, 9ರಂದು ಹಾಜರಾಗುವಂತೆ ಸಿಸೋಡಿಯಾಗೆ ಸೂಚಿಸಲಾಗಿದೆ.

ಈ ಹಿಂದಿನ ಎಎಪಿ ಸರ್ಕಾರದ ಆಡಳಿತದಲ್ಲಿ ಮನೀಷ್ ಸಿಸೋಡಿಯಾ ಹಣಕಾಸು ಮತ್ತು ಶಿಕ್ಷಣ ಖಾತೆ ಹೊಂದಿದ್ದರೆ, ಸತ್ಯೇಂದರ್ ಜೈನ್ ಲೋಕೋಪಯೋಗಿ ಇಲಾಖೆ ಮತ್ತು ಇತರ ಸಚಿವಾಲಯಗಳ ಉಸ್ತುವಾರಿ ವಹಿಸಿಕೊಂಡಿದ್ದರು.

'ಕೇಂದ್ರ ಜಾಗೃತ ಆಯೋಗದ (ಸಿವಿಸಿ) ಮುಖ್ಯ ತಾಂತ್ರಿಕ ಪರೀಕ್ಷಕರು ಈ ಯೋಜನೆಗೆ ಸಂಬಂಧಿಸಿದಂತೆ ವರದಿಯೊಂದನ್ನು ನೀಡಿದ್ದಾರೆ. ಇದರಲ್ಲಿ ಅನೇಕ ಲೋಪಗಳನ್ನು ಉಲ್ಲೇಖಿಸಿದ್ದಾರೆ. ಇದು ಮೂರು ವರ್ಷಗಳಿಂದಲೂ ಕಾರ್ಯರೂಪಕ್ಕೆ ಬಂದಿಲ್ಲ ಎಂದು ಆರೋಪಿಸಲಾಗಿದೆ' ಎಂದು ಎಸಿಬಿಯ ಜಂಟಿ ಪೊಲೀಸ್ ಆಯುಕ್ತ ಮಧುರ ವರ್ಮಾ ತಿಳಿಸಿದ್ದಾರೆ.

ಸಕ್ಷಮ ಪ್ರಾಧಿಕಾರದಿಂದ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 17–ಎ ಅಡಿಯಲ್ಲಿ ಅನುಮೋದನೆ ಪಡೆದ ನಂತರ ಎಫ್‌ಐಆರ್ ದಾಖಲಿಸಲಾಗಿದೆ ಎಂದಿದ್ದಾರೆ.

ದೆಹಲಿಯ ಮೂರು ವಲಯಗಳಲ್ಲಿ ತರಗತಿ ಕೊಠಡಿಗಳ ನಿರ್ಮಾಣದಲ್ಲಿ ಅಕ್ರಮ ನಡೆದಿದೆ ಎಂದು ದೂರಿ, 2019ರಲ್ಲಿ ಬಿಜೆಪಿ ನಾಯಕರಾದ ಕಪಿಲ್ ಮಿಶ್ರಾ, ಹರೀಶ್ ಖುರಾನಾ ಮತ್ತು ನೀಲಕಂಠ ಬಕ್ಷಿ ಎಸಿಬಿಗೆ ದೂರು ನೀಡಿದ್ದರು.

ದೂರಿನ ಪ್ರಕಾರ, ಪ್ರತಿ ಕೊಠಡಿ ನಿರ್ಮಾಣದ ಸರಾಸರಿ ವೆಚ್ಚ ₹24.86 ಲಕ್ಷ. ಆದರೆ ಇದಕ್ಕಿಂತ ₹5 ಲಕ್ಷ ಹೆಚ್ಚಿನ ವೆಚ್ಚ ತೋರಿಸಲಾಗಿದೆ. ಈ ಕುರಿತಂತೆ ತನಿಖೆ ನಡೆಯುತ್ತಿದ್ದು, ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಪಿಸಿಸಿಎಫ್ ಗೋಕುಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಂಟಿ ಕಂಪನಿಗೆ ನೀಡಿದ ₹ 14 ಸಾವಿರ ಕೋಟಿ ಮೌಲ್ಯದ ಅರಣ್ಯ ಜಮೀನು ಡಿನೋಟಿಫಿಕೇಷನ್‌ಗೆ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ ಪ್ರಕರಣದಲ್ಲಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಆರ್. ಗೋಕುಲ್ ಅವರನ್ನು ಅಮಾನತು ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಸಚಿವ ಸಂಪುಟದ ಅನುಮೋದನೆ ಪಡೆಯದೆ ಬೆಂಗಳೂರು ಉತ್ತರ ತಾಲ್ಲೂಕಿನ ಪೀಣ್ಯ ಪ್ಲಾಂಟೇಷನ್‌ನಲ್ಲಿರುವ 443 ಎಕರೆ 6 ಗುಂಟೆ ಜಮೀನನ್ನು ಎಚ್‌ಎಂಟಿ ಕಂಪನಿಗೆ ಡಿನೋಟಿಫಿಕೇಶನ್ ಮಾಡಲು ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ ಪ್ರಕರಣದಲ್ಲಿ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂದೀಪ್ ದವೆ, ನಿವೃತ್ತ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಗೋಗಿ, ಪ್ರಧಾನ ಕಾರ್ಯದರ್ಶಿ ಸ್ಮಿತಾ ಬಿಜ್ಜೂರ್ ಮತ್ತು ಆರ್. ಗೋಕುಲ್ ಅವರಿಗೆ ಅರಣ್ಯ ಇಲಾಖೆ ಪ್ರಾಥಮಿಕ ನೋಟಿಸ್ ನೀಡಿತ್ತು.

ಸಂದೀಪ್ ದವೆ ಹೊರತುಪಡಿಸಿ ಉಳಿದ ಎಲ್ಲರೂ ನೋಟಿಸ್‌ಗೆ ಉತ್ತರ ನೀಡಿದ್ದರು. ದವೆ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತನ್ನ ಅಭಿಪ್ರಾಯದ ಸಹಿತ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಅರಣ್ಯ ಇಲಾಖೆ ಸೂಚಿಸಿದೆ.

ಪ್ರಾಥಮಿಕ ನೋಟಿಸ್ ನೀಡಿದ ಬೆನ್ನಲ್ಲೆ ಸಿಬಿಐಗೆ ಪತ್ರ ಬರೆದ ಗೋಕುಲ್, 'ಬೇಲೆಕೇರಿ ಬಂದರಿನಲ್ಲಿ ಕಬ್ಬಿಣದ ಅದಿರು ಕಳ್ಳತನ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರ ಸಾಕ್ಷ್ಯ ನುಡಿದ ಕಾರಣಕ್ಕೆ ಎಚ್‌ಎಂಟಿ ಭೂವಿವಾದ ಪ್ರಕರಣದಲ್ಲಿ ಬಲಿಪಶು ಮಾಡಿ ಮಾನಹಾನಿ ಮಾಡಲಾಗುತ್ತಿದೆ' ಎಂದು ಆರೋಪಿಸಿದ್ದರು. ಈ ಬೆಳವಣಿಗೆ ನಡುವೆಯೇ ಗೋಕುಲ್ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.

ಮುಖ್ಯಮಂತ್ರಿಗೆ ಅಂಜುಂ ಎಸಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಹುದ್ದೆಗೆ ಎಲ್.ಕೆ. ಅತೀಕ್ ಅವರು ರಾಜೀನಾಮೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರನ್ನು ಎಲ್.ಕೆ. ಅತೀಕ್ ಅವರಿಂದ ತೆರವಾದ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಹೊಸ ಜವಾಬ್ದಾರಿಯ ಜತೆಗೆ ಈಗಾಗಲೇ ಇರುವ ಎರಡೂ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹೊಣೆಯನ್ನೂ ಅಂಜುಂ ಅವರಿಗೆ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ವಿಮಾನಕ್ಕೆ ಹುಸಿ ಬಾಂಬ್ ಬೆದರಿಕೆ

ಪಟ್ನಾ (ಪಿಟಿಐ): ಅಹಮದಾಬಾದ್‌ನಿಂದ ಪಟ್ನಾಗೆ ಸಂಚರಿಸುತ್ತಿದ್ದ ಇಂಡಿಗೊ ವಿಮಾನಕ್ಕೆ ಬುಧವಾರ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದೆ.

192 ಪ್ರಯಾಣಿಕರಿದ್ದ ವಿಮಾನವು, ಮಧ್ಯಾಹ್ನ 12.45ಕ್ಕೆ ಜಯಪ್ರಕಾಶ್ ನಾರಾಯಣ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು.


ಬೆದರಿಕೆಯ ಕರೆ ಬಂದೊಡನೆ ಅಧಿಕಾರಿಗಳು ಮುನ್ನೆಚ್ಚರಿಕೆಯಿಂದ ಪಟ್ನಾ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಯಲು ಅವಕಾಶ ಕಲ್ಪಿಸಿದರು. ಭದ್ರತಾ ಸಿಬ್ಬಂದಿ, ಬಾಂಬ್ ತಪಾಸಣಾ ದಳವು ಒಂದು ತಾಸಿಗೂ ಹೆಚ್ಚಿನ ಅವಧಿ ತಪಾಸಣೆ ನಡೆಸಿತು.

ವಿಮಾನದಲ್ಲಿ ಯಾವುದೇ ಸ್ಫೋಟಕ ವಸ್ತು ಹಾಗೂ ಅನುಮಾನಾಸ್ಪದ ವಸ್ತು ಕಂಡು ಬರಲಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹುಸಿ ಬೆದರಿಕೆ ಬಗ್ಗೆ ತನಿಖೆ ನಡೆದಿದೆ.

ಟಿ.ಎಚ್.ಎಂ. ಕುಮಾರ್ ಕೆಎಂಎಫ್ ಆಡಳಿತಾಧಿಕಾರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳದ (ಕೆಎಂಎಫ್) ಆಡಳಿತ ಮಂಡಳಿಯ ಅಧಿಕಾರ ಅವಧಿ ಕೊನೆಗೊಂಡ ಬೆನ್ನಲ್ಲೇ, ಸಹಕಾರ ಸಂಘಗಳ ರಿಜಿಸ್ಟ್ರಾರ್ ಟಿ.ಎಚ್.ಎಂ.ಕುಮಾರ್ ಅವರನ್ನು ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಆಡಳಿತಾಧಿಕಾರಿ ಅಧಿಕಾರ ವಹಿಸಿಕೊಂಡ ಬಳಿಕ ಮಹಾಮಂಡಳದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆಎಂಎಫ್‌ನ ಹಾಲಿ ಆಡಳಿತ ಮಂಡಳಿಯ ಅವಧಿ 2024ರ ಜುಲೈ 7ಕ್ಕೆ ಮುಕ್ತಾಯಗೊಂಡಿತ್ತು. ಆದರೆ, ಲೋಕಸಭಾ ಚುನಾವಣೆ ಎದುರಾಗಿದ್ದರಿಂದಾಗಿ, ಆಡಳಿತಾಧಿಕಾರಿ ನೇಮಕ ಮಾಡದೆ ಹಾಲಿ ಆಡಳಿತ ಮಂಡಳಿಯನ್ನೆ ಮುಂದುವರಿಸಲಾಗಿತ್ತು. ಹಗರಿಬೊಮ್ಮನಹಳ್ಳಿಯ ಮಾಜಿ ಶಾಸಕ ಭೀಮಾನಾಯ್ಕ ಕೆಎಂಎಫ್ ಅಧ್ಯಕ್ಷರಾಗಿದ್ದರು.

SANJEEVINI-Karnataka State Rural Livelihood Promotion Society
Skill Development, Entrepreneurship and Livelihood Department
Office of the Mission Director, Sanjeevini-KSRLPS
4, 2nd Floor, MYSUGAR Building, J.C. Road, Near Town Hall
Bengaluru-560002 email: nrlmkarnataka@gmail.com
EXTENSION OF DATE

ಪ್ರಚೋದನಕಾರಿ ಪೋಸ್ಟ್: ಲುಕ್ ಔಟ್ ಸುತ್ತೋಲೆ ಮೂಲಕ ಇಬ್ಬರನ್ನು ಕರೆಸಿದ ಪೊಲೀಸರು

ಸೌದಿಯಲ್ಲಿದ್ದ ಇಬ್ಬರು ಸೇರಿ 6 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಮಾಜದ ಶಾಂತಿಗೆ ಭಂಗವನ್ನುಂಟು ಮಾಡು ವಂತಹ ಪ್ರಚೋದನಕಾರಿ ಸಂದೇಶ ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟ ಆರು ಮಂದಿ ಆರೋಪಿಗಳನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ.

ಇವರಲ್ಲಿ ಇಬ್ಬರು ವಿದೇಶದಲ್ಲಿದ್ದು-ಕೊಂಡು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚೋದನಕಾರಿ ಸಂದೇಶ ಹರಿಯಬಿಡುತ್ತಿದ್ದರು. ಲುಕ್ ಔಟ್ ಸುತ್ತೋಲೆ ಹೊರಡಿಸುವ ಮೂಲಕ ಅವರನ್ನು ಊರಿಗೆ ಕರೆಸಿಕೊಂಡು ಬಳಿಕ ಬಂಧಿಸಲಾಗಿದೆ.

‘ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕುವವರ ಪತ್ತೆಗಾಗಿ ವಿಶೇಷ ತಂಡಗಳನ್ನು ರಚನೆ ಮಾಡಲಾಗಿತ್ತು. ಇಂತಹ ಪೋಸ್ಟ್‌ಗಳ ಮೇಲೆ ನಿಗಾ ಇಟ್ಟಿದ್ದ ಈ ವಿಶೇಷ ತಂಡದ ಅಧಿಕಾರಿಗಳು ನಾಲ್ಕು ದಿನಗಳಲ್ಲಿ ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.



ಸಾಮಾಜಿಕ ಮಾಧ್ಯಮದಲ್ಲಿ ಪ್ರಚೋದನಾಕಾರಿ ಪೋಸ್ಟ್ ಹಂಚಿಕೊಂಡ ಪ್ರಕರಣಗಳಲ್ಲಿ ಬಂಧನಕ್ಕೊಳಗಾಗಿರುವ ಆರೋಪಿಗಳು

‘ಉಡುಪಿ ಜಿಲ್ಲೆಯ ಹೆಜಮಾಡಿಯ ಮೊಹಮ್ಮದ್ ಅಸ್ಲಾಂ (23), ಸುರತ್ಕಲ್ ಇಡ್ಯಾ ಗ್ರಾಮದ ಕಾಟಿಪಳ್ಳ ಆಶ್ರಯ ಕಾಲೊನಿಯ ಚೇತನ್ (20), ಹಳೆಯಂಗಡಿ ಚೇಳ್ಯಾರಿನ ನಿತಿನ್ ಅಡಪ (23), ಫರಂಗಿಪೇಟೆ ಅರ್ಕುಳದ ರಿಯಾರ್ಝ್ ಇಬ್ರಾಹಿಂ (30), ಕಸಬಾ ಬೆಂಗ್ರೆಯ ಜಮಾಲ್ ಝುಾಕೀರ್ (21) ಹಾಗೂ ಹಳೆಯಂಗಡಿ ಕೊಳವೈಲ್‌ನ ಗುರು ಪ್ರಸಾದ್ ಬಂಧಿತರು’ ಎಂದು ಅವರು ಮಾಹಿತಿ ನೀಡಿದ್ದಾರೆ.

ಆರೋಪಿ ಮೊಹಮ್ಮದ್ ಅಸ್ಲಾಂ ಸೌದಿ ಅರೇಬಿಯಾದಲ್ಲಿ ನೆಲೆಸಿದ್ದು, ಅಲ್ಲಿಂದಲೇ ಇನ್‌ಸ್ಟಾಗ್ರಾಂನಲ್ಲಿ ‘ಟೀಮ್ ಜೋಕರ್ಸ್’ ಎಂಬ ಪುಟವನ್ನು ಬಳಸಿ ಪ್ರಚೋದನಕಾರಿ ಸಂದೇಶಗಳನ್ನು ಹಂಚಿಕೊಂಡಿದ್ದ. ಆತನ ವಿರುದ್ಧ ನಗರದ ದಕ್ಷಿಣ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಲುಕ್ ಔಟ್ ಸುತ್ತೋಲೆ ಹೊರಡಿಸಿ ಕರೆಸಿಕೊಂಡು ಆತನನ್ನು ಬಂಧಿಸಲಾಗಿದೆ.

ಆರೋಪಿ ರಿಯಾರ್ಝ್ ಇಬ್ರಾಹಿಂ ಸೌದಿ ಅರೇಬಿಯಾದಲ್ಲಿದ್ದುಕೊಂಡು ‘ಬ್ಯಾರಿ_ರಾಯಲ್_ನವಾಬ್’ ಎಂಬ ಇನ್‌ಸ್ಟಾಗ್ರಾಂ ಪುಟದ ಮುಖಾಂತರ ಪ್ರಚೋದನಕಾರಿ ಸಂದೇಶಗಳನ್ನು ಹರಿಯಬಿಟ್ಟಿದ್ದ. ಈ ಬಗ್ಗೆ ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಲುಕ್ ಔಟ್ ಸುತ್ತೋಲೆ ಹೊರಡಿಸಿ ಆರೋಪಿಯನ್ನು ಸ್ವದೇಶಕ್ಕೆ ಕರೆಸಿಕೊಂಡು ಬಂಧಿಸಲಾಗಿದೆ.

ಆರೋಪಿಗಳಾದ ಚೇತನ್ ಮತ್ತು ನಿತಿನ್ ಅಡಪ ಮುಸ್ಲಿಮರ ಹೆಸರಿನಲ್ಲಿ ಸಿಮ್ ಕಾರ್ಡ್ ಖರೀದಿಸಿ, ಅದನ್ನು ಬಳಸಿಕೊಂಡು ‘ಟೀಮ್_ಕರ್ಣ_ಸುರತ್ಕಲ್’ ಇನ್‌ಸ್ಟಾಗ್ರಾಂ ಪುಟ ತೆರೆದಿದ್ದರು. ಅದರಲ್ಲಿ ಚೆನ್ನಪ್ಪ ಅಲಿಯಾಸ್ ಮುತ್ತು ಸುರತ್ಕಲ್ ಎಂಬಾತ ಪ್ರಚೋದನಕಾರಿ ಸಂದೇಶ ಹರಿಯ ಬಿಟ್ಟಿದ್ದ. ಈ ಬಗ್ಗೆ ನಗರ ಉತ್ತರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಆರೋಪಿ ಜಮಾಲ್ ಝುಾಕೀರ್ ‘ಟ್ರೋಲ್_ಬೆಂಗರೆ_ರೊ_ಮಕ್ಕಾ’ ಎಂಬ ಇನ್‌ಸ್ಟಾಗ್ರಾಂ ಪುಟದ ಮೂಲಕ ಪ್ರಚೋದನಕಾರಿ ಸಂದೇಶಗಳನ್ನು ಹರಿಯಬಿಟ್ಟಿದ್ದ. ಈ ಬಗ್ಗೆ ಮೂಲ್ಕಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಆರೋಪಿ ಗುರು ಪ್ರಸಾದ್ ಹಳೆಯಂಗಡಿ ತನ್ನ ಫೇಸ್ ಬುಕ್ ಖಾತೆಯಲ್ಲಿ ಪ್ರಚೋದನಕಾರಿ ಸಂದೇಶಗಳನ್ನು ಹರಿಯಬಿಟ್ಟಿದ್ದ. ಮೂಲ್ಕಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಡಿಸಿಪಿ ಸಿದ್ದಾರ್ಥ ಗೋಯಲ್ (ಕಾನೂನು ಮತ್ತು ಸುವ್ಯವಸ್ಥೆ) ಮತ್ತು ರವಿಶಂಕರ್ (ಅಪರಾಧ ಮತ್ತು ಸಂಚಾರ) ಅವರ ಮಾರ್ಗದರ್ಶನದಲ್ಲಿ, ಸಿ.ಇ.ಎನ್ ಅಪರಾಧ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿಶೇಷ ತಂಡಗಳು ಈ ಪ್ರಕರಣಗಳ ತನಿಖೆ ಮುಂದುವರಿಸಿವೆ ಎಂದು ಕಮಿಷನರ್ ತಿಳಿಸಿದ್ದಾರೆ.

ದ.ಕ: ಕೆಪಿಸಿಸಿ ನಿಯೋಗ ಪ್ರವಾಸ ಇಂದು

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿಯಲ್ಲಿ ಶಾಂತಿ ಮರುಸ್ಥಾಪನೆ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನಿಯೋಗ ಇದೇ 5ರಂದು ಜಿಲ್ಲೆಗೆ ಭೇಟಿ ನೀಡಲಿದೆ.

‘ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ನಿಯೋಗವು ಇದೇ 9, 10 ಮತ್ತು 11ರಂದು ಮತ್ತೊಮ್ಮೆ ಪ್ರವಾಸ ಕೈಗೊಂಡು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳಲ್ಲಿ ಅಧ್ಯಯನ ನಡೆಸಲಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕೋಮು ಘರ್ಷಣೆಗಳಿಂದ ಕರಾವಳಿಯ ಅಭಿವೃದ್ಧಿ ಮೇಲಾದ ಪರಿಣಾಮ ಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಿದೆ. ಶಾಂತಿ ಮರು ಸ್ಥಾಪನೆಗೆ ವಹಿಸಬೇಕಾದ ಕ್ರಮಗಳ ಕುರಿತು ಸರ್ಕಾರಕ್ಕೆ ಶಿಫಾರಸು ಮಾಡಲಿದೆ’ ಎಂದರು.

‘ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಯ್ಯದ್ ನಾಸೀರ್ ಹುಸೇನ್ ನೇತೃತ್ವದ ಈ ನಿಯೋಗದಲ್ಲಿ ಶಾಸಕ ಎನ್.ಎ. ಹ್ಯಾರಿಸ್, ಎಐಸಿಸಿ ಕಾರ್ಯದರ್ಶಿ ರೋಜಿ ಜಾನ್, ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್. ಸುದರ್ಶನ್, ಮಾಜಿ ಸಚಿವರಾದ ಜಯಪ್ರಕಾಶ್ ಹೆಗ್ಡೆ, ಕಿಮ್ಮನೆ ರತ್ನಾಕರ್ ಇದ್ದಾರೆ. ನಾನು ಈ ನಿಯೋಗದ ಸದಸ್ಯ. ವಿವಿಧ ಸಂಘಟನೆಗಳು, ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಖಂಡರ ಜತೆ ನಿಯೋಗ ಸಮಾಲೋಚನೆ ನಡೆಸಲಿದೆ’ ಎಂದರು.

ಆರೋಪಿಗಳು ನಮ್ಮವರಲ್ಲ: ವಿಎಚ್‌ಪಿ

ಮಂಗಳೂರು: ‘ಕೊಳತ್ತಮಜಲುವಿನ ಅಬ್ದುಲ್ ರಹಿಮಾನ್ ಹತ್ಯೆ ಪ್ರಕರ-ಣದಲ್ಲಿ ಬಂಧನಕ್ಕೊಳಗಾಗಿರುವ ಆರೋಪಿಗಳು ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳದ ಕಾರ್ಯಕರ್ತರಲ್ಲ’ ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹಾಗೂ ಬಜರಂಗ ದಳ ತಿಳಿಸಿವೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಈ ಕುರಿತ ಪ್ರಶ್ನೆಗೆ ಉತ್ತರಿಸಿದ ವಿಎಚ್‌ಪಿ ವಿಭಾಗ ಪ್ರಚಾರ ಪ್ರಮುಖ್ ಪ್ರದೀಪ್ ಸರಿಪಲ್ಲ, ‘ಇದು ಕೋಮು ದ್ವೇಷದಿಂದ ನಡೆದ ಕೊಲೆಯಲ್ಲ. ಅವರನ್ನು ಮನೆಗೆ ಕರೆಸಿಕೊಂಡು ಕೊಲೆ ಮಾಡುವುದಕ್ಕೆ ಬೇರೆಯೇ ಕಾರಣ ಇರಬಹುದು. ಕೊಲೆಗೆ ಕಾರಣ ಏನು ಎಂಬುವುದನ್ನು ಪೊಲೀಸರು ಇನ್ನೂ ಬಹಿರಂಗಪಡಿಸಿಲ್ಲ’ ಎಂದರು. ‘ಜಿಲ್ಲೆಯಲ್ಲಿ ನಡೆಯುವ ಅವ್ಯವಹಾರಗಳನ್ನು ನಿಲ್ಲಿಸಿದರೆ ಇಂತಹ ಕೊಲೆಗಳು ನಿಲ್ಲಬಹುದು’ ಎಂದರು.

ಸುಹಾಸ್ ಕುಟುಂಬಕ್ಕೆ ₹ 25 ಲಕ್ಷ ಹಸ್ತಾಂತರ

ಮಂಗಳೂರು: ಬಜಪೆಯಲ್ಲಿ ಹತ್ಯೆಗೀಡಾದ ಸುಹಾಸ್ ಶೆಟ್ಟಿ ಕುಟುಂಬಕ್ಕೆ ಬಿಜೆಪಿ ರಾಜ್ಯ ಘಟಕದಿಂದ ₹ 25 ಲಕ್ಷದ ಠೇವಣಿ ಪತ್ರವನ್ನು ಪಕ್ಷದ ಮುಖಂಡರು ಬುಧವಾರ ನೀಡಿದರು.

ಸುಹಾಸ್ ತಂದೆ ಮೋಹನ್ ಮತ್ತು ತಾಯಿ ಸುಲೋಚನಾ ಅವರಿಗೆ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಠೇವಣಿ ಪತ್ರವನ್ನು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ, ಸಂಸದ ಕ್ಯಾ.ಬ್ರಿಜೇಶ್ ಚೌಟ ಹಾಗೂ ಬಿಜೆಪಿ ಶಾಸಕರು ಹಸ್ತಾಂತರಿಸಿದರು.

ರಾಜ್ಯ ನಗರಾಭಿವೃದ್ಧಿ ಇಲಾಖೆಗೆ ಹೈಕೋರ್ಟ್ ಆದೇಶ

‘ಸಂರಕ್ಷಿತ ಸ್ಮಾರಕ ಸುತ್ತ ನಿರ್ಮಾಣ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂರಕ್ಷಿತ ಸ್ಮಾರಕಗಳ ಸುತ್ತಮುತ್ತ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡದಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು. ಈ ನಿಟ್ಟಿನಲ್ಲಿ ಅಧಿಕಾರಿ ವರ್ಗದ ಅವಗಾಹನೆಗೆ ಈ ವಿಷಯವನ್ನು ಸುತ್ತೋಲೆ ಹೊರಡಿಸುವ ಮೂಲಕ ಮನದಟ್ಟು ಮಾಡಬೇಕು’ ಎಂದು ಹೈಕೋರ್ಟ್, ರಾಜ್ಯ ನಗರಾಭಿವೃದ್ಧಿ ಇಲಾಖೆಗೆ ಆದೇಶಿಸಿದೆ.

ಸಂರಕ್ಷಿತ ಸ್ಮಾರಕ ಎಂದು ಘೋಷಿತವಾದ ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಈಶಾನ್ಯ ಭಾಗದ 150 ಮೀಟರ್ ಅಂತರದಲ್ಲಿ ಮನೆ ನಿರ್ಮಾಣಕ್ಕೆ ನಿರ್ಬಂಧ ವಿಧಿಸಿ, ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರ 2025ರ ಜನವರಿ 28ರಂದು



ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಡೆನಿಸ್ ಕ್ರಾಸ್ತಾ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಯಾವುದೇ ನಿರ್ಮಾಣಕ್ಕೆ ಅನುಮತಿ ನೀಡಬೇಕಿದ್ದರೂ ಭಾರತೀಯ ಪುರಾತತ್ವ ಇಲಾಖೆಯಿಂದ (ಎಎಸ್‌ಐ) ನಿರಾಕ್ಷೇಪಣಾ ಪತ್ರ ಪಡೆದಿರಬೇಕು’ ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ‘ಕಾನೂನಿಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವುದು ಅಧಿಕಾರಿಗಳನ್ನು ಅಪಾಯಕ್ಕೆ ನೂಕಲಿದೆ ಎಂಬ ಅರಿವನ್ನು ಸುತ್ತೋಲೆ ಒಳಗೊಂಡಿರಬೇಕು. ಒಂದು ವೇಳೆ ಉಲ್ಲಂಘನೆ ಮಾಡಿದಲ್ಲಿ ಇಲಾಖಾ ತನಿಖೆಗೆ ಆದೇಶಿಸಲಾಗುತ್ತದೆ ಎಂಬ ಅಂಶವನ್ನು ಸುತ್ತೋಲೆಯಲ್ಲಿ ಅಡಕ ಮಾಡಬೇಕು’ ಎಂದು ನ್ಯಾಯಪೀಠ ವಿವರಿಸಿದೆ.

‘ಕಾಯ್ದೆ ಪ್ರಕಾರ ಸಂರಕ್ಷಿತ ಸ್ಮಾರಕಗಳ ಸುತ್ತಮುತ್ತ ಇರುವ ಕಟ್ಟಡಗಳ ಮರು ವಿನ್ಯಾಸ ಮತ್ತು ದುರಸ್ತಿಗೆ ಮಾತ್ರವೇ ಅವಕಾಶ ನೀಡಬಹುದಾಗಿದೆ. ಆದರೆ, ಹಾಲಿ ಪ್ರಕರಣದಲ್ಲಿ ಉದಾಸೀನತೆ ಅಥವಾ ಕಾನೂನಿನ ಅರಿವೇ ಇಲ್ಲದೆ ಅನುಮತಿ ನೀಡಲಾಗಿದೆ. ಇದನ್ನು ನೋಡಿದರೆ ಸಾರ್ವಜನಿಕ ಸೇವಕರು ಕಾನೂನಿನ ಪಾಲಕರಾಗಬೇಕೆ ವಿನಾ ಅದರ ವಿರೋಧಿಗಳಲ್ಲ ಎಂಬುದನ್ನು ಗಾಢವಾಗಿ ಮನಗಾಣಬೇಕು’ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿ-ಸಿದೆ.

‘ಹಾಲಿ ಪ್ರಕರಣದಲ್ಲಿ ಹೊಸ ಕಟ್ಟಡ ನಿರ್ಮಿಸಲು ಅಧಿಕಾರಿಗಳು ಅನುಮತಿ ನೀಡಿರುವ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣಕ್ಕೆ ಆದೇಶಿಸಬೇಕು ಮತ್ತು ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?: ತಮ್ಮ ಮನೆ ನಿರ್ಮಾಣಕ್ಕೆ ಮುಂದಾಗಿದ್ದ ಕ್ರಾಸ್ತಾ ಅವರಿಗೆ ಎಎಸ್‌ಐ ನೋಟಿಸ್ ಜಾರಿಗೊಳಿಸಿತ್ತು. ಕಟ್ಟಡ ನಿರ್ಮಾಣ ಸ್ಥಗಿತಗೊಳಿಸಿ ಎಎಸ್‌ಐನಿಂದ ನಿರಾಕ್ಷೇಪಣಾ ಪತ್ರ ಪಡೆದು ಮುಂದುವರಿಯಲು ಸೂಚಿಸಿತ್ತು. ಅರ್ಜಿದಾರರು ನೋಟಿಸ್ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಬಾಲ್ಯದ ದ್ವೇಷ: ವೃದ್ಧನ ಮೇಲೆ ಹಲ್ಲೆ

ಕಾಸರಗೋಡು: ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗ ನಡೆದಿದ್ದ ಜಗಳದ ದ್ವೇಷ ಇರಿಸಿಕೊಂಡಿದ್ದ ಸಹಪಾಠಿಗಳಿಬ್ಬರು 62 ವರ್ಷದ ವ್ಯಕ್ತಿ ಮೇಲೆ ಹಲ್ಲೆ ನಡೆಸಿದ ಬಗ್ಗೆ ಜಿಲ್ಲೆಯ ಚಿತ್ತಾರಿಕಲ್ಲು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಾಲೋಂ ವೆಟ್ಟಿಕೊಂಬಿಲ್ ವಾಸಿ ವಿ.ಜೆ ಬಾಬು ಹಲ್ಲೆಗೊಳ-ಗಾದವರು. ಜೊತೆಯಲ್ಲಿ ಓದಿದ್ದ ಮಾಲೋಂ ನಿವಾಸಿ ಬಾಲಕೃಷ್ಣನ್ ಮತ್ತು ಮ್ಯಾಥ್ಯೂ ತಮ್ಮ ಮೇಲೆ ಹಲ್ಲೆ ನಡೆಸಿರುವುದಾಗಿ ಬಾಬು ದೂರಿನಲ್ಲಿ ತಿಳಿಸಿದ್ದಾರೆ.

‘ಪೇಟೆಯಲ್ಲಿ ನನ್ನನ್ನು ನೋಡಿ ಕೈ ಮತ್ತು ಕಲ್ಲಿನಿಂದ ಹೊಡೆದು, ಪ್ರತೀಕಾರ ತೀರಿಸಿಕೊಳ್ಳುತ್ತಿರುವು ದಾಗಿ ತಿಳಿಸಿದರು’ ಎಂದು ದೂರಿನಲ್ಲಿ ಬಾಬು ತಿಳಿಸಿದ್ದಾರೆ.

₹12 ಸಾವಿರ ಕೋಟಿ ಬಾಕಿ ಇತ್ತು: ಸತೀಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಹಿಂದಿನ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ₹12 ಸಾವಿರ ಕೋಟಿ ಬಿಲ್ ಬಾಕಿ ಉಳಿಸಿದೆ. ನಾನು ಇಲಾಖೆಯ ಸಚಿವನಾದ ಮೇಲೆ ಒಂದೊಂದಾಗಿ ಬಗೆಹರಿಸುತ್ತಿದ್ದೇನೆ. ಅಭಿವೃದ್ಧಿ ಕಾಮಗಾರಿಗೂ ಹಣ ನೀಡಬೇಕಿದೆ. ಹೀಗಾಗಿ, ಕೆಲ ಬಿಲ್‌ಗಳು ಇನ್ನೂ ಬಾಕಿ ಉಳಿದಿವೆ’ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಬುಧವಾರ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ಬಿಜೆಪಿ ಸರ್ಕಾರ ಬಜೆಟ್ ಇಲ್ಲದೆಯೇ ಕಾಮಗಾರಿ ಮಾಡಿಸಿದೆ. ಗುತ್ತಿಗೆದಾರರು ಕೆಲಸ ಮುಗಿಸಿದ್ದಾರೆ. ಅದರ ಹಣ ನೀಡಬೇಕಿರುವುದು ಸರ್ಕಾರದ ಜವಾಬ್ದಾರಿ. ಅದಕ್ಕೆ ನಾವು ಹಿಂದಿನ ಬಿಲ್‌ಗಳನ್ನು ಪಾವತಿಸುತ್ತ, ಅಭಿವೃದ್ಧಿಗೂ ಆದ್ಯತೆ ನೀಡಬೇಕಿದೆ’ ಎಂದರು.

‘ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಮೇಲ್ಸೇತುವೆ ನಿರ್ಮಾಣಕ್ಕೆ ಸಿದ್ಧತೆ ನಡೆಸಲಾಗಿದೆ. ಕಳೆದ ವರ್ಷ ಇದಕ್ಕೆ ಕೇಂದ್ರ ಸರ್ಕಾರ ದಿಂದ ಅನುದಾನ ಕೋರಲಾಯಿತು. ಅವರು ಸರಿಯಾಗಿ ಸ್ಪಂದಿಸಲಿಲ್ಲ. ಈ ವರ್ಷ ರಾಜ್ಯ ಸರ್ಕಾರದ ಅನುದಾನದಲ್ಲೇ ನಿರ್ಮಿಸಲು ನಿರ್ಧರಿಸಿದ್ದು, ಅಕ್ಟೋಬರ್ ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೂಮಿಪೂಜೆ ನೆರವೇರಿಸಲಿದ್ದಾರೆ’ ಎಂದೂ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಾಂಶಗಳು

- ಬಿಜೆಪಿ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯ ಬಿಲ್ ಬಾಕಿ
- ಹಂತ ಹಂತವಾಗಿ ಇದೀಗ ಹಣ ನೀಡುತ್ತಿದ್ದೇವೆ
- ಇನ್ನೂ ಬಾಕಿ ಉಳಿದ 15 ಕಾಮಗಾರಿ



ಸತೀಶ ಜಾರಕಿಹೊಳಿ

‘ರಾಜ್ಯದಲ್ಲಿ ಶಿಲ್ಕು ಬಿದ್ದಿದ್ದ 42 ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪೈಕಿ, ನಾನು ಬಂದ ಬಳಿಕ 27 ಕಾಮಗಾರಿಗಳನ್ನು ಮುಗಿಸಿದ್ದೇನೆ. ತಾಂತ್ರಿಕ ಸಮಸ್ಯೆ, ಭೂಸ್ವಾಧೀನ, ಅರಣ್ಯದ ಅನುಮತಿಯ ಕಾರಣ ಇನ್ನೂ 15 ಕಾಮಗಾರಿಗಳು ಬಾಕಿ ಉಳಿದಿವೆ’ ಎಂದರು. ಶಾಸಕ ಆಸಿಫ್ ಸೇಠ್ ಸಂವಾದದಲ್ಲಿ ಪಾಲ್ಗೊಂಡರು.

ಕಾಶಿಯಲ್ಲಿ ಕರ್ನಾಟಕ ಛತ್ರ ಪುನರ್ ನಿರ್ಮಾಣಕ್ಕೆ ಪ್ರಸ್ತಾವ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕಾಶಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಆವರಣಗೋಡೆ ಕುಸಿದು ಬಿದ್ದಿದ್ದು, ಅದರ ನಿರ್ಮಾಣ ಮತ್ತು ಛತ್ರ ಪುನರ್‌ನಿರ್ಮಾಣಕ್ಕೆ ಮುಜರಾಯಿ ಇಲಾಖೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ 97 ವರ್ಷಗಳ ಹಿಂದೆ ಕಾಶಿಯ ಗಂಗಾನದಿ ತೀರದಲ್ಲಿ ಕರ್ನಾಟಕ ಛತ್ರವನ್ನು ನಿರ್ಮಿಸಿದ್ದರು. ಇದರ ನವೀಕರಣ-ಕ್ಕಾಗಿ ಕಳೆದ ಬಜೆಟ್‌ನಲ್ಲಿ ಕರ್ನಾಟಕ ಸರ್ಕಾರವು ₹5 ಕೋಟಿ ಘೋಷಣೆ ಮಾಡಿತ್ತು. ಈ ಅನುದಾನ ಬಿಡುಗಡೆ ಆಗುವ ಮೊದಲೇ ಆವರಣಗೋಡೆ ಕುಸಿದು ಬಿದ್ದಿದೆ. ಹಾಗಾಗಿ ಆವರಣಗೋಡೆ ನಿರ್ಮಾಣ ಮತ್ತು ಛತ್ರ ನವೀಕರಣದ ಬದಲು ಹೊಸ ಛತ್ರ ನಿರ್ಮಿಸಲು ಮುಜರಾಯಿ ಇಲಾಖೆ ಮುಂದಾಗಿದೆ.

ಮುಜರಾಯಿ ಇಲಾಖೆಯಿಂದ 2002ರಲ್ಲಿ ಇನ್ನೊಂದು ಛತ್ರವನ್ನು ನಿರ್ಮಿಸಲಾಗಿದ್ದು, ಆವರಣ ಗೋಡೆ ನಿರ್ಮಿಸದೇ ಹೋದರೆ ಎರಡೂ ಛತ್ರಗಳಿಗೆ ಅಪಾಯ ಎದುರಾಗಲಿದೆ.

ಕಾಶಿ, ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಯಾತ್ರೆ ಮಾಡುವ ರಾಜ್ಯದ ಕಾಯಂ ನಿವಾಸಿಗಳಿಗೆ ಸರ್ಕಾರ ಸಹಾಯಧನ ನೀಡುತ್ತಿದೆ.



> **ಕಾಶಿಯಲ್ಲಿ ಹೊಸದಾಗಿ ಛತ್ರ ನಿರ್ಮಾಣ ಮಾಡಲೇಬೇಕಿದೆ. ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣ ಮಾಡಿದ್ದ ಶೈಲಿಯನ್ನು ಉಳಿಸಲು ಸಾಧ್ಯವೇ ಎಂಬುದನ್ನು ನೋಡಬೇಕು.**
> **ರಾಮಲಿಂಗಾರೆಡ್ಡಿ,** ಮುಜರಾಯಿ ಸಚಿವ

ಈ ಯೋಜನೆಯಡಿ ಕಾಶಿ ಯಾತ್ರಿಗಳಿಗೆ ₹ 5,000 ಸಹಾಯಧನ ನೀಡುತ್ತಿದೆ. ಇದರಿಂದಾಗಿ ಕಾಶಿಗೆ ತೆರಳುವವರ ಸಂಖ್ಯೆ ಹೆಚ್ಚಾಗಿದೆ.

ಛತ್ರದಲ್ಲಿ ಒಬ್ಬರು ಗರಿಷ್ಠ 2 ಕೊಠಡಿಗಳನ್ನು ಮುಂಗಡವಾಗಿ ಕಾಯ್ದಿರಿಸುವ, ಗರಿಷ್ಠ ಮೂರು ದಿನಗಳವರೆಗೆ ಉಳಿದುಕೊಳ್ಳುವ ಅವಕಾಶವಿತ್ತು. ಇದೀಗ ಹಾನಿ ಉಂಟಾಗಿರುವುದರಿಂದ ಛತ್ರದ ವಾಸ್ತವ್ಯ ವ್ಯವಸ್ಥೆ ಸ್ಥಗಿತಗೊಂಡಿದೆ.

‘ಕರ್ನಾಟಕ ಛತ್ರದ ಪಕ್ಕದಲ್ಲಿಯೇ ಹರೀಶ್ಚಂದ್ರ ಘಾಟ್ ಇದೆ. ಅಲ್ಲಿಯ ಕಾಮಗಾರಿಯಿಂದಾಗಿ ನಮ್ಮ ಛತ್ರದ ಆವರಣಗೋಡೆಗೆ ಹಾನಿಯಾಗಿ ಕುಸಿದಿದೆ. ಅಲ್ಲದೇ ಛತ್ರಕ್ಕೂ ಹಾನಿಯಾಗಿದೆ’ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.



ಕಾಶಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರ

‘ರಾಜ್ಯದಿಂದ ಕಾಶಿಗೆ ತೆರಳುವ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಈಗಿರುವ ಎರಡು ಮಹಡಿಯ ಛತ್ರ ಎಲ್ಲಿಯೂ ಸಾಕಾಗುತ್ತಿಲ್ಲ. ಮೈಸೂರು ರಾಜರು ನಿರ್ಮಿಸಿ ಶತಮಾನ ಆಗಿರುವುದರಿಂದ ಕಟ್ಟಡವೂ ಹಾಳಾಗುತ್ತಾ ಬಂದಿದೆ. ಈ ಕಟ್ಟಡವನ್ನು ಕೆಡವಿ ಹೆಚ್ಚು ಮಹಡಿಯ ಕಟ್ಟಡ ನಿರ್ಮಿಸಬೇಕಿದೆ’ ಎಂದು ಅವರು ತಿಳಿಸಿದರು.

‘ಕರ್ನಾಟಕ ರಾಜ್ಯ ಛತ್ರಕ್ಕೆ ಮುಂಗಡ ಕಾಯ್ದಿರಿಸುವುದನ್ನು ನಿಲ್ಲಿಸಿದ್ದೇವೆ. ಹೊಸದಾಗಿ ₹18 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಯೋಜನೆ ಸಿದ್ಧಪಡಿಸಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಮುಜರಾಯಿ ಇಲಾಖೆಯ ವಿಶೇಷ ಆಯುಕ್ತರಾದ ಕೆ. ಪದ್ಮಾ ಮಾಹಿತಿ ನೀಡಿದರು.

ಕೋಲಾರದಲ್ಲಿ ಮೊದಲ ಪ್ರಾಯೋಗಿಕ ಅನುಷ್ಠಾನ

ಕೆರೆಯಲ್ಲಿ ತೇಲುವ ಸೌರಫಲಕ!

• ಕೆ.ಓಂಕಾರ ಮೂರ್ತಿ

ಕೋಲಾರ: ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಕೆರೆಯಲ್ಲಿ ತೇಲುವ ಸೌರವಿದ್ಯುತ್ ಘಟಕ ನಿರ್ಮಾಣಕ್ಕೆ ಸರ್ಕಾರ ನಿರ್ಧಾರ ಕೈಗೊಂಡಿದ್ದು, ಕೋಲಾರದಲ್ಲಿ ಪ್ರಾಯೋಗಿಕ ಅನುಷ್ಠಾನಕ್ಕೆ ಸಿದ್ಧತೆ ನಡೆದಿದೆ.

ಕೋಲಾರ ತಾಲ್ಲೂಕಿನ ಸುಗಟೂರು ಹೋಬಳಿಯ ಸೋಮಾಂಬುಧಿ ಅಗ್ರಹಾರ ಕೆರೆ ನೀರಿನ ಮೇಲೆ ಸೌರಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸಲು ಸಣ್ಣ ನೀರಾವರಿ ಇಲಾಖೆಯಿಂದ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ.

ಕೆ.ಸಿ.ವ್ಯಾಲಿ ಯೋಜನೆ ಬಳಿಕ ಈ ಕೆರೆಯಲ್ಲಿ ವರ್ಷವಿಡೀ ನೀರು ತುಂಬಿಕೊಂಡಿರುವ ಕಾರಣ ಸೌರ ಘಟಕ ಅಳವಡಿಸಲು ಆಯ್ಕೆ ಮಾಡಲಾಗಿದೆ.

ಸುಮಾರು ಒಂದು ಸಾವಿರ ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಈ ಕೆರೆ ಜಿಲ್ಲೆಯಲ್ಲೇ ದೊಡ್ಡ ಹಾಗೂ ವಿಶಾಲವಾಗಿದ್ದು ಕೆರೆಗಳಲ್ಲಿ ಒಂದಾಗಿದೆ. ಉತ್ತಮ ಬಿಸಿಲು ಬೀಳುವ ಪ್ರದೇಶವೂ ಇದಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುತ್ತಿರುವ ಕಾರಣ ಹಲವಾರು ಬಾರಿ ಈ ಕೆರೆ ತುಂಬಿ ಕೋಡಿ ಒಡೆದಿತ್ತು. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದಿಂದ ಮಳೆಗಾಲದಲ್ಲಿ ಹರಿಯುವ ಪಾಲಾರ್ ನದಿ ಜಾಡಿನಲ್ಲಿ ಸೋಮಾಂಬುಧಿ ಎಸ್.ಅಗ್ರಹಾರ ಕೆರೆ ಸಿಗುತ್ತದೆ.

ಕೋಲಾರದ ಯಶಸ್ಸಿನ ಆಧಾರದ ಮೇರೆಗೆ ರಾಜ್ಯದ ವಿವಿಧೆಡೆ ಇಲಾಖೆ ವ್ಯಾಪ್ತಿಯಲ್ಲಿರುವ 100 ಎಕರೆಗೂ ಹೆಚ್ಚಿನ ವಿಸ್ತೀರ್ಣದ 40ಕ್ಕೂ ಹೆಚ್ಚು ಕೆರೆಗಳಲ್ಲಿ ತೇಲುವ ಸೌರ ಘಟಕ ಅಳವಡಿಸಲು ಸರ್ಕಾರ ಮುಂದಾಗಲಿದೆ. ಈ ಮೂಲಕ 2,500 ಮೆಗಾ ವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ.

ಮುಖ್ಯಾಂಶಗಳು

- ಕರ್ನಾಟಕದಲ್ಲಿ ಮೊದಲ ಬಾರಿ ಪ್ರಯೋಗ
- ಕೋಲಾರದ ಸೋಮಾಂಬುಧಿ ಅಗ್ರಹಾರ ಕೆರೆಯಲ್ಲಿ ಸ್ಥಾಪನೆಗೆ ಸಿದ್ಧತೆ
- ಸಣ್ಣ ನೀರಾವರಿ ಇಲಾಖೆಯ ಮಹತ್ವದ ಯೋಜನೆ

> **ಕೆರೆಗಳಲ್ಲಿ ತೇಲುವ ಸೌರ ಘಟಕ ಕರ್ನಾಟಕದಲ್ಲಿ ಈವರೆಗೆ ಎಲ್ಲೂ ಇಲ್ಲ. ಮಧ್ಯಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇಂಥ ವ್ಯವಸ್ಥೆ ಇದೆ**
> **ವಿಷ್ಣು ಕಾಮತ್**
> ಕಾರ್ಯಪಾಲಕ ಎಂಜಿನಿಯರ್ (ಪ್ರಭಾರ), ಸಣ್ಣ ನೀರಾವರಿ ಇಲಾಖೆ



ತೇಲುವ ಸೌರ ಫಲಕ ಅಳವಡಿಸಲು ಉದ್ದೇಶಿಸಿರುವ ಕೋಲಾರ ತಾಲ್ಲೂಕಿನ ಸೋಮಾಂಬುಧಿ ಅಗ್ರಹಾರ ಕೆರೆ

‘ಇಲಾಖೆಯಲ್ಲಿ ಕೆ.ಸಿ.ವ್ಯಾಲಿ ಹಾಗೂ ಎಚ್.ಎನ್.ವ್ಯಾಲಿಗೆ ಸಂಬಂಧಿಸಿದಂತೆ ನೀರು ಹರಿಸುವ ಕಾರ್ಯಕ್ಕೆ ವಿದ್ಯುತ್ ಬಳಸುತ್ತಿದ್ದು, ಕೋಟ್ಯಂತರ ರೂಪಾಯಿ ಶುಲ್ಕ ಬರುತ್ತಿದೆ. ಹೀಗಾಗಿ, ಖರ್ಚು ತಗ್ಗಿಸುವ ನಿಟ್ಟಿನಲ್ಲಿ ಪರ್ಯಾಯವಾಗಿ ಕೆರೆ ನೀರಿನ ಮೇಲೆ ಸೌರ ಫಲಕ ಅಳವಡಿಸುವ ತೀರ್ಮಾನಕ್ಕೆ ಬರಲಾಗಿದೆ. ವಿದ್ಯುತ್ ಉತ್ಪಾದಿಸಿ ವಿದ್ಯುತ್ ನಿಗಮದ ಗ್ರಿಡ್‌ಗೆ ಕೊಡಲಾಗುವುದು’ ಎಂದು ಸಣ್ಣ ನೀರಾವರಿ ಇಲಾಖೆ ಪ್ರಭಾರ ಕಾರ್ಯಪಾಲಕ ಎಂಜಿನಿಯರ್ ವಿಷ್ಣು ಕಾಮತ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿದ್ಯುತ್‌ಗೆ ತಗುಲುವ ವೆಚ್ಚವೂ ಕಡಿಮೆಯಾಗುತ್ತದೆ. ಸ್ವಾವಲಂಬನೆ ಸಾಧಿಸಬಹುದು. ವಿನೂತನ ತಂತ್ರಜ್ಞಾನ ಸೌರಫಲಕ ಅಳವಡಿಸಿದರೆ ಕೆರೆಯ ನೀರಿನ ಮಟ್ಟ ಹೆಚ್ಚು ಕಡಿಮೆಯಾದರೂ ಸಮಸ್ಯೆ ಆಗುವುದಿಲ್ಲ’ ಎಂದರು.

ಎಲ್ಲೆಲ್ಲಿ ತೇಲುವ ಸೌರಫಲಕ?

- ತೆಲಂಗಾಣದ ರಾಮಗುಂಡಂ ಬಳಿ. ಇದು ದೇಶದ ಮೊದಲ ತೇಲುವ ಘಟಕ
- ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯಲ್ಲಿ ನರ್ಮದಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಓಂಕಾರೇಶ್ವರ ಜಲಾಶಯದ ಹಿನ್ನೀರಿನಲ್ಲಿ ತೇಲುವ ಸೌರ ಘಟಕವಿದೆ.
- ಕೇರಳದ ವಯನಾಡಿನ ಬಾಣಾಸುರ್ ಸಾಗರ ಜಲಾಶಯದಲ್ಲಿ ಘಟಕವಿದೆ.

ಆಯ್ಕೆ ಪಟ್ಟಿ ಪ್ರಕಟಿಸದೆ ‘ನಾಲ್ವಡಿ ಪ್ರಶಸ್ತಿ’ ಪ್ರದಾನ

ಮೈಸೂರು: ಪ್ರಸಕ್ತ ಸಾಲಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು 20 ಮಂದಿಗೆ ಬುಧವಾರ ಪ್ರದಾನ ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು, ಪುರಸ್ಕೃತರ ಪಟ್ಟಿಯನ್ನು ಮುಚ್ಚಿಟ್ಟಿದ್ದ ಆರೋಪ ಕೇಳಿಬಂದಿದೆ.

ಇಲ್ಲಿನ ಕಲಾಮಂದಿರದಲ್ಲಿ ನಡೆದ ಜಯಂತಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಲಾಯಿತು. ಇಲಾಖೆಯ ಆಹ್ವಾನ ಪತ್ರಿಕೆಯಲ್ಲೂ ಪ್ರಶಸ್ತಿ ಪುರಸ್ಕೃತರ ಉಲ್ಲೇಖ ಎಲ್ಲೂ ಇಲ್ಲ. ಪುರಸ್ಕೃತರ ಪಟ್ಟಿಯನ್ನು ಸಾರ್ವಜನಿಕ ಪ್ರಕಟಣೆಯನ್ನೂ ಮಾಡಿಲ್ಲ. ಪಟ್ಟಿಯನ್ನು ಕತ್ತಲಲ್ಲಿಟ್ಟು, ತರಾತುರಿಯಲ್ಲಿ ಪ್ರದಾನ ಮಾಡಿರುವುದು, ಆಯ್ಕೆ ಪಾರದರ್ಶಕವಾಗಿ ನಡೆದಿಲ್ಲ ಎಂಬ ಬಗ್ಗೆ ಅನುಮಾನ ಮೂಡಿದೆ.

ಪ್ರಶಸ್ತಿಗೆ ಆಯ್ಕೆಯಾಗಿರುವ ಬಗ್ಗೆ ಪುರಸ್ಕೃತರಿಗೆ ಹಿಂದಿನ ದಿನ ರಾತ್ರಿಯಷ್ಟೇ ಮಾಹಿತಿ ನೀಡಲಾಯಿತು. ಪತ್ರಿಕಾ ಪ್ರಕಟಣೆಯನ್ನೂ ಇಲಾಖೆ ನೀಡಿರಲಿಲ್ಲ. ಇದುವರೆಗೂ ಪ್ರಶಸ್ತಿ ಪ್ರಕಟಣೆಯನ್ನು ಮುಂಚಿತವಾಗಿ ಹೊರಡಿಸುತ್ತಿತ್ತು.

ರಾಜ್ಯದಲ್ಲಿ ಹೆಚ್ಚಿದ ಮೊಬೈಲ್ ಕಳ್ಳತನ ಪ್ರಕರಣಗಳು ● ತಾಂತ್ರಿಕ ಸುಳಿವು ಆಧರಿಸಿ ತನಿಖೆ

ಮೊಬೈಲ್ ಪತ್ತೆ: 2ನೇ ಸ್ಥಾನಕ್ಕೆ ಕುಸಿತ

● ಆದಿತ್ಯ ಕೆ.ಎ.

ಬೆಂಗಳೂರು: ನಿರ್ಲಕ್ಷ್ಯದಿಂದ ಕಳೆದುಹೋದ ಹಾಗೂ ಕಳ್ಳತನವಾದ ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಜಪ್ತಿ ಮಾಡುವಲ್ಲಿ ಕಳೆದ ಮೂರು ವರ್ಷಗಳಿಂದ ಮುಂಚೂಣಿಯಲ್ಲಿದ್ದ ಕರ್ನಾಟಕ ಈ ವರ್ಷ ತುಸು ಹಿಂದೆ ಬಿದ್ದಿದೆ. ಮೊಬೈಲ್ ಪತ್ತೆಹಚ್ಚಿ ದೂರುದಾರರಿಗೆ ಒಪ್ಪಿಸುವ ಪ್ರಕ್ರಿಯೆಯಲ್ಲಿ ತೆಲಂಗಾಣ ಮೊದಲ ಸ್ಥಾನಕ್ಕೇರಿದೆ. ರಾಜ್ಯ ಎರಡನೇ ಸ್ಥಾನದಲ್ಲಿದೆ.

ಮೊಬೈಲ್ ಕಳ್ಳರ ತಂಡಗಳು ರಾಜ್ಯದಲ್ಲಿ ಮತ್ತೆ ಸಕ್ರಿಯವಾಗಿವೆ. ಬಸ್ ಹಾಗೂ ರೈಲು ಹತ್ತುವಾಗ, ಬಸ್ ನಿಲ್ದಾಣ, ಜಾತ್ರೆ ಹಾಗೂ ಜನದಟ್ಟಣೆ ಪ್ರದೇಶದಲ್ಲಿ ಮೊಬೈಲ್ ಕದ್ದು ಕಳ್ಳರು ಪರಾರಿ ಆಗುತ್ತಿದ್ದಾರೆ. ಬೆಂಗಳೂರು ಸೇರಿ ವಿವಿಧ ಭಾಗಗಳಲ್ಲಿ ಇತ್ತೀಚೆಗೆ ಮೊಬೈಲ್ ಕಳ್ಳತನ ಪ್ರಕರಣಗಳು ಹೆಚ್ಚಾಗಿ ವರದಿ ಆಗುತ್ತಿವೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ಇ-ಲಾಸ್ಟ್ ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ತಾಂತ್ರಿಕ ಸುಳಿವು ಆಧರಿಸಿ, ಪೊಲೀಸರು ತನಿಖೆ ನಡೆಸಿ ಮೊಬೈಲ್ ಪತ್ತೆ ಹಚ್ಚುತ್ತಾರೆ.

> **ಕಳವಾದ ಮೊಬೈಲ್‌ಗಳನ್ನು ಬ್ಲಾಕ್ ಮಾಡಿಸಿ, ಗೋಪ್ಯತೆ ಕಾಪಾಡಿಕೊಳ್ಳಬೇಕು. ಅನುಮಾನಾಸ್ಪದ ಕರೆಗಳು ಬಂದರೆ ಸಂಚಾರ ಸಾಥಿಗೆ ಮಾಹಿತಿ ನೀಡಬೇಕು**
> **ಬಿ.ದಯಾನಂದ**
> ನಗರ ಪೊಲೀಸ್ ಕಮಿಷನರ್

ದೇಶದಲ್ಲಿ ಸಿಇಐಆರ್ ಅನ್ನು 2022ರ ಮೇ 17ರಂದು ಆರಂಭಿಸಲಾಗಿತ್ತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು. ನಂತರ, ಇತರೆ ಸ್ಥಳಗಳಲ್ಲೂ ಜಾರಿಗೆ ತರಲಾಗಿತ್ತು. ಆರಂಭಿಕ ಹಂತದಲ್ಲಿ ಕಳ್ಳರಿಂದ 10,579 ಮೊಬೈಲ್ ಜಪ್ತಿ ಮಾಡಿಕೊಳ್ಳುವಲ್ಲಿ ರಾಜ್ಯದ ಪೊಲೀಸರು ಯಶಸ್ವಿ ಆಗಿದ್ದರು. 2024ರ ಜೂನ್ ವೇಳೆಗೆ ಪೊಲೀಸರು 41,400 ಮೊಬೈಲ್ ಜಪ್ತಿ ಮಾಡಿದ್ದರು. ದೇಶದಲ್ಲೇ ರಾಜ್ಯ ಪ್ರಥಮ ಸ್ಥಾನದಲ್ಲಿತ್ತು. ಈ ವರ್ಷ ಮೊಬೈಲ್ ಜಪ್ತಿ ಕಾರ್ಯಾಚರಣೆಯಲ್ಲಿ ತೆಲಂಗಾಣ ರಾಜ್ಯ ಮುಂಚೂಣಿಯಲ್ಲಿ ಇದೆ.

ರಾಜ್ಯದಲ್ಲಿ ಇದುವರೆಗೂ (ಜೂನ್ 4ರ ವರೆಗೆ) ಕಳ್ಳತನವಾದ 3,85,930 ಮೊಬೈಲ್‌ಗಳನ್ನು ಬ್ಲಾಕ್ (ನಿಷ್ಕ್ರಿಯ) ಮಾಡಲಾಗಿದೆ. 2,08,567 ಮೊಬೈಲ್ ಪತ್ತೆಹಚ್ಚಿ, ಆರೋಪಿಗಳಿಂದ 79,664 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

ವಿವಿಧ ರಾಜ್ಯಗಳಲ್ಲಿ ಕಳೆದುಹೋದ/ ಕಳ್ಳತನವಾದ ಮೊಬೈಲ್ ವಿವರ


ರಾಜ್ಯ	ಬ್ಲಾಕ್ ಮಾಡಿದ ಮೊಬೈಲ್‌ಗಳು	ಪತ್ತೆ	ಜಪ್ತಿಯಾದ ಮೊಬೈಲ್
ತೆಲಂಗಾಣ	3,44,494	1,92,534	80,483
ಕರ್ನಾಟಕ	3,85,930	2,08,567	79,664
ಮಹಾರಾಷ್ಟ್ರ	4,12,974	2,34,339	45,147
ಉತ್ತರ ಪ್ರದೇಶ	1,89,563	1,18,069	29,895
ರಾಜಸ್ಥಾನ	1,00,581	66,822	27,236
ತಮಿಳುನಾಡು	1,34,591	79,357	26,549
ದೆಹಲಿ	7,82,243	5,01,565	9,177

(ಸಿಇಐಆರ್ ಮಾಹಿತಿ)

ಮೊಬೈಲ್ ಕಳೆದುಹೋದ ತಕ್ಷಣ ಐಎಂಇಐ ಸಂಖ್ಯೆ ಸಹಿತ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎಫ್‌ಐಆರ್ ಅಥವಾ ಇ-ಲಾಸ್ಟ್ ಪ್ರತಿಯನ್ನು ಸಿಇಐಆರ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಬೇಕು. ಆಗ ಕದ್ದ ಮೊಬೈಲ್‌ಗೆ ಹೊಸ ಸಿಮ್ ಹಾಕಿದಾಗ ಪೊಲೀಸರಿಗೆ ಸಂದೇಶ ಬರಲಿದೆ. ಅದನ್ನು ಆಧರಿಸಿ ತನಿಖೆ ಆರಂಭವಾಗಲಿದೆ. ಜತೆಗೆ ಈ ತಂತ್ರಾಂಶದಲ್ಲಿ, ಕಳುವಾದ ಮೊಬೈಲ್‌ಗಳನ್ನು ಐಎಂಇಐ ಸಂಖ್ಯೆ ಮೂಲಕ ಪತ್ತೆ ಮಾಡುವ, ಮೊಬೈಲ್‌ಗಳನ್ನು ಮತ್ತೊಬ್ಬರು ಬಳಸದಂತೆ ನಿಷ್ಕ್ರಿಯಗೊಳಿಸುವ ಅವಕಾಶವೂ ಇದೆ ಎಂದು ಪೊಲೀಸರು ಹೇಳಿದರು.

'ರಾಜ್ಯದ ವಿವಿಧೆಡೆ ಕಳ್ಳತನವಾದ ಮೊಬೈಲ್‌ಗಳು ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಆಂಧ್ರಪ್ರದೇಶದಲ್ಲಿ ಹೆಚ್ಚು ಪತ್ತೆ ಆಗುತ್ತಿವೆ. ಮೊಬೈಲ್ ಕಳ್ಳತನ ಪ್ರಕರಣಗಳಲ್ಲಿ ದೆಹಲಿಯಲ್ಲಿ ಹೆಚ್ಚು ನಡೆಯುತ್ತಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ದೆಹಲಿಯಲ್ಲಿ ಇದುವರೆಗೂ 7,82,243 ಮೊಬೈಲ್‌ಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. 9,177 ಮೊಬೈಲ್‌ಗಳನ್ನಷ್ಟೇ ದೂರುದಾರರಿಗೆ ವಾಪಸ್ ಮಾಡಲು ಅಲ್ಲಿನ ಪೊಲೀಸರಿಗೆ ಸಾಧ್ಯವಾಗಿದೆ. ಅರುಣಾಚಲ ಪ್ರದೇಶ, ಗೋವಾ, ಚಂಡೀಗಢ, ನಾಗಾಲ್ಯಾಂಡ್, ತ್ರಿಪುರಾದಲ್ಲಿ ಮೊಬೈಲ್ ಕಳ್ಳತನ ಪ್ರಕರಣಗಳು ಹೆಚ್ಚು ವರದಿಯಾಗಿಲ್ಲ' ಎಂದು ಮೂಲಗಳು ತಿಳಿಸಿವೆ.



ದೇಶದಲ್ಲಿ ಮೊಬೈಲ್ ಕಳ್ಳತನದ ಒಟ್ಟು ಪ್ರಕರಣಗಳು

32,69,412
ದೇಶದಲ್ಲಿ ನಿಷ್ಕ್ರಿಯಗೊಳಿಸಿದ ಮೊಬೈಲ್‌ಗಳ ಸಂಖ್ಯೆ

19,77,354
ಪತ್ತೆಯಾದ ಮೊಬೈಲ್‌ಗಳ ಸಂಖ್ಯೆ

4,46,682
ಆರೋಪಿಗಳಿಂದ ಜಪ್ತಿಯಾದ ಮೊಬೈಲ್‌ಗಳ ಸಂಖ್ಯೆ



ಮೈಸೂರಿನ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಬುಧವಾರ ಕೆಎಸ್‌ಡಿಎಲ್‌ನಿಂದ ಅರಣ್ಯ ಇಲಾಖೆ ಸಿಬ್ಬಂದಿಗೆ ಸುರಕ್ಷಾ ಕಿಟ್ ವಿತರಿಸಲಾಯಿತು. ಬಿ.ಜೆ.ವಿಜಯ್‌ಕುಮಾರ್, ಧ್ರುವ ಪಾಟೀಲ, ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವರಾದ ಎಂ.ಬಿ. ಪಾಟೀಲ, ಈಶ್ವರಖಂಡ್ರೆ, ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ, ಸುಭಾಷ್ ಮಾಳಖೇಡ, ಕುಮಾರ್ ಪುಷ್ಕರ್ ಜೊತೆಗಿದ್ದರು ಪ್ರಜಾವಾಣಿ ಚಿತ್ರ

'ಹಾಲಿವುಡ್ ನಟಿಯೂ ರಾಯಭಾರಿಯಾಗುತ್ತಾರೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್‌ಡಿಎಲ್) ಸಂಸ್ಥೆಯು ಮುಂದೊಂದು ದಿನ, ಏಂಜಲೀನಾ ಜ್ಯೂಲಿಯಂತಹ ಹಾಲಿವುಡ್ ನಟಿಯರನ್ನು ರಾಯಭಾರಿಯನ್ನಾಗಿ ನೇಮಿಸಿಕೊಳ್ಳುವ ಕಾಲ ಬರುತ್ತದೆ. ಇದನ್ನೆಲ್ಲ ಕೇವಲ ವ್ಯಾಪಾರ ವಿಸ್ತರಣೆಯ ದೃಷ್ಟಿಯಿಂದ ನೋಡಬೇಕು' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಪ್ರತಿಪಾದಿಸಿದರು.

ಇಲ್ಲಿ ಬುಧವಾರ ಪತ್ರಕರ್ತರಿಗೆ ಪ್ರತಿಕ್ರಿಯಿಸಿ, 'ಮೈಸೂರು ಸ್ಯಾಂಡಲ್ ಸೋಪ್ ಕರ್ನಾಟಕದಲ್ಲಿ ಶೇ 18ರಷ್ಟು ಮಾತ್ರ ಮಾರಾಟವಾದರೆ, ಹೊರ ರಾಜ್ಯಗಳಲ್ಲಿ ಶೇ 82ರಷ್ಟು ಮಾರಾಟವಾಗುತ್ತಿದೆ. ಅನ್ಯ ರಾಜ್ಯದ ಗ್ರಾಹಕರನ್ನು ಸೆಳೆಯಲು ನಟಿ ತಮನ್ನಾರನ್ನು ರಾಯಭಾರಿಯನ್ನಾಗಿ ನೇಮಿಸಿಕೊಳ್ಳಲಾಗಿದೆ. ಅವರು ಸಾಮಾಜಿಕ ಮಾಧ್ಯಮಗಳಲ್ಲಿ 2.8 ಕೋಟಿ ಫಾಲೋವರ್ಸ್ ಹೊಂದಿದ್ದಾರೆ' ಎಂದರು.

'ಸಂಸ್ಥೆಯು ಈಚೆಗೆ ಇ-ಕಾಮರ್ಸ್ ಸೇವೆ ವಿಸ್ತರಿಸಿದ್ದು, ಮಲ್ಲಿಗೆ ಪರಿಮಳದ ಸೋಪ್ ಉತ್ಪಾದನೆ ಆರಂಭಿಸಲಾಗುತ್ತಿದೆ. ಹೊರ ರಾಜ್ಯ ಹಾಗೂ ರಫ್ತಿನ ಮೇಲೆ ಗಮನ ಕೇಂದ್ರೀಕರಿಸಲಿದ್ದೇವೆ' ಎಂದರು.

ಬದಲಾವಣೆ ಇಲ್ಲ: 'ಮುಖ್ಯಮಂತ್ರಿ ಕುರ್ಚಿ ಸದ್ಯ ಖಾಲಿ ಇಲ್ಲ. ಸೂಕ್ತ ಸಮಯದಲ್ಲಿ ಪಕ್ಷದ ಹೈಕಮಾಂಡ್ ತೀರ್ಮಾನಿಸಲಿದೆ. ಸಂಪುಟ ವಿಸ್ತರಣೆಯೂ ಹೈಕಮಾಂಡ್‌ಗೆ ಬಿಟ್ಟ ವಿಚಾರ' ಎಂದರು.

'ಸಿದ್ದರಾಮಯ್ಯ 10 ವರ್ಷವೂ ಅಧಿಕಾರದಲ್ಲಿ ಇರಬಹುದು'

ಪ್ರಜಾವಾಣಿ ವಾರ್ತೆ



ಕೆ.ಜೆ. ಜಾರ್ಜ್

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜನ ಬೆಂಬಲವಿದೆ. ಅವರು ಅಧಿಕಾರದಲ್ಲಿ 5 ವರ್ಷವೂ ಇರಬಹುದು; 10 ವರ್ಷವೂ ಇರಬಹುದು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಡೆಯುತ್ತಿರುವ ಚರ್ಚೆಯ ಬಗ್ಗೆ ಇಲ್ಲಿ ಬುಧವಾರ ಪ್ರತಿಕ್ರಿಯಿಸಿ, 'ನವೆಂಬರ್ ಎಂದು ನೀವೇ ಸಮಯ ನಿಗದಿಪಡಿಸಿದ್ದೀರಾ? ಈಗ ಜೂನ್‌ನಲ್ಲಿದ್ದೇವೆ. ನವೆಂಬರ್ ಬರಲಿ, ಆಗ ಮಾತನಾಡುತ್ತೇನೆ. ಹೈಕಮಾಂಡ್ ಹಾಗೂ ಶಾಸಕರ ಬೆಂಬಲ ಸಿದ್ದರಾಮಯ್ಯ ಹಾಗೂ ನಮ್ಮ ಸರ್ಕಾರದ ಮೇಲಿದೆ. ಯಾವ ವಿಚಾರವನ್ನು ಯಾವಾಗ ನಿರ್ಧರಿಸಬೇಕೆಂದು ಹೈಕಮಾಂಡ್‌ಗೆ ಗೊತ್ತಿದೆ' ಎಂದರು.

'ಐದು ವರ್ಷವೂ ಕಾಂಗ್ರೆಸ್ ಸರ್ಕಾರ ಇರುತ್ತದೆ. ಈ ವಿಚಾರದ ಬಗ್ಗೆ ಹೆಚ್ಚು ಪ್ರಶ್ನೆ ಕೇಳಿ ನನ್ನನ್ನು ಸಿಲುಕಿಸಲು ಯತ್ನಿಸಬೇಡಿ. ನೀವು ಪ್ರಶ್ನೆ ಕೇಳಿದ್ದೀರಾ ನಾನು ಉತ್ತರಿಸಿದ್ದೇನೆ. ನನ್ನದೇ ಪ್ರಶ್ನೆ-ನನ್ನದೇ ಉತ್ತರ ಎಂಬಂತೆ ಬಿಂಬಿಸಬೇಡಿ' ಎಂದರು.

'ಸ್ಮಾರ್ಟ್ ಮೀಟರ್ ಅಳವಡಿಕೆಯಲ್ಲಿ ಅವ್ಯವಹಾರ ನಡೆದಿದೆ' ಎಂಬ ಬಿಜೆಪಿಯ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿ, 'ಬಿಜೆಪಿಗೆ ಕಿಕ್ಕೂ ಇಲ್ಲ, ಬ್ಯಾಕೂ ಇಲ್ಲ. ಅವರೇನು ಅದರ ಬಗ್ಗೆ ಮಾತನಾಡುವುದು? ಅವರು ಎಲ್ಲಾ ವಿಚಾರಗಳಲ್ಲೂ ಇಂಥಾದ್ದೇ ಆರೋಪಗಳನ್ನು ಮಾಡುತ್ತಾರೆ. ಬೆಂಗಳೂರಿನಲ್ಲಿ ಉಕ್ಕಿನ ಸೇತುವೆ ವಿಚಾರದಲ್ಲಿ ಇದೇ ರೀತಿ ದೂರಿದ್ದರು. ಈಗ ಆ ಸೇತುವೆ ನಿರ್ಮಾಣವಾಗದೇ ಜನ ಕಷ್ಟ ಅನುಭವಿಸುತ್ತಿದ್ದಾರೆ' ಎಂದು ಹೇಳಿದರು.

'ನಾನು ಸಾಫ್ಟ್ ನಾಯಕನೇನಲ್ಲ. ಸೌಮ್ಯವಾಗಿ ಮಾತನಾಡುತ್ತೇನಷ್ಟೆ. ನಾನು ಯುವ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಹಲವು ಇಲಾಖೆಗಳ ಜವಾಬ್ದಾರಿ ನಿರ್ವಹಿಸಿದ್ದೇನೆ. ನಾನು ಸಾಫ್ಟ್ ಆಗಿದ್ದರೆ ಇವೆಲ್ಲಾ ಆಗುತ್ತಿತ್ತಾ?' ಎಂದು ಕೇಳಿದರು.

'ಐಎಎಸ್ ಅಧಿಕಾರಿ ಡಿ.ಕೆ. ರವಿ ಪ್ರಕರಣದಲ್ಲೂ ನನ್ನ ಮೇಲೆ ಆರೋಪ ಮಾಡಿದ್ದರು. ಆಮೇಲೆ ಸಿಬಿಐ ವರದಿ ಏನು ಬಂತು? ನನ್ನ ಪಾತ್ರವೇ ಇಲ್ಲವೆಂದು ಬಂತು. ಈಗ ಬಂದಿರುವ ಆರೋಪವೂ ಅಂಥಾದ್ದೇ. ಬಿಜೆಪಿಯವರು ನನ್ನ ಮೇಲೆ ಮಾತ್ರ ಹೀಗೆ ಏಕೆ ಆರೋಪಿಸುತ್ತಾರೋ ಗೊತ್ತಿಲ್ಲ' ಎಂದರು.

'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅಭಿಮತ

'ಜ್ಞಾನ, ಆತ್ಮವಿಶ್ವಾಸವಿದ್ದರೆ ಭಾಷೆ ಮುಖ್ಯವಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂಗ್ಲಿಷ್ ಬರುವುದಿಲ್ಲ ಎಂಬ ಕೀಳರಿಮೆಯನ್ನು ಬಿಡಬೇಕು. ಜ್ಞಾನ ಮತ್ತು ಆತ್ಮವಿಶ್ವಾಸವಿದ್ದರೆ ಭಾಷೆ ಮುಖ್ಯವಾಗದು' ಎಂದು 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ವಿಜೇತ ಲೇಖಕಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ವೇಳೆ ಪ್ರೇಕ್ಷಕರೊಬ್ಬರು 'ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ನಗರ ಪ್ರದೇಶಕ್ಕೆ ಬರಲು ಭಯಪಡುತ್ತಾರೆ. ಅವರಿಗೆ ನಿಮ್ಮ ಕಿವಿಮಾತು ಏನು' ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಬಾನು, 'ನಾನು ಕೂಡ ಪ್ರೌಢಶಾಲೆಯವರೆಗೆ ಕನ್ನಡ ಮಾಧ್ಯಮದಲ್ಲಿಯೇ ಓದಿದ್ದೇನೆ. ಇಂಗ್ಲಿಷ್ ಭಾಷೆ ನನಗೆ ಈಗಲೂ ಕಷ್ಟ. ಲಂಡನ್‌ಗೆ ಹೋದಾಗಲೂ ಈ ಬಗ್ಗೆ ಅಲ್ಲಿನವರಿಗೆ ಮನವರಿಕೆ ಮಾಡಿಸಿದೆ. ಅದು ನನಗೆ ಮುಜುಗರದ ವಿಷಯವಾಗಿರಲಿಲ್ಲ. ಗ್ರಾಮೀಣ ಭಾಗದ ಮಕ್ಕಳು ಇಂಗ್ಲಿಷ್ ಬರುವುದಿಲ್ಲವೆಂದು ಮುಜುಗರ ಪಟ್ಟುಕೊಳ್ಳಬಾರದು. ಜ್ಞಾನ ವೃದ್ಧಿಸಿಕೊಂಡು, ತಮ್ಮ ಭಾಷೆಯಲ್ಲಿ ಆತ್ಮವಿಶ್ವಾಸದಿಂದ ಮಾತನಾಡಬೇಕು' ಎಂದರು.

'ಈಗ ಅನುವಾದಕ್ಕೆ ಸಾಕಷ್ಟು ವ್ಯವಸ್ಥೆಯಿದೆ. ನನಗೆ ಪ್ರಶಸ್ತಿ ಬಂದ ಬಳಿಕ, ಬಿಬಿಸಿ ವಾಹಿನಿಯ ಸಂದರ್ಶನದ ವೇಳೆ ಅವರ ಇಂಗ್ಲಿಷ್ ಸುಲಭವಾಗಿ ಅರ್ಥವಾಗುತ್ತಿರಲಿಲ್ಲ. ಆಗ ಭಾಷಾ ಸಹಾಯಕರನ್ನು ಕೇಳಿದೆ. ಅವರ ನೆರವಿನಿಂದ ಸುಲಭವಾಗಿ ಸಂದರ್ಶನ ನೀಡಿದೆ. ನಮ್ಮಲ್ಲಿ ಜ್ಞಾನವಿದ್ದು, ಅದು ಬೇರೆಯವರಿಗೆ ಅಗತ್ಯವಿದ್ದಲ್ಲಿ ಅವರು ತಮ್ಮ ಭಾಷೆಗೆ ಅನುವಾದ ಮಾಡಿಕೊಳ್ಳುತ್ತಾರೆ' ಎಂದು ಹೇಳಿದರು.



ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಾನು ಮುಷ್ತಾಕ್, ದೀಪಾ ಭಾಸ್ತಿ ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು
- ಇಂಗ್ಲಿಷ್ ಬರುವುದಿಲ್ಲವೆಂದು ಮುಜುಗರ ಪಟ್ಟುಕೊಳ್ಳಬೇಡಿ
- ಬದುಕಿನಲ್ಲಿ ಸಾಹಿತ್ಯ, ಕಲೆ ಅತ್ಯಗತ್ಯ
- ಪ್ರಪಂಚದಲ್ಲಿ ಪಿತೃಪ್ರಭುತ್ವದ ಆಳ್ವಿಕೆ

'ಬದುಕಿನಲ್ಲಿ ಸಾಹಿತ್ಯ, ಕಲೆ ಅತ್ಯಗತ್ಯ. ಈ ಸಾಂಸ್ಕೃತಿಕ ಕ್ರಿಯೆ ಇಲ್ಲದಿದ್ದರೆ ಮನುಷ್ಯರು ಹುಚ್ಚರಾಗುತ್ತಾರೆ. ಮೊಬೈಲ್ ಗೀಳಿಗೆ ಒಳಗಾಗಿರುವ ಯುವಜನರನ್ನು ನೋಡಿದರೆ ಅದು ಅರ್ಥವಾಗುತ್ತದೆ' ಎಂದರು.

'ಇಲ್ಲಿಯ ಸಂಸ್ಕೃತಿ, ಧರ್ಮ-ಜಾತಿಯ ಆಧಾರದಲ್ಲಿ ಬರೆದ ಕಥೆಗಳು ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಿಗೆ ಸುಲಭವಾಗಿ ಅರ್ಥವಾಯಿತೆ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಪಿತೃಪ್ರಭುತ್ವ ಎನ್ನುವುದು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿ ಆಳ್ವಿಕೆ ಮಾಡುತ್ತಿದೆ. ಇದರಿಂದಾಗಿ ನನ್ನ ಕಥೆಗಳನ್ನು ಓದಲು ಅವರಿಗೆ ಹೆಚ್ಚಿನ ತರಬೇತಿ ಅಗತ್ಯವಿರಲಿಲ್ಲ' ಎಂದು ಅಭಿಪ್ರಾಯಪಟ್ಟರು.

ಅನುವಾದಕಿ ದೀಪಾ ಭಾಸ್ತಿ, 'ಅನುವಾದ ಸುಲಭವಾದ ಪ್ರಕ್ರಿಯೆಯಲ್ಲ. ಸಂಸ್ಕೃತಿ, ಮೂಲ ಲೇಖಕರ ಆಶಯ ಅರಿತು ಬರೆಯಬೇಕಾಗುತ್ತದೆ' ಎಂದರು.

ಪತ್ರಕರ್ತ ದಿನೇಶ್ ಅಮಿನ್ ಮಟ್ಟು, 'ಸಾಹಿತ್ಯಕ್ಕಿಂತ ಬದುಕು ದೊಡ್ಡದು. ಬಾನು ಮುಷ್ತಾಕ್ ಅವರ ಬದುಕಿನ ಹೋರಾಟ ಹುಟ್ಟಿನಿಂದ ಪ್ರಾರಂಭವಾಗಿದೆ. ಅವರಂತೆ ಸಾಹಿತ್ಯ ಸೃಷ್ಟಿಸಲು ಅಂತಹ ಬದುಕನ್ನು ಜೀವಿಸಬೇಕು. ಮುಸ್ಲಿಂ ಮಹಿಳಾ ಲೋಕದಲ್ಲಿ ಮೌನ ಕ್ರಾಂತಿ ಆಗುತ್ತಿದ್ದು, ಹೆಣ್ಣು ಮಕ್ಕಳನ್ನು ಓದಿಸಲಾಗುತ್ತಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನುಂ, ಕಾರ್ಯದರ್ಶಿ ಸಹನಾ, ಪ್ರೆಸ್‌ಕ್ಲಬ್ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಐಆರ್‌ಸಿಟಿಸಿ: 2.5 ಕೋಟಿ ಶಂಕಿತರ ಐ.ಡಿಗಳ ನಿಷ್ಕ್ರಿಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಐಆರ್‌ಸಿಟಿಸಿ ಟಿಕೆಟ್ ಬುಕಿಂಗ್ ಪೋರ್ಟಲ್‌ನಲ್ಲಿ ಅನಧಿಕೃತವಾಗಿ ಟಿಕೆಟ್‌ಗಳನ್ನು ಕಾಯ್ದಿರಿಸುತ್ತಿದ್ದ 2.5 ಕೋಟಿಗೂ ಹೆಚ್ಚು ಶಂಕಿತ ಬಳಕೆದಾರರ ಐ.ಡಿಗಳನ್ನು ಕೃತಕ ಬುದ್ಧಿಮತ್ತೆ (ಎಐ) ಚಾಲಿತ ವ್ಯವಸ್ಥೆಯು ನಿಷ್ಕ್ರಿಯಗೊಳಿಸಿದೆ ಎಂದು ಭಾರತೀಯ ರೈಲ್ವೆ ಬುಧವಾರ ತಿಳಿಸಿದೆ.

ಕೋವಿಡ್: ಮೃತರ ಸಂಖ್ಯೆ 6ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ಮೃತಪಟ್ಟವರಲ್ಲಿ ಇಬ್ಬರು ಕೋವಿಡ್ ಪೀಡಿತರಾಗಿದ್ದರು ಎನ್ನುವುದು ದೃಢಪಟ್ಟಿದೆ. ಇದರಿಂದಾಗಿ ಈ ವರ್ಷ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ಉಡುಪಿಯಲ್ಲಿ 65 ವರ್ಷದ ವ್ಯಕ್ತಿ ಅನಾರೋಗ್ಯ ಸಂಬಂಧ ಮೇ 30ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಇದೇ 2ರಂದು ಮೃತಪಟ್ಟಿದ್ದಾರೆ. ಬೆಂಗಳೂರಿನ 42 ವರ್ಷದ ವ್ಯಕ್ತಿ ಮೇ 31ರಂದು ಮೃತಪಟ್ಟಿದ್ದರು.



ಸುಭಾಷಿತ

ದ್ವೇಷವನ್ನು ನಾಶಪಡಿಸುವ ಶಕ್ತಿ ಇರುವುದು ಸ್ನೇಹಕ್ಕೆ ಮಾತ್ರ. ಆದ್ದರಿಂದ ಸ್ನೇಹ ಇದ್ದೆಡೆ ಶಾಂತಿ ಮತ್ತು ನೆಮ್ಮದಿ ಸಾಧ್ಯ. –ಗೌತಮ ಬುದ್ಧ

ಆರ್‌ಸಿಬಿ ತಂಡಕ್ಕೆ ಸನ್ಮಾನ: ಕಾಲ್ತುಳಿತದ ಸಂಪೂರ್ಣ ಹೊಣೆ ಸರ್ಕಾರ ಹೊರಬೇಕು

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನ 18ನೇ ಆವೃತ್ತಿಯ ಫೈನಲ್‌ನಲ್ಲಿ ಗೆಲುವು ಕಂಡ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' (ಆರ್‌ಸಿಬಿ) ತಂಡವನ್ನು ಸನ್ಮಾನಿಸುವ ಸಂಭ್ರಮಾಚರಣೆಯ ಕಾರ್ಯಕ್ರಮವು ಸೂತಕವಾಗಿ ಪರಿವರ್ತನೆಯಾಗಿದ್ದು ದುರದೃಷ್ಟಕರ. ಬೆಂಗಳೂರಿನ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಭಿಮಾನಿಗಳು ಎಲ್ಲ ದಿಕ್ಕುಗಳಿಂದಲೂ ಈ ಎರಡು ಸ್ಥಳಗಳತ್ತ ನುಗ್ಗಿದರು. ಇಡೀ ಪ್ರದೇಶವು ಜನಸಾಗರವಾಗಿ ಪರಿವರ್ತನೆಯಾಗಿತ್ತು. ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಲಿನ ಹಲವು ರಸ್ತೆಗಳನ್ನು ಮುಚ್ಚಲಾಗಿತ್ತು. ಸಂಚಾರಕ್ಕೆ ಮುಕ್ತವಾಗಿದ್ದ ರಸ್ತೆಗಳಲ್ಲಿ ವಾಹನಗಳ ದಟ್ಟಣೆಯಿಂದಾಗಿ ಸಂಚಾರ ಅಕ್ಷರಶಃ ಸ್ಥಗಿತವಾಗಿತ್ತು. ಲಕ್ಷಾಂತರ ಜನರು ಸೇರಿದ್ದರಿಂದಾಗಿ ಉಂಟಾದ ನೂಕುನುಗ್ಗಲಿನಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಉಸಿರುಗಟ್ಟಿ ಕೆಲವರು ಸತ್ತಿದ್ದರೆ ಕೆಲವರು ಕಾಲ್ತುಳಿತಕ್ಕೆ ಸಿಲುಕಿ ಸತ್ತಿದ್ದಾರೆ. 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ ಮಕ್ಕಳು, ಯುವಕ, ಯುವತಿಯರು ಇದ್ದಾರೆ. ಕರ್ನಾಟಕ ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಮಟ್ಟಿಗೆ ಇದು ಇತ್ತೀಚಿನ ವರ್ಷಗಳಲ್ಲಿ ಕಂಡು ಕೇಳರಿಯದಂತಹ ದುರಂತ. ಈ ಪ್ರದೇಶದ ಸುತ್ತಮುತ್ತ ಸಂಚರಿಸುವ ಮೆಟ್ರೊ ರೈಲಿನಲ್ಲಿ ಕೂಡ ವಿಪರೀತ ಜನದಟ್ಟಣೆಯಿಂದಾಗಿ ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗಿತ್ತು. ಕೆಲವು ನಿಲ್ದಾಣಗಳನ್ನು ಕೆಲಹೊತ್ತು ಬಂದ್ ಮಾಡಿ ದಟ್ಟಣೆ ನಿಯಂತ್ರಿಸಲು ಪ್ರಯತ್ನಿಸಿದರೂ ಅದಕ್ಕೆ ಹೆಚ್ಚಿನ ಫಲ ಸಿಗಲಿಲ್ಲ. ಹಿಂದಿರುಗಲು ಬಯಸಿದ ಜನರಿಗೂ ಯಾವುದೇ ವಾಹನ ವ್ಯವಸ್ಥೆ ಇಲ್ಲದೆ ಸಂಕಟಪಡುವಂತಾಯಿತು. ಕರ್ನಾಟಕ ಸರ್ಕಾರ ಮತ್ತು ಆರ್‌ಸಿಬಿ ತಂಡದ ಮಾಲೀಕರು ಮತ್ತು ನಿರ್ವಾಹಕರ ಕಡೆಯಿಂದ ಆಗಿರುವ ಹಲವು ಲೋಪಗಳು ಈ ದುರಂತಕ್ಕೆ ಕಾರಣ. ಗುಪ್ತಚರ ವ್ಯವಸ್ಥೆ ಮತ್ತು ಪೊಲೀಸ್ ಇಲಾಖೆಯ ವೈಫಲ್ಯ ಎದ್ದು ಕಾಣುವಂತಿದೆ. ವಿಧಾನಸೌಧದಿಂದ ಕ್ರೀಡಾಂಗಣದವರೆಗೆ ತೆರೆದ ಬಸ್‌ನಲ್ಲಿ ಆಟಗಾರರ ಮೆರವಣಿಗೆ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸುವ ಮೂಲಕ ಪೊಲೀಸರು ಒಂದಷ್ಟು ಎಚ್ಚರಿಕೆಯನ್ನು ತೋರಿದ್ದಾರೆ. ಮೆರವಣಿಗೆಗೆ ಅನುಮತಿ ನಿರಾಕರಿಸಿದ್ದಕ್ಕಾಗಿ ಸರ್ಕಾರವನ್ನು ಬಿಜೆಪಿ, ಜೆಡಿಎಸ್ 'ಎಕ್ಸ್' ಮೂಲಕ ಟೀಕಿಸಿದ್ದವು ಎಂಬುದರಿಂದ ಸಮೂಹ ಸನ್ನಿಯ ಲಾಭ ಪಡೆಯುವ ಹವಣಿಕೆಯನ್ನು ಸರ್ಕಾರದ ಜೊತೆಗೆ ವಿರೋಧ ಪಕ್ಷಗಳೂ ಮಾಡಿದ್ದವು ಎಂಬುದು ಮನದಟ್ಟಾಗುತ್ತದೆ.



ಕರ್ನಾಟಕ ಸರ್ಕಾರ ಮತ್ತು ಆರ್‌ಸಿಬಿ ತಂಡದ ಮಾಲೀಕರು ಮತ್ತು ನಿರ್ವಾಹಕರ ಕಡೆಯಿಂದ ಆಗಿರುವ ಹಲವು ಲೋಪಗಳು ಈ ದುರಂತಕ್ಕೆ ಕಾರಣ

ಅಹಮದಾಬಾದ್‌ನಲ್ಲಿ ಮಂಗಳವಾರ ರಾತ್ರಿಯಷ್ಟೇ ಐಪಿಎಲ್ ಫೈನಲ್ ಪಂದ್ಯ ನಡೆದಿತ್ತು. ಪಂದ್ಯ ಗೆದ್ದಾಗಲೇ ರಾಜ್ಯದ ವಿವಿಧೆಡೆ ಅನಿಯಂತ್ರಿತ ರೀತಿಯಲ್ಲಿ ಸಂಭ್ರಮಾಚರಣೆ ನಡೆದಿತ್ತು. ಸಂಭ್ರಮಾಚರಣೆಯಲ್ಲಿ ಕುಸಿದುಬಿದ್ದು ಕೆಲವೆಡೆ ಒಂದಿಬ್ಬರು ಮೃತಪಟ್ಟ ವರದಿಗಳಿವೆ. ಬೈಕ್‌ನಲ್ಲಿ ಸವಾರಿ ಮಾಡುತ್ತಾ ಸಂಭ್ರಮಿಸಿದ ಒಬ್ಬರು ಅಪಘಾತವಾಗಿ ಶಿವಮೊಗ್ಗದಲ್ಲಿ ಸತ್ತಿದ್ದಾರೆ. ಬೆಂಗಳೂರು ನಗರದಲ್ಲಂತೂ ಬೆಳಗಿನ ಜಾವದವರೆಗೂ ಕೆಲವರು ಬೀದಿಗಳಲ್ಲಿ ಅಡ್ಡಾಡುತ್ತಾ ಕಾನೂನು ಸುವ್ಯವಸ್ಥೆ ಸಮಸ್ಯೆ ಸೃಷ್ಟಿಸಿದರು. ಹಲವೆಡೆ ಲಘು ಲಾಠಿ ಪ್ರಹಾರ ಮಾಡಿ ಪೊಲೀಸರು ಜನರನ್ನು ಚದುರಿಸಿದ್ದರು. ಇಂತಹ ಸನ್ನಿವೇಶದಲ್ಲಿ, ಬುಧವಾರ ಬೆಳಿಗ್ಗೆಯೇ ಎರಡು ಕಡೆ ಸನ್ಮಾನ ಆಯೋಜಿಸಿದ ಘೋಷಣೆ ಮಾಡಲಾಯಿತು. ಜನರನ್ನು ನಿಯಂತ್ರಿಸಲು ಹಾಗೂ ವಾಹನ ನಿಲುಗಡೆಗೆ ಯಾವುದೇ ವ್ಯವಸ್ಥೆ ಇರಲಿಲ್ಲ. ಜನರ ಅಭಿಮಾನದ ಲಾಭ ಪಡೆಯುವ ತರಾತುರಿ ಎದ್ದು ಕಾಣುತ್ತಿತ್ತು. ಅಭಿಮಾನವು ಸಮೂಹಸನ್ನಿಯಾಗಿ ಮಾರ್ಪಡುವಂತಾಯಿತು. ಮಂಗಳವಾರ ರಾತ್ರಿಯಿಡೀ ಜನರನ್ನು ನಿಯಂತ್ರಿಸಿ ಹೈರಾಣಾಗಿದ್ದ ಪೊಲೀಸರು ಬುಧವಾರ ಸೇರಿದ್ದ ಅಪಾರ ಜನಸ್ತೋಮದ ಎದುರು ಮೂಕಪ್ರೇಕ್ಷಕರಂತೆ ನಿಲ್ಲಬೇಕಾಯಿತು. ಈ ಎಲ್ಲದರ ಹೊಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಐಪಿಎಲ್ ತಂಡದ ಬಾವುಟ ಬೀಸುತ್ತಾ ಅತ್ಯುತ್ಸಾಹ ತೋರಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ಅವರೇ ಹೊರಬೇಕಾಗುತ್ತದೆ. ಬ್ರಿಟನ್‌ನ ಮದ್ಯ ತಯಾರಿಕಾ ಕಂಪನಿ ಡಿಯಾಜಿಯೊ ಆರ್‌ಸಿಬಿ ತಂಡದ ಮಾಲೀಕತ್ವ ಹೊಂದಿದೆ. ಆ ಕಂಪನಿಯ ಭಾರತದಲ್ಲಿರುವ ಘಟಕವಾದ ಯುನೈಟೆಡ್ ಸ್ಪಿರಿಟ್ಸ್, ತಂಡದ ನಿರ್ವಹಣೆ ನೋಡಿಕೊಳ್ಳುತ್ತಿದೆ. ಐಪಿಎಲ್ ಎಂಬುದು ಸಂಪೂರ್ಣವಾಗಿ ಮನರಂಜನೆ ಮತ್ತು ವಾಣಿಜ್ಯ ಉದ್ದೇಶವನ್ನು ಹೊಂದಿದೆ. ಹಾಗಿದ್ದರೂ ತಂಡದ ಜೊತೆಗೆ ಜನ ಹೊಂದಿರುವ ಅಭಿಮಾನಕ್ಕೆ ಸ್ಪಂದಿಸಿ ಸರ್ಕಾರವು ಸನ್ಮಾನ ಕಾರ್ಯಕ್ರಮ ಆಯೋಜಿಸಿದ್ದು ಎಷ್ಟು ಸರಿ ಎಂಬ ಪ್ರಶ್ನೆ ಇದೆ. ವಿಧಾನಸೌಧದಲ್ಲಿ ಸನ್ಮಾನ ಕಾರ್ಯಕ್ರಮ ನಡೆಯುತ್ತಿದ್ದಾಗಲೇ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಭಾಗದಲ್ಲಿ ಕಾಲ್ತುಳಿತ ನಡೆದು ಕೆಲವರು ಮೃತಪಟ್ಟ ಸುದ್ದಿ ಬಂದಿತ್ತು. ಹಾಗಿದ್ದರೂ ರಾಜ್ಯಪಾಲರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವ ಮತ್ತು ಇತರ ಸಚಿವರು ಹಾಜರಿದ್ದು ಕಾರ್ಯಕ್ರಮವನ್ನು ಮುಂದುವರಿಸಿದ್ದಾರೆ. ಇದು ಸಂವೇದನೆಯೇ ಇಲ್ಲದ ನಡವಳಿಕೆ. 11 ಮಂದಿ ಸತ್ತಿದ್ದಾರೆ ಎಂಬುದು ಗೊತ್ತಾದ ಬಳಿಕವೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್ಮಾನ ಕಾರ್ಯಕ್ರಮ ನಡೆಯಿತು. ಜನರ ಜೀವ ಬಲಿ ಪಡೆದುದರ ಹೊಣೆ ಹೊರಬೇಕಾಗಿದ್ದ ಆರ್‌ಸಿಬಿ ತಂಡದ ಮಾಲೀಕರು ಸನ್ಮಾನ ಮಾಡಿ ಸಂಭ್ರಮಿಸಿದ್ದು ಅಕ್ಷಮ್ಯ. ಈ ಎಲ್ಲದಕ್ಕೂ ಉತ್ತರದಾಯಿತ್ವ ನಿರ್ಣಯವಾಗಲೇಬೇಕು.

ದಿನದ ಟ್ವೀಟ್

ಸುಡಾನ್‌ನಲ್ಲಿ ಕ್ಷಾಮ...



ಸುಡಾನ್‌ನಲ್ಲಿ ಭಯಾನಕ ಕ್ಷಾಮ ಮುಂದುವರಿದಿದೆ. ಇದರಿಂದ ಚಿಕ್ಕ ಮಕ್ಕಳು ತತ್ತರಿಸಿದ್ದಾರೆ. ಸಂತ್ರಸ್ತರಿಗೆ ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ ಮತ್ತು ಯೂನಿಸೆಫ್ ಸಹಾಯಹಸ್ತ ಚಾಚಿವೆ. ಆದರೆ, ನೆರವು ಸಿಬ್ಬಂದಿ ಮೇಲೆ ನಡೆದ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಇದು ಅಮಾನವೀಯ ವರ್ತನೆ. ನೆರವು ಸಿಬ್ಬಂದಿಗೆ ರಕ್ಷಣೆ ಬೇಕಿದೆ...

ಟೆಡ್ರೊಸ್ ಅಧಾನೊಮ್ ಗೆಬ್ರೆಯೆಸಸ್, ಡಬ್ಲ್ಯುಎಚ್‌ಒ ಮಹಾನಿರ್ದೇಶಕ

ಕಿಡಿನುಡಿ



'ಸ್ಮಾರ್ಟ್ ಮೀಟರ್ ವಿಚಾರದಲ್ಲಿ ಕೆಲವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಹೋಗಿದ್ದು ಒಳ್ಳೆಯದೇ ಆಯಿತು. ನಾವು ನ್ಯಾಯಾಲಯದಲ್ಲಿ ಉತ್ತರಿಸುತ್ತೇವೆ. ಇನ್ನೂ ಯಾರ್‍ಯಾರು, ಎಲ್ಲೆಲ್ಲಿಗೆ ದೂರು ಕೊಡುತ್ತಾರೋ ಕೊಡಲಿ. ಎಲ್ಲವನ್ನೂ ಎದುರಿಸುವ ಶಕ್ತಿ ನಮಗಿದೆ. ಸ್ಮಾರ್ಟ್ ಮೀಟರ್ ವಿಚಾರದಲ್ಲಿ ಯಾವ ಕಿಕ್‌ಬ್ಯಾಕ್ ಕೂಡ ನಡೆದಿಲ್ಲ.

ಕೆ.ಜೆ.ಜಾರ್ಜ್, ಇಂಧನ ಸಚಿವ

25 ವರ್ಷಗಳ ಹಿಂದೆ — ಸೋಮವಾರ, 5-6-2000

• ಸರಕು ಉಗ್ರಾಣಕ್ಕೆ ಬೆಂಕಿ ಆಮದು ವಸ್ತುಗಳ ನಾಶ

ಬೆಂಗಳೂರು, ಜೂನ್ 4– ನಗರ ವಿಮಾನ ನಿಲ್ದಾಣದ ಬಳಿ ಇರುವ ಏರ್ ಕಾರ್ಗೋ ಸಂಕೀರ್ಣದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ (ಎಂಎಸ್‌ಐಎಲ್) ಸರಕು ಉಗ್ರಾಣದಲ್ಲಿ ಇಂದು ಮಧ್ಯಾಹ್ನ ಸಂಭವಿಸಿದ ಬೆಂಕಿ ಆಕಸ್ಮಿಕದಲ್ಲಿ ಕೋಟಿ ರೂಪಾಯಿಗೂ ಹೆಚ್ಚು ಬೆಲೆ ಬಾಳುವ ಕಂಪ್ಯೂಟರ್, ಎಲೆಕ್ಟ್ರಾನಿಕ್ ಉಪಕರಣಗಳು ಸೇರಿದಂತೆ ವಿವಿಧ ಬಗೆಯ ಗೃಹೋಪಯೋಗಿ ವಸ್ತುಗಳು ಸುಟ್ಟು ಭಸ್ಮವಾಗಿವೆ.

ಬೆಂಕಿ ಆಕಸ್ಮಿಕದಿಂದ ಯಾವುದೇ ಜೀವ ಹಾನಿಯಾಗಿಲ್ಲ.

ಈ ಬೆಂಕಿ ಆಕಸ್ಮಿಕಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಕೆಲವರು ಇದು ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಸಂಭವಿಸಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ನಿಖರ ಕಾರಣಕ್ಕಾಗಿ ಪೊಲೀಸರು ತನಿಖೆ ನಡೆಸುತ್ತಿ ದ್ದಾರೆ.

• ಮೋಸದಾಟ: ಸಿಬಿಐನಿಂದ 'ವಿಡಿಯೊ' ವೀಕ್ಷಣೆ

ನವದೆಹಲಿ, ಜೂನ್ 4– ಮೋಸದಾಟಕ್ಕೆ ಸಂಬಂಧಿಸಿದಂತೆ ಮಾಜಿ ಕ್ರಿಕೆಟಿಗ ಮನೋಜ್ ಪ್ರಭಾಕರ್ ಒಪ್ಪಿಸಿದ 'ವಿಡಿಯೊ ಕ್ಯಾಸೆಟ್'ಗಳ ವೀಕ್ಷಣೆಯನ್ನು ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಇಂದು ಪ್ರಾರಂಭಿಸಿತು. 'ಅಪರಾಧ ವಿಭಾಗದ ಅಧಿಕಾರಿಗಳು ನಿನ್ನೆ ಮನೋಜ್ ಪ್ರಭಾಕರ್ ಸಲ್ಲಿಸಿದ ರಹಸ್ಯ ವಿಡಿಯೊ ಟೇಪ್‌ಗಳನ್ನು ವೀಕ್ಷಿಸುತ್ತಿದ್ದಾರೆ.

50 ವರ್ಷಗಳ ಹಿಂದೆ — ಗುರುವಾರ, 5-6-1975

• ಪೊಲೀಸರ ಜೊತೆಗೆ ಘರ್ಷಣೆ: 17 ಮಂದಿ ನಕ್ಸಲೀಯರ ಸಾವು

ಪಟನಾ, ಜೂನ್ 4– ಫರ್ವಾನ ಗ್ರಾಮದಲ್ಲಿ ನಕ್ಸಲೀಯರು ಮತ್ತು ಪೊಲೀಸರ ನಡುವೆ ನಡೆದ ಭೀಕರ ಹೋರಾಟದಲ್ಲಿ ಒಟ್ಟು 17 ನಕ್ಸಲೀಯರು ಸತ್ತಿದ್ದಾರೆ. ಹೋರಾಟದಲ್ಲಿ ಇಬ್ಬರು ನಕ್ಸಲೀಯರನ್ನು ಕೈಸೆರೆ ಹಿಡಿಯಲಾಗಿದೆ ಎಂದು ಬಿಹಾರದ ಮುಖ್ಯಮಂತ್ರಿ ಜಗನ್ನಾಥ ಮಿಶ್ರಾ ಅವರು ಇಂದು ಇಲ್ಲಿ ತಿಳಿಸಿದ್ದಾರೆ.

ಪಟನಾ ಜಿಲ್ಲೆಯ ಮಸೌರಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಟ್ಟ ಫರ್ವಾನ ಗ್ರಾಮದಲ್ಲಿ ಮಧ್ಯರಾತ್ರಿವರೆಗೂ ಹೋರಾಟ ನಡೆಯಿತು ಎಂದು ಅವರು ಹೇಳಿದರು.

ಈಗ ಆ ಗ್ರಾಮದಲ್ಲಿ ಪರಿಸ್ಥಿತಿ ಹತೋಟಿಯಲ್ಲಿದೆ ಎಂದೂ ಮಿಶ್ರಾ ನುಡಿದರು.

• ಕಾಫಿ ತೋಟಗಳಲ್ಲಿ ಕೀಟ ಹಾವಳಿ ತಡೆಯಲು ಕ್ರಮ

ಬೆಂಗಳೂರು, ಜೂನ್ 4– ವೈನಾಡಿನ ಕಾಫಿ ಎಸ್ಟೇಟುಗಳಲ್ಲಿ 'ಮಿಲಿ ಬಗ್' ಕೀಟಗಳ ಹಾವಳಿ ಹೆಚ್ಚಾಗಿರುವುದರಿಂದ ಅದನ್ನು ತಡೆಗಟ್ಟಲು ಸೂಕ್ತ ಕೀಟನಾಶಕಗಳನ್ನು ಬಳಸಲು ಕಾಫಿ ಮಂಡಳಿಯು ಪ್ಲಾಂಟರುಗಳಿಗೆ ಸಲಹೆ ಮಾಡಿದೆ. ಕಾಫಿ ಮಂಡಳಿ ಸಂಶೋಧನಾ ಸಂಸ್ಥೆಯ ಉನ್ನತ ಮಟ್ಟದ ಸಂಶೋಧನಾ ತಂಡವೊಂದು ಇತ್ತೀಚೆಗೆ ಎಸ್ಟೇಟುಗಳಿಗೆ ಭೇಟಿ ನೀಡಿ ಈ ಬಗ್ಗೆ ಪರಿಶೀಲನೆ ನಡೆಸಿತು.

ಹನಿ ಹನಿ ಕಾಳಜಿಗಳು ಸೇರಿ ಪರಿಸರ ಸಂರಕ್ಷಣೆಯ ಹಳ್ಳ ಹರಿಯಬಹುದು

ಪರಿಸರ ಸಂರಕ್ಷಣೆ: ನಾಗರಿಕರ ಹೊಣೆ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

'ವಿಶ್ವ ಪರಿಸರ ದಿನಾಚರಣೆ'ಯನ್ನು (ಜೂನ್ 5) ವಿಶ್ವಮಟ್ಟದಲ್ಲಿ ವ್ಯಾಪಕವಾಗಿ ಆಚರಿಸಲಾಗುತ್ತದೆ. ಇದೊಂದು ರೀತಿಯಲ್ಲಿ ಸಾಂಪ್ರದಾಯಿಕವಾಗಿ ಪರಿಸರ ಸಂರಕ್ಷಣೆಯ ಜಪ ಪಠಿಸುವ ಸಂದರ್ಭ! ವಿಶ್ವ ಪರಿಸರ ದಿನಾಚರಣೆಯ ಜಾಗತಿಕ ಘೋಷಣೆ ಹೊರಹೊಮ್ಮಿದ್ದು 1972ರಲ್ಲಿ. ಅಂದರೆ, ವಿಶ್ವಸಂಸ್ಥೆಯ ನೇತೃತ್ವದಲ್ಲಿ ಈ ದಿನಾಚರಣೆ ಆರಂಭವಾಗಿ ಐವತ್ತಮೂರು ವರ್ಷಗಳಷ್ಟು ಸುದೀರ್ಘ ಸಮಯ ಗತಿಸಿದೆ. ಈ ಸಂದರ್ಭದಲ್ಲಿ ಸರ್ಕಾರಗಳು, ಸಂಘ– ಸಂಸ್ಥೆಗಳು, ಪರಿಸರ ಪ್ರೇಮಿಗಳು ರಾಶಿ ರಾಶಿ ಕಾರ್ಯಕ್ರಮ ಹಾಕಿಕೊಂಡಿದ್ದನ್ನು ಕಂಡಿದ್ದೇವೆ. ಎಲ್ಲರೂ ಘೋಷಿಸಿದ, ಆಶಿಸಿದ ಉತ್ಕಟ ಪರಿಸರಸ್ನೇಹಿ ನುಡಿಮುತ್ತುಗಳಲ್ಲಿ ಎಷ್ಟು ಕಾರ್ಯರೂಪಕ್ಕೆ ಬಂದಿವೆ ಎಂಬ ಸಂದೇಹಕ್ಕೆ ಖಚಿತ ಉತ್ತರವಿಲ್ಲ. ಆದರೆ, ಆ ದಿಕ್ಕಿನ ಚಿಂತನೆಗೆ ಉತ್ತೇಜನ ಸಿಕ್ಕಿರುವುದಂತೂ ಸತ್ಯ.

ಪರಿಸರದ ಪ್ರಸಕ್ತ ಶೋಚನೀಯ ಪರಿಸ್ಥಿತಿಯನ್ನು ಪರಿಗಣಿಸಿದರೆ ಜೂನ್ 5 ಅನ್ನು 'ಪರಿಸರ ದಿನ'ವಾಗಿ 'ಆಚರಿಸುವ' ಕ್ರಮವೇ ಅಸಂಬದ್ಧವಾಗಿ ಕಾಣಿಸುತ್ತದೆ. ಪರಿಸರದ ವಿಷಯದಲ್ಲಿ ಮಾನವ ಸಂಕುಲ ಸಂಭ್ರಮಾಚರಣೆಗೆ ಇಳಿಯಲು ಕಾರಣವೇ ಕಾಣಿಸುವುದಿಲ್ಲ; ಮನುಷ್ಯನ ಅಮಾನುಷ ದಾಳಿಗೆ ಸತತ ಬಲಿಯಾಗುತ್ತಾ ಸಂತ್ರಸ್ತ ಸ್ಥಿತಿ ತಲುಪಿರುವ ನಿಸರ್ಗಕ್ಕೆ ಸಂತಾಪ ಸೂಚಿಸುವುದೇ ಸೂಕ್ತ ಎನ್ನಿಸುತ್ತದೆ.

ಈ ಬಾರಿಯ 'ವಿಶ್ವ ಪರಿಸರ ದಿನಾಚರಣೆ'ಗೆ ವಿಶೇಷ ಮಹತ್ವವಿದೆ. ರಿಪಬ್ಲಿಕ್ ಆಫ್ ಕೊರಿಯಾ ಈ ವರ್ಷದ ಪರಿಸರ ದಿನಾಚರಣೆಯ ಆತಿಥೇಯ ರಾಷ್ಟ್ರವಾಗಿದೆ. 'ಪ್ಲಾಸ್ಟಿಕ್ ಮಾಲಿನ್ಯ ಮಣಿಸಿ' ಎಂಬುದು ವಿಶ್ವ ಪರಿಸರ ದಿನಾಚರಣೆಯ ಘೋಷವಾಕ್ಯ. ಜಗತ್ತನ್ನು ಸುತ್ತಲಿರುವ ಈ ಸದಾಶಯದ ದನಿ ಎಷ್ಟು ಜನರ ಮನಸ್ಸು ಮುಟ್ಟುವುದೆಂಬುದನ್ನು ದುಗುಡದಿಂದ ಕಾದು ನೋಡಬೇಕಿದೆ. ಏಕೆಂದರೆ, ಪ್ಲಾಸ್ಟಿಕ್‌ಮಾರಿ ನಮ್ಮ ಬದುಕನ್ನು ಆವರಿಸಿಕೊಂಡಿರುವ ರೀತಿ, ಹರಹು, ವೇಗ ಗಾಬರಿ ಹುಟ್ಟಿಸುತ್ತದೆ.

ಕಳೆದ ಒಂದು ದಶಕದಲ್ಲಿ ನಾವು ಬಳಸಿ ಬಿಸಾಕಿದ ಪ್ಲಾಸ್ಟಿಕ್ ಪ್ರಮಾಣ ಹಿಂದಿನ ಒಂದು ಶತಮಾನದ ಒಟ್ಟು ಬಳಕೆಯ ಮೊತ್ತಕ್ಕೆ ಸಮ. ನಾವು ಬಳಸುವ ಅರ್ಧದಷ್ಟು ಪ್ಲಾಸ್ಟಿಕ್ ಪದಾರ್ಥ ಒಮ್ಮೆ ಬಳಸಿ ಎಸೆಯುವಂತಹದು. ನಾವು ಪ್ರತಿ ನಿಮಿಷಕ್ಕೆ ಹತ್ತು ಲಕ್ಷ ಪ್ಲಾಸ್ಟಿಕ್ ಬಾಟಲಿಗಳನ್ನು ಕೊಳ್ಳುತ್ತಿದ್ದೇವೆ. ಒಂದು ಸಮೀಕ್ಷೆ ಪ್ರಕಾರ, 2050ರ ವೇಳೆಗೆ ಸಮುದ್ರಗಳಲ್ಲಿ ಮೀನುಗಳಿಗಿಂತ ಹೆಚ್ಚು ಪ್ಲಾಸ್ಟಿಕ್ ಸೇರಿರುತ್ತದೆ. ಅನಾಹುತದ ಅಗಾಧವು ಅಂದಾಜಿಗೂ ನಿಲುಕದಷ್ಟು ದೊಡ್ಡದಾಗಿದೆ.

ಪ್ಲಾಸ್ಟಿಕ್‌ನಿಂದ ಉಂಟಾಗುವ ಅನಾಹುತವನ್ನು ಎದುರಿಸಲು ಒಂದು ಸರ್ಕಾರವಾಗಿ, ಒಂದು ಸಮಾಜವಾಗಿ, ಪರಿಸರಪ್ರೇಮಿ ಸಂಘಟನೆಗಳಾಗಿ, ವ್ಯಕ್ತಿಗಳಾಗಿ ನಾವು ಎಷ್ಟರ ಮಟ್ಟಿಗೆ ಸಿದ್ಧರಾಗಿದ್ದೇವೆ? ಈ ದಿಸೆಯಲ್ಲಿ ಮನಸ್ಸನ್ನಾದರೂ ಹುರಿಗೊಳಿಸಿದ್ದೇವೆಯೇ? ಈ ಪ್ರಶ್ನೆಗಳಿಗೆ ಉತ್ತರವಾಗಿ ದೊರೆಯುವುದು 'ಥಮ್ಸ್ ಡೌನ್' ಇಮೋಜಿ ಮಾತ್ರ. ಏನೆಲ್ಲಾ ಎಷ್ಟೆಲ್ಲಾ ಹೆಮ್ಮೆಪಡುವ ನಮ್ಮ ಪರಂಪರೆಯಲ್ಲಿ ಸಾಮುದಾಯಿಕ ಬದುಕಿನ ಅಡಿಪಾಯವಾದ 'ನಾಗರಿಕ ಪ್ರಜ್ಞೆ' ಗೈರಾಗಿರುವುದರಲ್ಲಿ ಸಮಸ್ಯೆಯ ಮೂಲವಿದೆ.

ಪರಿಸರ ಕಾನೂನುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆ ಬಗ್ಗೆ ನಾಗರಿಕರಲ್ಲಿ ಅರಿವಿನ ಕೊರತೆ; ಪರಿಸರ ಹಾನಿ ಬಗೆಗಿನ ನಾಗರಿಕರ ದೂರುಗಳಿಗೆ ಆಡಳಿತಶಾಹಿಯ ನಿರ್ಲಕ್ಷ್ಯ ಅಥವಾ ನಿಧಾನಶಾಹಿ ಪ್ರತಿಕ್ರಿಯೆ; ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರ ತೋರಿಸುವ ಪರಿಸರ ಕಾಳಜಿಯನ್ನು ಮೀರಿದ ರಾಜಕೀಯ ಮತ್ತು ವಾಣಿಜ್ಯ ಹಿತಾಸಕ್ತಿಗಳು ನಿಸರ್ಗವನ್ನು ನಿರ್ನಾಮ ಮಾಡುವ ದಿಕ್ಕಿನಲ್ಲಿ ಅಪಾರ ಕೊಡುಗೆ ನೀಡುತ್ತಿವೆ. ಏಕಬಳಕೆ ಪ್ಲಾಸ್ಟಿಕ್ ಉಂಟು ಮಾಡುವ ಅಪಾಯ ಕುರಿತು ಜನಜಾಗೃತಿಗಾಗಿ ಹೆಣಗುವ ಬದಲು ಅದರ ಉತ್ಪಾದನೆಯನ್ನೇ ನಿಲ್ಲಿಸಲು ಸರ್ಕಾರ ಏಕೆ ಮನಸ್ಸು ಮಾಡುವುದಿಲ್ಲ ಎಂಬ ಸಂದೇಹಕ್ಕೆ ಸಮಜಾಯಿಷಿ ಸಿಗುವ ಸಾಧ್ಯತೆಯಿಲ್ಲ.

ಜೀವವೈವಿಧ್ಯ ತಾಣವಾದ ಪಶ್ಚಿಮ ಘಟ್ಟದಲ್ಲಿ ನಡೆಯುತ್ತಿರುವ 'ಅಭಿವೃದ್ಧಿ ಕಾಮಗಾರಿ'ಗಳ ಹಿನ್ನೆಲೆಯಲ್ಲಿ ಆ ಪ್ರದೇಶದ ಧಾರಣ ಸಾಮರ್ಥ್ಯವನ್ನು ಅಧ್ಯಯನ ಮಾಡಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ವಾಗತಾರ್ಹ ಆದೇಶ ಮಾಡಿದ್ದಾರೆ. ಆದರೆ, ಬಯಲುಸೀಮೆಯ ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಉದ್ಯಮಗಳ ಆರ್ಭಟದ ಹಿನ್ನೆಲೆಯಲ್ಲಿ ಅಲ್ಲಿನ ಪರಿಸರದ ಧಾರಣ ಶಕ್ತಿ ತಿಳಿಯಲು ಸಚಿವರೇಕೋ ಮನಸ್ಸು ಮಾಡಿಲ್ಲ.

ಸರ್ಕಾರದ ನೀತಿಗಳು, ಕಾರ್ಪೊರೇಟ್ ಸಂಸ್ಥೆಗಳ ಜವಾಬ್ದಾರಿ ಹಾಗೂ ಪರಿಸರಪರ ಸಂಘಟನೆಗಳ ಕ್ರಿಯಾಶೀಲತೆಯನ್ನು ಪರಿಸರದ ಅಳಿವು– ಉಳಿವು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಹಾಗೆಂದು, ನಾಗರಿಕರು ತಮ್ಮ ವೈಯಕ್ತಿಕ ನೆಲೆಯಲ್ಲಿ ನಿರ್ವಹಿಸಬೇಕಾದ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರದ ನೀತಿ ನಿರೂಪಣೆ ಹಾಗೂ ಉದ್ಯಮಗಳ ಮಹತ್ವಾಕಾಂಕ್ಷೆ ಬಗ್ಗೆ ಎಚ್ಚರದಿಂದಿದ್ದು, ಪರಿಸರ ಕಾಳಜಿಯ ಸಂಘಟನೆಗಳೊಂದಿಗೆ ಕೈಜೋಡಿಸುವುದು ನಾಗರಿಕರ ಆದ್ಯ ಕರ್ತವ್ಯ. ದೈನಂದಿನ ಕ್ರಿಯೆಯಲ್ಲಿ ನಾಗರಿಕರು ಎಷ್ಟು ಪರಿಸರಸ್ನೇಹಿ ಆಗಿದ್ದಾರೆ ಎಂಬುದು ಕೂಡ ಒಂದು ಸಮಾಜದ ಸ್ವಾಸ್ಥ್ಯ ಮತ್ತು ಭವಿಷ್ಯವನ್ನು ನಿರ್ಧರಿಸುತ್ತದೆ.



ಈ ವರ್ಷದ ವಿಶ್ವ ಪರಿಸರ ದಿನಾಚರಣೆಯ ಘೋಷಣೆಯಂತೆ ಪ್ಲಾಸ್ಟಿಕ್ ಹಾವಳಿಯನ್ನು ಸೋಲಿಸಲು ಜವಾಬ್ದಾರಿಯುತ ನಾಗರಿಕರಾಗಿ ದೈನಂದಿನ ಚಟುವಟಿಕೆಗಳಲ್ಲಿ ನಾವೇನು ಮಾಡಬಹುದು? ಜನಸಾಮಾನ್ಯರ ನಿತ್ಯ ಜೀವನದ ಹನಿ ಹನಿ ಕಾಳಜಿಗಳು ಸೇರಿದರೂ ಪರಿಸರ ಸಂರಕ್ಷಣೆಯ ಹಳ್ಳ ಹರಿಯಲು ಸಾಧ್ಯವಿದೆ. ಅನಿವಾರ್ಯ ಎನ್ನಿಸದ ಹೊರತು ಪ್ಲಾಸ್ಟಿಕ್ ಬಳಸದಿದ್ದರೆ ಸಾಕು, ಕನಿಷ್ಠ ಅರ್ಧದಷ್ಟು ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಿಸುವುದು ಅಸಂಭವವಲ್ಲ.

ಅಂಗಡಿಗೆ ಹೋಗುವಾಗ ಬಟ್ಟೆಯ ಒಂದು ಕೈಚೀಲ, ಮದುವೆ ಮುಂತಾದ ಸಭೆ, ಸಮಾರಂಭಗಳಿಗೆ ಹೋಗುವಾಗ ಕುಡಿಯುವ ನೀರಿನ ಸ್ಟೀಲ್ ಅಥವಾ ತಾಮ್ರದ ಬಾಟಲು, ಪ್ರಯಾಣದಲ್ಲಿ ಪುನರ್ಬಳಕೆಯ ಬಾಟಲು ತೆಗೆದುಕೊಂಡು ಹೋಗುವುದು ಯಾರಿಗೂ ಹೊರೆಯಾಗಲಿಕ್ಕಿಲ್ಲ. ಹಾಲಿನ ಪ್ಯಾಕೆಟ್ ಮುಂತಾದ ಪ್ಲಾಸ್ಟಿಕ್ ಕವರ್‌ಗಳನ್ನು ಹೇಗೆಂದರೆ ಹಾಗೆ ಕತ್ತರಿಸಿ ಎಸೆಯದೇ, ಕತ್ತರಿಸಿದ ತುಂಡನ್ನು ಖಾಲಿ ಕವರ್ ಒಳಗೆಯೇ ಸೇರಿಸಿ ಕಸದ ಬುಟ್ಟಿಯಲ್ಲಿ ಹಾಕುವುದು ಶ್ರಮದಾಯಕವೇನಲ್ಲ. ಪ್ರಯಾಣದಲ್ಲಿ ಖರೀದಿಸುವ ಚಿಪ್ಸ್, ಬಿಸ್ಕತ್ತು ಕವರ್‌ಗಳನ್ನು ರಸ್ತೆಯಲ್ಲಿ ಎಸೆಯುವ ಚಾಳಿ ಒಳ್ಳೆಯದಲ್ಲ. ಶುಭಾಶಯ ಕೋರುವ ಹೂಗುಚ್ಛ, ಹಾರ ಹಾಗೂ ಉಡುಗೊರೆ ಪ್ಯಾಕೆಟ್‌ನಲ್ಲಿ ಪ್ಲಾಸ್ಟಿಕ್ ಇರದಿರಲಿ.

ಖಾಸಗಿ ವಾಹನ ಬಳಕೆಯನ್ನು ಪ್ರತಿಷ್ಠೆ ಎಂದು ಭ್ರಮಿಸಿ ಸಾರ್ವಜನಿಕ ಸಾರಿಗೆ ಬಳಸದಿರುವುದು ಅಜ್ಞಾನ ಎಂಬುದನ್ನು ಆದಷ್ಟು ಬೇಗ ಅರಿಯಬೇಕಿದೆ. ಯಾವ ನಗರ, ಪಟ್ಟಣ, ಹಳ್ಳಿಗೆ ಹೋದರೂ ರಸ್ತೆಬದಿಯಲ್ಲಿ ಮದ್ಯದ ಬಾಟಲಿಗಳು, ಟೆಟ್ರಾಪ್ಯಾಕ್‌ಗಳು, ಗುಟ್ಕಾ ಚೀಟಿಗಳು ಹರಡಿಕೊಂಡಿರುವುದು ಸಾಮಾನ್ಯ ದೃಶ್ಯವಾಗಿದೆ. ಊರಿಗೆ ಹತ್ತಿರವಿರುವ ಹೊಲಗಳಂತೂ ತ್ಯಾಜ್ಯಗಳ ಉಗ್ರಾಣದಂತೆ ರೈತರನ್ನು ಕಾಡುತ್ತಿವೆ. ಹಳ್ಳ, ಹೊಳೆ, ಕಾಲುವೆ, ಎಲ್ಲೆಡೆ ಪ್ಲಾಸ್ಟಿಕ್ ತ್ಯಾಜ್ಯದ ರಾಶಿಯನ್ನು ಕಾಣಬಹುದು. ನಮ್ಮ ದೇಶವನ್ನು ಹಾಳುಗೆಡವಲು ಶತ್ರು ದೇಶ ಇವೆಲ್ಲವನ್ನೂ ತಂದು ಸುರಿದಿಲ್ಲ; ಇದು, ಪರಿಣಾಮದ ಭೀಕರತೆಯ ಅರಿವಿಲ್ಲದೇ ನಮ್ಮ ವಿರುದ್ಧ ನಾವೇ ಸಾಧಿಸುತ್ತಿರುವ ದ್ವೇಷ ಅಥವಾ ಎಸಗುತ್ತಿರುವ ದೇಶದ್ರೋಹ!

ರಾಜಕೀಯ, ಸಾಮಾಜಿಕ, ಕೌಟುಂಬಿಕ, ಸ್ನೇಹ, ವೃತ್ತಿ... ಹೀಗೆ ಬದುಕಿನ ಬಹುತೇಕ ಪರಿಸರ ಮಲಿನಗೊಂಡ ಸಂದರ್ಭದಲ್ಲಿ ನಾವಿದ್ದೇವೆ. ಈ ಎಲ್ಲಾ ಪರಿಸರ ನಾಶದ ಮೂಲವಿರುವುದು ಆಧುನಿಕ ಮನುಷ್ಯನ ಮನದಲ್ಲಿ.

ಸ್ವಾರ್ಥ, ಲೋಭ, ಲಾಲಸೆ, ನಿಷ್ಕರುಣೆ, ತೋರಿಕೆ, ಸಮಯಸಾಧಕತನದ ಕೊಳಕು ತುಂಬಿಕೊಂಡಿರುವ ಮನಸ್ಸುಗಳನ್ನು ನಿಭಾಯಿಸುವ, ನಿರ್ಮಲಗೊಳಿಸುವ ದಿಸೆಯಲ್ಲಿ ನಾವು ಗಂಭೀರವಾಗಿ ಯೋಚಿಸಬೇಕಿದೆ. ಪ್ರಕೃತಿ ಮಾಲಿನ್ಯದ ವಿರುದ್ಧವಷ್ಟೇ ಅಲ್ಲ; ಮನದ ಮಾಲಿನ್ಯದ ವಿರುದ್ಧವೂ ನಾವು ಯುದ್ಧ ಹೂಡಬೇಕಿದೆ. ಮನದ ಮಾಲಿನ್ಯ ತೊಲಗಿಸುವುದು ವಿಶ್ವಸಂಸ್ಥೆ, ಸರ್ಕಾರ, ಸಂಘಟನೆಗಳ ಹೊಣೆಯಲ್ಲ, ಕರ್ತವ್ಯವೂ ಅಲ್ಲ. ಅದೇನಿದ್ದರೂ ವ್ಯಕ್ತಿನೆಲೆಯಲ್ಲಿ ನೆರವೇರಬೇಕಾದ ಸ್ವಚ್ಛತಾ ಕಾರ್ಯ. ಅದು ಕಾರ್ಯಗತವಾದರೆ ಎಲ್ಲಾ ಬಗೆಯ ಪರಿಸರ ಮಾಲಿನ್ಯದ ನಿಯಂತ್ರಣವಷ್ಟೇ ಅಲ್ಲ, ನಿರ್ಮೂಲನೆಯೂ ಸಾಧ್ಯ.

ಚುರುಮುರಿ



ಪಕ್ಕದ್ಮನೆ ಅಂಕಲ್!

• ಗುರು ಪಿ.ಎಸ್.

'ಈ ಸಲ ಕಪ್ ನಮ್ದು, ಈ ಸಲ ಕಪ್ ನಮ್ದು'. ಬೆಂಗಳೂರು ರಾಯಲ್ ಚಾಲೆಂಜರ್ಸ್ ತಂಡ ಫೈನಲ್ ಪಂದ್ಯದಲ್ಲಿ ಗೆಲ್ಲುತ್ತಲೇ ನಾನು ಕೂಗುತ್ತಾ ಕುಣಿಯತೊಡಗಿದೆ.

'ಅಯ್ಯಯ್ಯಯ್ಯ, ಏನ್ ಪ್ರಪಂಚಾನೇ ಗೆದ್ದಂಗೆ ಆಡ್ತಿದೀರಲ್ರೀ, ಸ್ವಲ್ಪ ಸಮಾಧಾನ ಮಾಡ್ಕೊಳ್ಳಿ' ಎಂದಳು ಹೆಂಡತಿ.

'18 ವರ್ಷಗಳ ನಿರೀಕ್ಷೆಯ ಫಲವಾಗಿ ಸಿಕ್ಕಿರೋ ಕಪ್ ಅದು, ನಮಗದು ಪ್ರಪಂಚವೇ' ಎಂದು ಕುಣಿಯುತ್ತಲೇ ಹೇಳಿದೆ.

'ಐಪಿಎಲ್‌ನಲ್ಲಿ ಐದೈದು ಕಪ್ ಗೆದ್ದಿರೋರೂ ಇಷ್ಟೆಲ್ಲ ಕುಣಿದಾಡಿರಲಿಲ್ಲ'.

'ನೀನೇನಮ್ಮ, ಪಕ್ಕದ್ಮನೆ ಅಂಕಲ್ ರಿಲೇಟಿವ್ ಥರ ಆಡ್ತೀಯ... ಆರ್‌ಸಿಬಿಯಲ್ಲಿ ಬೆಂಗಳೂರು ಅನ್ನೋ ಎಮೋಷನ್ ಇದೆಯಲ್ಲ, ಅಷ್ಟೇ ಸಾಕು ನಮಗೆ'.

'ಹೆಸರಲ್ಲಿ ಬೆಂಗಳೂರು ಇದೆ. ಈ ಸಲ ಕಪ್ ನಮ್ದು ಅನ್ನೋ ಕನ್ನಡ ಸಾಲು ಬಿಟ್ಟರೆ ಕನ್ನಡದ ಗಂಧ– ಗಾಳಿ ಗೊತ್ತಿಲ್ಲದವರೇ ಹೆಚ್ಚಾಗಿದ್ದಾರೆ ಅದರಲ್ಲಿ. ಅದ್ಯಾಕಿಷ್ಟು ಸಪೋರ್ಟ್ ಮಾಡ್ತೀರೋ, ಅದ್ಯಾಕಿಷ್ಟು ಕ್ರಿಕೆಟ್ ನೋಡ್ತಿರೋ ಗೊತ್ತಿಲ್ಲ?'

'ನೀನು ಸಿನಿಮಾಗಳನ್ನ ಯಾಕ್ ನೋಡ್ತೀಯ, ಸಂಗೀತ ಯಾಕ್ ಕೇಳ್ತೀಯ?'

'ಮನರಂಜನೆಗೆ'.

'ಓಕೆ, ಪುಸ್ತಕಗಳನ್ನ ಯಾಕ್ ಓದ್ತೀಯಾ?'

'ಮನಸಿನ ಖುಷಿಗೆ'.

'ಈ 18 ವರ್ಷಗಳಲ್ಲಿ ಯಾವ ಸಿನಿಮಾವೂ ಕೊಡದಷ್ಟು ಮನರಂಜನೆ, ಯಾವ ಸಂಗೀತವೂ ಕೊಡದಷ್ಟು ಖುಷಿಯನ್ನು ಆರ್‌ಸಿಬಿ ನಮಗೆ ಕೊಟ್ಟಿದೆ. ಅಷ್ಟೆಲ್ಲ ಅವಮಾನವಾದರೂ ಅವಡುಗಚ್ಚಿ ನಿಂತು ಒಂದೇ ಟೀಮ್‌ಗೆ ಆಡಿ ಮನೆ ಮಗನ ಪ್ರೀತಿಯನ್ನ ಕೊಹ್ಲಿ ಕೊಟ್ಟಿದ್ದಾನೆ' ಎಂದು ಅಭಿಮಾನ– ಸ್ವಾಭಿಮಾನವನ್ನೆಲ್ಲ ಒಟ್ಟಾಗಿಸಿಕೊಂಡು ಹೇಳಿದೆ.

'ಒಟ್ಟನಲ್ಲಿ, ನನ್ನನ್ನೂ ಆರ್‌ಸಿಬಿ ಹೇಟರ್ ಮಾಡಿಬಿಟ್ರಿ'.

'ಬೆಂಗಳೂರು ವಿಷಯಕ್ಕೆ, ಭಾಷೆ ವಿಷಯಕ್ಕೆ ಯಾರೇ ಬಂದರೂ ನಾವು ಹೀಗೇ ಬ್ಯಾಟಿಂಗ್ ಮಾಡೋದು'.

'ಹೀಗೆ ಅಂದ್ರೆ ಹೇಗೆ?'

'ಪಕ್ಕದ ಮನೆಯ ಸಿನಿಮಾ ಅಂಕಲ್‌ಗೆ ನಮ್ ಹೈಕೋರ್ಟ್ ಜಡ್ಜ್ ಆರು ಬಾಲ್‌ಗೆ ಆರು ಸಿಕ್ಸ್ ಹೊಡೆಯೋ ಥರ ಬ್ಯಾಟ್ ಬೀಸಿದರಲ್ಲ ಹಾಗೆ'.

ಸಂಗತ

ಭಾಷೆ ಮತ್ತು ಭಾಷೆಗಳ ವಿಕಸನ ಪ್ರಕ್ರಿಯೆ

ಯಾವ ಭಾಷೆಯೂ ಮತ್ತೊಂದು ಭಾಷೆಯಿಂದ ಜನಿಸುವುದಿಲ್ಲ

• ಸಿ.ಎನ್. ರಾಮಚಂದ್ರನ್

ಹುಟ್ಟಿದಂದಿನಿಂದ ಸಾಯುವವರೆಗೂ ಬಳಸುವ ಒಂದು ಭಾಷೆಯೊಡನೆ ನಾವು ತೀವ್ರವಾದ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವ ಕಾರಣದಿಂದಾಗಿ, ಭಾಷೆಗಳ ಬಗ್ಗೆ ವಸ್ತುನಿಷ್ಠವಾಗಿ, ನಿರ್ಭಾವುಕರಾಗಿ ವಿಚಾರ ಮಾಡಲು ನಮಗೆ ಕಷ್ಟವಾಗುತ್ತದೆ. ಹಾಗೆಯೇ, ಇತರ ಭಾಷೆಗಳ ಸ್ವರೂಪದ ಬಗ್ಗೆ ಗೊಂದಲಗಳಿರುತ್ತವೆ.

ಉದಾಹರಣೆಗೆ, 'ಭಾರತದ, ಜಗತ್ತಿನ ಎಲ್ಲಾ ಭಾಷೆಗಳಿಗೂ ಸಂಸ್ಕೃತ ತಾಯಿ, ಆ ಕಾರಣದಿಂದಲೇ ಅದನ್ನು ದೇವಭಾಷೆ ಎಂದು ಕರೆಯುತ್ತಾರೆ', 'ಇಟಾಲಿಯನ್ ಮತ್ತು ತೆಲುಗು ಸಂಗೀತ ಭಾಷೆಗಳು', 'ಲಿಪಿಯಿಲ್ಲದ ಆಡುಭಾಷೆಗಳನ್ನು ಹಿಂದುಳಿದ ಭಾಷೆಗಳು ಎಂದು ಹೇಳಬಹುದು', 'ಈ ಭಾಷೆ ಇತರ ಭಾಷೆಗಳಿಗಿಂತ ಹೆಚ್ಚು ಪ್ರಾಚೀನವಾಗಿದೆ. ಆದುದರಿಂದ ಅದು ಹೆಚ್ಚು ಶ್ರೇಷ್ಠ'. ಭಾಷಾಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಇವೆಲ್ಲವೂ ಸತ್ಯದೂರ.

ಭಾಷೆಯ ಸ್ವರೂಪದ ಬಗ್ಗೆ ಹೀಗೆ ಕೆಲವು ನಿರ್ಣಾಯಕ ಹೇಳಿಕೆಗಳನ್ನು ಕೊಟ್ಟು ಮುಂದುವರೆಯಬಹುದು: 1. ಭಾಷೆ ಎಂಬುದು ಅಮೂರ್ತ ಸಂಕೇತಗಳ ವ್ಯವಸ್ಥೆ. ಸ್ವರ– ವ್ಯಂಜನ– ಪದಗಳಿಗೂ ಅವುಗಳ ಉಚ್ಚಾರಕ್ಕೂ ಯಾವ ತಾರ್ಕಿಕ ಸಂಬಂಧವೂ ಇಲ್ಲ; ಅದು ಕೇವಲ ಯಾದೃಚ್ಛಿಕ. 2. ಹಾಗೆಯೇ, ಪದಕ್ಕೂ ಅದರ 'ಅರ್ಥ'ಕ್ಕೂ ಯಾವ ತಾರ್ಕಿಕ ಸಂಬಂಧವೂ ಇಲ್ಲ. 3. ಶಬ್ದದ ಉಚ್ಚಾರ, ಅದರ 'ಅರ್ಥ' ಇತ್ಯಾದಿಗಳೆಲ್ಲವೂ ಸಾಂಕೇತಿಕ.

ಭಾಷಾ ವಿಜ್ಞಾನಿ ಸೋಸ್ಯೋ ಭಾಷೆಯನ್ನು 'ವ್ಯವಸ್ಥೆಗಳ ವ್ಯವಸ್ಥೆ' ಎನ್ನುತ್ತಾನೆ. ಎಲ್ಲಾ ಸ್ತರಗಳಲ್ಲಿಯೂ ಭಾಷೆ ಅಮೂರ್ತವಾಗಿರುವುದರಿಂದ, ಭಾಷೆಗಳ ಬಗ್ಗೆ ವಿವರಣೆ– ವಿಶ್ಲೇಷಣೆ ಸಾಧ್ಯವೇ ಹೊರತು ಮೌಲ್ಯಾತ್ಮಕ ತೀರ್ಮಾನಗಳು ಅಸಾಧ್ಯ. ಈ ಚರ್ಚೆಯ ಹಿನ್ನೆಲೆಯಲ್ಲಿ ಸದ್ಯ ವಾಗ್ವಾದಕ್ಕೆ ಕಾರಣವಾಗಿರುವ ಎರಡು ಸಂಗತಿಗಳನ್ನು ನೋಡಬಹುದು: 'ಕನ್ನಡ ತಮಿಳಿನಿಂದ ಜನಿಸಿದೆ' ಎಂಬ ಕಮಲ್ ಹಾಸನ್ ಹೇಳಿಕೆ ಮತ್ತು 'ಸಂಸ್ಕೃತ ಭಾರತೀಯ ಭಾಷೆಗಳ ತಾಯಿ' ಎಂಬ ಎಸ್.ಎಲ್. ಭೈರಪ್ಪನವರ ಹೇಳಿಕೆ.

ಭಾಷಾಶಾಸ್ತ್ರದ ಪ್ರಕಾರ, ಯಾವ ಭಾಷೆಯೂ ಮತ್ತೊಂದು ಭಾಷೆಯಿಂದ ಜನಿಸುವುದಿಲ್ಲ. ಭಾಷೆಗಳ ಉಗಮ ಹಾಗೂ ಬೆಳವಣಿಗೆಯನ್ನು ನಾವು 'ಭಾಷಾ ಕುಟುಂಬಗಳು' ರೂಪಕದ ಮೂಲಕ ನೋಡಬಹುದು. (ಈ ಸಂಬಂಧದಲ್ಲಿ, 'ಕುಟುಂಬ' ಎಂಬ ರೂಪಕವೇ ನಮ್ಮನ್ನು ತಪ್ಪು ದಾರಿಗೆ ಸೆಳೆಯುತ್ತದೆ; 'ಕುಟುಂಬ' ಪದವನ್ನು ಉಪಯೋಗಿಸಿದ ಕೂಡಲೇ 'ತಾಯಿ– ಮಗಳು' ಸಂಬಂಧ ಮುಂದೆ ಬರುತ್ತದೆ. ಇದಕ್ಕೆ ಬದಲಾಗಿ 'ವರ್ಗ' ಪದವನ್ನು ರೂಪಕವಾಗಿ ಉಪಯೋಗಿಸಿದರೆ ಹೆಚ್ಚು ಅರ್ಥಪೂರ್ಣ). ಭಾಷೆಗಳ ಉಗಮ ಹಾಗೂ ವಿಕಸನ 'ತಾಯಿ– ಮಗಳ' ಸಂಬಂಧದಷ್ಟು ಸರಳವಲ್ಲ.

ಒಂದು ಭೂಭಾಗದಲ್ಲಿನ ಭಾಷಿಕ ಸಮುದಾಯವು ತನ್ನ ವೃತ್ತಿ, ಧರ್ಮ, ಆರೋಗ್ಯ ಇತ್ಯಾದಿಗಳಿಗೆ ಹಾನಿಯಾಗತೊಡಗಿದಾಗ ಅಥವಾ ಪ್ರಾಕೃತಿಕ ದುರಂತಗಳ ಕಾರಣದಿಂದ ವಲಸೆ ಹೋಗಬಹುದು. ಸಾಮೂಹಿಕ ವಲಸೆಗಳು ಪ್ರಾಗೈತಿಹಾಸದ ಕಾಲದಿಂದಲೂ ಇವೆ. ಒಂದು ಸಮುದಾಯವು ಮತ್ತೊಂದು ಭಾಷಿಕ ಸಮುದಾಯದ ಭೂಭಾಗಕ್ಕೆ ಹೋದಾಗ, ವಲಸೆ ಬಂದ ಸಮುದಾಯವು ನೂತನ ಭಾಷೆ, ಸಂಸ್ಕೃತಿ, ವೃತ್ತಿ ಇತ್ಯಾದಿಗಳ ಪ್ರಭಾವದಿಂದ ತನ್ನ ಭಾಷೆಯನ್ನು ಕಾಲ ಕ್ರಮೇಣ ಬದಲಾಯಿಸಿಕೊಳ್ಳುತ್ತದೆ; ನೆಲೆಸಿರುವ ಸ್ಥಳದ ಭಾಷೆಯ ಪದಗಳು, ಉಚ್ಚಾರವನ್ನು ತನ್ನ ಹಳೆಯ ಭಾಷೆಯೊಳಗೆ ತರುತ್ತದೆ; ನೆಲೆಸಿದ ಭಾಷೆಯ ವ್ಯಾಕರಣವನ್ನು ಅವಶ್ಯಕವಿದ್ದಷ್ಟು ತನ್ನ ಭಾಷೆಗೆ ಅಳವಡಿಸಿಕೊಳ್ಳುತ್ತದೆ.

ಶತಮಾನಗಳ ನಂತರ ವಲಸಿಗರ ಭಾಷೆ ಅವರ ಪೂರ್ವ ಭಾಷೆಗಿಂತ ಹಾಗೂ ನೆಲೆಸಿದ ಭಾಷೆಗಿಂತ ಭಿನ್ನವಾಗಿ ಹೊಸ ಭಾಷೆಯೇ ಆಗುತ್ತದೆ. ಮೊದಲಿಗದು ಆಡುಭಾಷೆಯಾಗಿದ್ದು, ಎಷ್ಟೋ ಕಾಲದ ನಂತರ ಲಿಪಿಯೊಂದನ್ನು ಅಳವಡಿಸಿಕೊಳ್ಳುತ್ತದೆ. ಇಲ್ಲಿಗೆ ಹೊಸ ಭಾಷೆಯ ವಿಕಾಸದ ಒಂದು ಘಟ್ಟ ಮುಗಿಯುತ್ತದೆ. ಈ ಹೇಳಿಕೆಯು ಎಲ್ಲಾ ಭಾಷೆಗಳಿಗೂ ಅನ್ವಯಿಸುತ್ತದೆ, ದ್ರಾವಿಡ ಭಾಷೆಗಳಿಗೂ.



ಭಾಷಾ ಪಂಡಿತರು ದ್ರಾವಿಡ ಭಾಷೆಗಳ ಪ್ರಥಮಾವಸ್ಥೆಯನ್ನು ಕಲ್ಪಿಸಿಕೊಂಡು, ಆ ಭಾಷೆಯನ್ನು ಬಹುಶಃ ಕ್ರಿ.ಪೂ. 4ನೇ ಸಹಸ್ರಮಾನದಲ್ಲಿ, ಮಧ್ಯ ಭಾರತ ಹಾಗೂ ದಕ್ಷಿಣ ಭಾರತದಲ್ಲಿ ನೆಲೆಸಿದ್ದವರು ಉಪಯೋಗಿಸುತ್ತಿದ್ದರೆಂದು ಹೇಳುತ್ತಾರೆ. ವಲಸೆಗಳಿಂದ ಆ 'ಮೂಲ ಭಾಷೆ' ಕ್ರಿ.ಪೂ. 3ನೇ ಸಹಸ್ರಮಾನದಲ್ಲಿ ಕವಲೊಡೆಯಲು ಪ್ರಾರಂಭಿಸಿತು; ಕಾಲಕ್ರಮದಲ್ಲಿ ನಾವಿಂದು ದ್ರಾವಿಡ ಭಾಷೆಗಳೆನ್ನುವ ಕನ್ನಡ, ತೆಲುಗು, ತಮಿಳು, ಮಲಯಾಳ, ತುಳು... ವಿಕಸಿತವಾದವು.

'ಪಂಚ ದ್ರಾವಿಡ' ಭಾಷೆಗಳಲ್ಲದೆ, ಈ ವರ್ಗಕ್ಕೇ ಸೇರುವ ಬ್ರಹುಯಿ, ಕೊಡವ, ಕೋಟಾ, ಇರುಳ, ತೋಡ, ಕುರುಂಬ ಒಳಗೊಂಡಂತೆ ಸುಮಾರು 80 ಭಾಷೆಗಳಿವೆ. ಇವುಗಳಲ್ಲಿ ಯಾವುದು ಮೊದಲ ಕವಲಾಗಿತ್ತು, ಯಾವುದು ನಂತರ ಕವಲಾಯಿತು ಎನ್ನುವ ಜಿಜ್ಞಾಸೆ ಅರ್ಥಹೀನ. ಪ್ರಾಚೀನತೆ ಭಾಷೆಯ ಶ್ರೇಷ್ಠತೆಯನ್ನು ಗುರುತಿಸುವ ಮಾನದಂಡವಲ್ಲ. ಈ ವಿವರಗಳು ಸಂಸ್ಕೃತ ಹಾಗೂ ಉತ್ತರ ಭಾರತದ ಹಿಂದಿ, ಕಾಶ್ಮೀರಿ, ರಾಜಾಸ್ಥಾನಿಯಂತಹ ಭಾಷೆಗಳಿಗಿರುವ ಸಂಬಂಧಕ್ಕೂ ಅನ್ವಯಿಸುತ್ತವೆ.

ಸಂಸ್ಕೃತವು ಉತ್ತರ ಭಾರತದಲ್ಲಿ ಹರಡುವವರೆಗೂ ಪ್ರತಿಯೊಂದು ಚಿಕ್ಕ– ದೊಡ್ಡ ಭೂಭಾಗದಲ್ಲಿ ಅದರದೇ ಆದ ಭಾಷೆಯಿತ್ತು. ಸಂಸ್ಕೃತವು 'ದೇವಭಾಷೆ'ಯಾಗಿ ಹಾಗೂ ಪ್ರಭುತ್ವದ ಭಾಷೆಯಾದ ಕಾರಣದಿಂದ ಅದು ಮೊದಲಿದ್ದ ದೇಶೀ ಭಾಷೆಗಳನ್ನು ಎಲ್ಲಾ ನೆಲೆಗಳಲ್ಲಿಯೂ ಪ್ರಭಾವಿಸಿತು; ಆ ಭಾಷೆಗಳಿಗೆ ಹೊಸದೇ ರೂಪು ಕೊಟ್ಟಿತು. ಹಿಂದಿ, ಪಂಜಾಬಿ ಮುಂತಾದ ಉತ್ತರ ಭಾರತದ ಇಂದಿನ ಭಾಷೆಗಳು ಆ ರೀತಿಯಲ್ಲಿ ಹೊಸ ರೂಪ ಪಡೆದ ಹಳೆಯ ಭಾಷೆಗಳೇ. ದಕ್ಷಿಣ ಭಾರತದ ಭಾಷೆಗಳು ಸಂಸ್ಕೃತದಿಂದ ಪ್ರಭಾವಿತವಾಗಿದ್ದರೂ ತಮ್ಮತನವನ್ನು ಕಳೆದುಕೊಳ್ಳದೆ ಶ್ರೀಮಂತವಾದವು.

ವಾಚಕರ ವಾಣಿ

ಕೊಹ್ಲಿಯ ನಿಷ್ಠೆ ಅನುಕರಣೀಯ

ಕೊನೆಗೂ ಈ ಸಲ ಕಪ್ ನಮ್ದು! 18 ವರ್ಷಗಳ ನಂತರ ಲಕ್ಷಾಂತರ ಅಭಿಮಾನಿಗಳ ಆಸೆ ಈಡೇರಿದೆ. ರೋಚಕ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ವಿರುದ್ಧ ರಜತ್ ಪಾಟೀದಾರ್ ಬಳಗದ ಪ್ರದರ್ಶನ ಅಭಿಮಾನಿಗಳ ಮನ ತಣಿಸಿದ್ದು ಸುಳ್ಳಲ್ಲ. ವಾಸ್ತವವಾಗಿ ಯಾವುದೇ ಕ್ರೀಡೆಯಲ್ಲೂ; ವಿಸ್ತೃತವಾಗಿ ಹೇಳುವುದಾದರೂ ಬದುಕಿನ ಯಾವುದೇ ರಂಗದಲ್ಲೂ ಸೋಲುಗಳು ನೈಜ ಅರ್ಥದಲ್ಲಿ ಇರುವುದಿಲ್ಲ. ಇದರಲ್ಲಿ ನಾವು ಅವರನ್ನು 'ಬಗ್ಗು ಬಡಿದಿದ್ದು' ಏನೂ ಇಲ್ಲ. ಅವನು ಒಂದು ಎಸೆತವನ್ನು ಕ್ರೀಡಾಂಗಣದ ಆಚೆಗೆ ಬಾರಿಸಿದ್ದಿದ್ದರೆ ಕಪ್ ಅಲ್ಲಿರುತ್ತಿತ್ತು.

ಒಂದೆರಡು ರನ್‌ಗಳಲ್ಲಿ ನಾವೂ ಬಹಳಷ್ಟು ಬಾರಿ ಸೋತಿದ್ದೇವೆ. ಒಲಿಂಪಿಕ್ ಕೂಟದಲ್ಲೂ ಒಂದೆರಡು ಸೆಕೆಂಡ್ ಅಂತರದಲ್ಲಿ, ಒಂದೆರಡು ಮಿಲಿಮೀಟರ್ ಅಂತರದಲ್ಲಿ ಪದಕಗಳು ಕೈತಪ್ಪುತ್ತವೆ. ಆರ್‌ಸಿಬಿ ತಂಡದಲ್ಲಿ ಈ ಪಂದ್ಯದಲ್ಲಿ ಕಣಕ್ಕೆ ಇಳಿದ ಕನ್ನಡದ ಕಂದ ಮಯಂಕ್ ಅಗರವಾಲ್ ಅವರೊಬ್ಬರೇ. ವಿರಾಟ್ ಕೊಹ್ಲಿಯ ನಿಷ್ಠೆ ಅನುಕರಣೀಯ. ಇದು ಅವರ ಕಪ್.

ಎಸ್.ಕೆ.ಕುಮಾರ್, ಬೇಲೂರು

ನುಡಿಯ ಅಸ್ಮಿತೆ ಪ್ರಶ್ನೆ

ಮರ್ಯಾದೆಗೆ ಕುಂದಲ್ಲ
ಕ್ಷಮೆ ಕೇಳುವುದು
ಬದಲಿಗೆ ಹೆಚ್ಚುವುದು ಘನತೆ!
ನೀವು ಆಡಿದ ಮಾತೇನು ಚಿಕ್ಕದೆ!
ಕನ್ನಡ ನುಡಿಯ ಅಸ್ಮಿತೆಗೆ
ಕುಂದುಂಟು ಮಾಡುವ
ಕನ್ನಡಿಗರನ್ನು ಕೆಣಕುವ
ಅನರ್ಥಕಾರಿ ಮಾತದು!
ಹೈಕೋರ್ಟ್ ಆಡಿದ ಮಾತು
ಅತ್ಯಂತ ಅರ್ಥಪೂರ್ಣ ಸಕಾಲಿಕ!
ಚಿಂತಿಸಿ ತೀರ್ಮಾನಿಸಿ ಕಮಲ್
ಅವರೇ...

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಪ್ಲಾಸ್ಟಿಕ್: ನಿರ್ವಹಣೆಗೆ ಜಾಣತನ ತೋರಬೇಕಿದೆ

ಪ್ಲಾಸ್ಟಿಕ್ ಎಂಬ ಭಸ್ಮಾಸುರನ ರೌದ್ರಾವತಾರ ಕುರಿತ ವರದಿ ಔಚಿತ್ಯಪೂರ್ಣವಾಗಿದೆ (ಆಳ- ಅಗಲ, ಜೂನ್ 4). ನಾವು ಬೆಳಿಗ್ಗೆ ಎದ್ದಾಗ ಹಿಡಿಯುವ ಹಲ್ಲು ಉಜ್ಜುವ ಬ್ರಷ್‌ನಿಂದ ಹಿಡಿದು ರಾತ್ರಿ ಮಲಗುವಾಗ ದೀಪ ಆರಿಸಲು ಉಪಯೋಗಿಸುವ ಸ್ವಿಚ್‌ವರೆಗೆ ಎಲ್ಲವೂ ಪ್ಲಾಸ್ಟಿಕ್‌ಮಯ. ಪ್ಲಾಸ್ಟಿಕ್ ಬಳಕೆಯನ್ನು ದಿಢೀರ್ ನಿಲ್ಲಿಸಲು ಸಾಧ್ಯವಿಲ್ಲದಿದ್ದರೂ ಅದರ ಬಳಕೆಯನ್ನು ಕ್ರಮೇಣ ಕಡಿಮೆ ಮಾಡಬಹುದು, ಹೆಚ್ಚು ಜಾಣತನದಿಂದ ಅದರ ನಿರ್ವಹಣೆ ಮಾಡಬಹುದು.

ನಗರವೊಂದರ ಪೊಲೀಸರು ನಿಷೇಧಗೊಂಡ ಅರ್ಧ ತಲೆಯ ಹೆಲ್ಮೆಟ್‌ಗಳನ್ನು ದ್ವಿಚಕ್ರ ವಾಹನ ಸವಾರರಿಂದ ವಶಪಡಿಸಿಕೊಂಡು ಅವುಗಳನ್ನು ಬುಲ್ಡೋಜರ್ ಸಹಾಯದಿಂದ ನಾಶಪಡಿಸಿದರು ಎಂಬ ಸುದ್ದಿಯು ಎರಡು ತಿಂಗಳ ಹಿಂದೆ ವರದಿಯಾಗಿತ್ತು. ಇದರ ಬದಲು ಅವಶ್ಯಕತೆ ಇರುವ ರಸ್ತೆ ಕಾಮಗಾರಿ ಕೆಲಸಗಾರರು ಹಾಗೂ ಕಟ್ಟಡ ನಿರ್ಮಾಣ ಕೆಲಸದಲ್ಲಿ ತೊಡಗಿರುವವರಿಗೆ ವಿತರಿಸಿದ್ದರೆ ಈ ಕಸದ ರಾಶಿಯನ್ನು ತಪ್ಪಿಸಬಹುದಿತ್ತು. ಎಲ್ಲಾ ಸ್ತರದ ಜನರು ಈ ದಿಸೆಯಲ್ಲಿ ಕೈಜೋಡಿಸಿದರೆ ಸ್ವಲ್ಪಮಟ್ಟಿನ ಸಕಾರಾತ್ಮಕ ಬದಲಾವಣೆ ಸಾಧ್ಯ.

ಆಶಾ ಅಪ್ರಮೇಯ, ದಾವಣಗೆರೆ

ಪಶ್ಚಿಮಘಟ್ಟ: ಮತ್ತೆ ಅಧ್ಯಯನದ ಕಸರತ್ತು...

ಪಶ್ಚಿಮಘಟ್ಟಗಳ ಉಳಿವಿಗಾಗಿ, ನಮ್ಮ ನಾಳೆಗಳಿಗಾಗಿ, ಭವಿಷ್ಯದ ಪೀಳಿಗೆಗಾಗಿ ಜನಸಾಮಾನ್ಯರೂ ಹೋರಾಟಕ್ಕೆ ಇಳಿಯಬೇಕಾಗಿದೆ. ಎಲ್ಲೆಲ್ಲಿ ಭೂಕುಸಿತವಾಗುತ್ತಿದೆಯೋ ಅಲ್ಲಿಯ ಧಾರಣ ಸಾಮರ್ಥ್ಯದ ಬಗ್ಗೆ ಅಧ್ಯಯನ ನಡೆಸುವ ಬಗ್ಗೆ ಅರಣ್ಯ ಸಚಿವರು ಹೇಳಿಕೆ ನೀಡಿದ್ದಾರೆ. ಈ ಪ್ರದೇಶದ ಧಾರಣ ಸಾಮರ್ಥ್ಯವನ್ನು ಅರಿಯುವ ಉದ್ದೇಶ ಒಳ್ಳೆಯದೇ. ಆದರೆ, ಅದಕ್ಕಾಗಿ ಮತ್ತೆ ಸಮಿತಿ ರಚಿಸುವುದು ಬೇಡ.

ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಮಾಧವ ಗಾಡ್ಗೀಳ್ ವರದಿ, ಕಸ್ತೂರಿ ರಂಗನ್ ವರದಿ, ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ರಚಿಸಿದ್ದ ಸಮಿತಿಯೊಂದರ ವರದಿ... ಇವೆಲ್ಲ ದೂಳು ಹಿಡಿಯುತ್ತಾ ಎಲ್ಲಿ ಕುಳಿತಿವೆಯೋ? ಆ ವರದಿಗಳ ಮೇಲೆ ಒಮ್ಮೆ ಕಣ್ಣಾಡಿಸಿ ನೋಡಬಹುದಿತ್ತು.

ಈಗ ಎಲ್ಲೆಲ್ಲಿ ಭೂಕುಸಿತವಾಗುತ್ತಿದೆಯೋ ಆ ಪ್ರದೇಶಕ್ಕೆ ಸನಿಹದಲ್ಲಿರುವ ಊರಿನ ಜನರಿಂದ ಅಭಿಪ್ರಾಯ ಸಂಗ್ರಹಿಸಿದರೆ ಹೆಚ್ಚು ವಸ್ತುನಿಷ್ಠವಾದ ಸಂಗತಿ ಗೊತ್ತಾಗುತ್ತದೆ. ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿ ಯಾವುದೇ ಬೃಹತ್ ಯೋಜನೆಯನ್ನು ಕೈಗೊಳ್ಳದಿರಲು ನಿರ್ಧಾರ ಮಾಡಿದರೆ ಪರಿಸರ ಮತ್ತು ಜೀವಜಾಲದ ಉಳಿವಿಗಾಗಿ ಅದಕ್ಕಿಂತ ಉತ್ತಮ ನಿರ್ಧಾರ ಇನ್ನೊಂದು ಇರಲಾರದು! ಈ ದಿಸೆಯಲ್ಲಿ ರಾಜ್ಯ ಸರ್ಕಾರವು ಆಲೋಚನೆ ಮಾಡುವುದು ಉತ್ತಮ.

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ಮಹನೀಯರ ಜಯಂತಿ: ಜಾತಿಗಳಿಗೆ ಸೀಮಿತ ಬೇಡ

ರೇವಣ್ಣ ಎಂ.ಜಿ. ಅವರ 'ಎದೆಯ ಹಣತೆ'ಯಲ್ಲಿ ಮೂಡಲಿ ಸಾಮರಸ್ಯ' ಲೇಖನ (ಸಂಗತ, ಜೂನ್ 4) ತುಂಬಾ ವಸ್ತುನಿಷ್ಠವಾಗಿದೆ. ಸರ್ಕಾರದಿಂದ ಆಚರಿಸಲ್ಪಡುವ ಬಸವ ಜಯಂತಿ, ವಾಲ್ಮೀಕಿ ಜಯಂತಿ, ವಿಶ್ವಮಾನವ (ಕುವೆಂಪು) ಜಯಂತಿ, ಕನಕದಾಸ ಜಯಂತಿ, ಅಂಬೇಡ್ಕರ್ ಜಯಂತಿಯಂತಹ ಜಯಂತಿಗಳ ಸಂದರ್ಭದಲ್ಲಿ ಜಿಲ್ಲಾಡಳಿತ, ತಾಲ್ಲೂಕು ಆಡಳಿತಗಳು ಕರೆಯುವ ಪೂರ್ವಭಾವಿ ಸಭೆಗಳಿಗೆ ಆಯಾ ಮಹನೀಯರಿಗೆ ಸಂಬಂಧಿಸಿದ ಜಾತಿ ಸಂಘಟನೆಗಳ ಪ್ರತಿನಿಧಿಗಳನ್ನು ಮಾತ್ರ ಆಹ್ವಾನಿಸುವ ಪರಿಪಾಟ ಬೆಳೆದುಬಂದಿದೆ.

ಹಾಗಾದರೆ ಮೇಲೆ ಹೇಳಿದ ಎಲ್ಲಾ ಮಹನೀಯರು ಅವರವರ ಜಾತಿಗೆ ಮಾತ್ರ ಸೀಮಿತರಾದವರೇ?! ಅವರೆಲ್ಲರೂ ಇಡೀ ಮನುಕುಲದ ಒಳಿತಿಗಾಗಿ ದುಡಿದವರು. ಅವರ ಸಂದೇಶಗಳು ಮನುಜಮತದ ಏಳಿಗೆಯನ್ನು ಬಯಸುವಂಥವು ಎಂಬ ಸತ್ಯವನ್ನು ನಾವೇಕೆ ಮರೆಮಾಚುತ್ತಿದ್ದೇವೆ?

ಉದಾತ್ತ ವ್ಯಕ್ತಿಗಳ ಜಯಂತಿ ಆಚರಣೆ ಸಂದರ್ಭದಲ್ಲಿ ಜಾತಿ ಭೇದವಿಲ್ಲದೆ ಎಲ್ಲರನ್ನೂ ತೊಡಗಿಸಿಕೊಳ್ಳಬೇಕೆಂದು ಜಿಲ್ಲಾಡಳಿತ, ತಾಲ್ಲೂಕು ಆಡಳಿತಗಳಿಗೆ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಬೇಕಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜುಲೈ 21ರಿಂದ ಸಂಸತ್ ಮುಂಗಾರು ಅಧಿವೇಶನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಸಂಸತ್‌ನ ಮುಂಗಾರು ಅಧಿವೇಶನ ಜುಲೈ 21ರಿಂದ ಆಗಸ್ಟ್ 12ರ ವರೆಗೆ ನಡೆಯಲಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಬುಧವಾರ ಹೇಳಿದ್ದಾರೆ.

ಮುಂಗಾರು ಅಧಿವೇಶನ ನಡೆಯುವ ದಿನಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ಸಂಸದೀಯ ವ್ಯವಹಾರಗಳ ಕುರಿತ ಸಂಪುಟ ಸಮಿತಿಯು ಅಂತಿಮಗೊಳಿಸಿದೆ ಎಂದೂ ಅವರು ಹೇಳಿದ್ದಾರೆ.

‘ಎಲ್ಲ ಮಹತ್ವದ ವಿಚಾರಗಳ ಕುರಿತು ಅಧಿವೇಶನದಲ್ಲಿ ಚರ್ಚೆ ಮಾಡಬಹುದು’ ಎಂದ ರಿಜಿಜು, ‘ಪ್ರತಿಯೊಂದು ಅಧಿವೇಶನವೂ ವಿಶೇಷ ಅಧಿವೇಶನ-ವಾಗಿದೆ’ ಎಂದು ಹೇಳಿದ್ದಾರೆ.

ಈ ಮೂಲಕ, ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ, ಆಪರೇಷನ್ ಸಿಂಧೂರ ಹಾಗೂ ನಂತರದ ಬೆಳವಣಿಗೆಗಳ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು ಎಂಬ ವಿಪಕ್ಷಗಳ ಒಕ್ಕೂಟ ‘ಇಂಡಿಯಾ’ದ ಬೇಡಿಕೆಯನ್ನು ಕೇಂದ್ರ ಸರ್ಕಾರ ಬಹುತೇಕ ತಿರಸ್ಕರಿಸಿದಂತೆ ಆಗಿದೆ.

ಮುಂಗಾರು ಅಧಿವೇಶನ ಆರಂ-ಭವಾಗುವುದಕ್ಕೂ 48 ದಿನ ಮೊದಲೇ ಈ ಕುರಿತ ಘೋಷಣೆ ಹೊರಬಿದ್ದಿರುವುದು ಅಸಾಮಾನ್ಯ ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.

ಒಟ್ಟು 17 ದಿನ ನಡೆಯಲಿರುವ ಕಲಾಪದಲ್ಲಿ, ಆಪರೇಷನ್ ಸಿಂಧೂರ, ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ವಿರುದ್ಧ ವಾಗ್ದಂಡನೆ ಆರಂಭಿಸುವ ಕುರಿತು ಚರ್ಚಿಸಲಾಗುತ್ತದೆ.

ಜಾತಿ ಜನಗಣತಿ ಘೋಷಣೆ ಮಾಡಿರುವ ಶ್ರೇಯವನ್ನು ತನ್ನದಾಗಿಸಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗುವ ಸಾಧ್ಯತೆ ಇದೆ. ವರ್ಷಾಂತ್ಯಕ್ಕೆ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಕಾರಣ, ಕೇಂದ್ರ ಸರ್ಕಾರದಿಂದ ಇಂತಹ ನಡೆ ನಿರೀಕ್ಷಿತ ಎನ್ನಲಾಗುತ್ತಿದೆ.

ಟಿಎಂಸಿ ಟೀಕೆ: ಮುಂಗಾರು ಅಧಿವೇಶನ ನಡೆಯುವ ಬಗ್ಗೆ ಕೇಂದ್ರ ಸರ್ಕಾರ ಘೋಷಿಸಿದ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ಟಿಎಂಸಿಯ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಯಾನ್, ‘ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್‌ನಲ್ಲಿ ವಿಪಕ್ಷಗಳನ್ನು ಎದುರಿಸಲು ಹೆದರುತ್ತಿದೆ. ಹೀಗಾಗಿ ವಿಶೇಷ ಅಧಿವೇಶನ ಕರೆಯುತ್ತಿಲ್ಲ’ ಎಂದು ಟೀಕಿಸಿದ್ದಾರೆ.

‘ಕೇಂದ್ರ ಸರ್ಕಾರ ಪಲಾಯನ ಮಾಡುತ್ತಿದ್ದು, ಅದರ ಈ ಸ್ಥಿತಿಗೆ ನಾನು ‘ಪಾರ್ಲಿಮೆಂಟೊಫೋಬಿಯಾ’ ಎನ್ನುತ್ತೇನೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

> **ಜುಲೈನಲ್ಲಿ ಮುಂಗಾರು ಅಧಿವೇಶನ ಕರೆಯಬಹುದಾದಲ್ಲಿ, ಕೇಂದ್ರ ಸರ್ಕಾರ ಜೂನ್‌ನಲ್ಲಿ ವಿಶೇಷ ಅಧಿವೇಶನ ಏಕೆ ಕರೆಯಬಾರದು?**
> **ಡೆರೆಕ್ ಒಬ್ರಯಾನ್,** ಟಿಎಂಸಿಯ ರಾಜ್ಯಸಭಾ ಸಂಸದ

ಬಿರುಸಿನ ಚರ್ಚೆ ಸಾಧ್ಯತೆ

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ, ‘ಆಪರೇಷನ್ ಸಿಂಧೂರ’ದ ವಿಚಾರಗಳೇ ಮುಂಗಾರು ಅಧಿವೇಶನದಲ್ಲಿ ಪ್ರಮುಖವಾಗಿ ಪ್ರಸ್ತಾಪವಾಗಲಿವೆ.

ಭದ್ರತೆಯಲ್ಲಿ ಲೋಪ, ದಿಢೀರನೆ ಕದನ ವಿರಾಮ ಘೋಷಣೆ ಹಾಗೂ ತನ್ನದೇ ಮಧ್ಯಸ್ಥಿಕೆಯಿಂದಾಗಿ ಕದನ ವಿರಾಮ ಘೋಷಿಸಲಾಯಿತು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇಪದೇ ಹೇಳುತ್ತಿರುವುದು, ಭಾರತೀಯ ಪಡೆಗಳಿಗೆ ಆಗಿರುವ ನಷ್ಟ ಕುರಿತು ಪ್ರಶ್ನೆಗಳನ್ನು ಕೇಳುವ ಮೂಲಕ ಸರ್ಕಾರಕ್ಕೆ ಚಾಟಿ ಬೀಸಲು ವಿಪಕ್ಷಗಳು ಸಜ್ಜಾಗಲಿವೆ.

ಇದಕ್ಕೆ ಕೇಂದ್ರ ಸರ್ಕಾರ ಕೂಡ ಎದಿರೇಟು ನೀಡುವುದು ನಿರೀಕ್ಷಿತ. ವಿರೋಧ ಪಕ್ಷಗಳು ‘ಪಾಕಿಸ್ತಾನದ ಭಾಷೆ’ಯಲ್ಲಿ ಮಾತನಾಡುತ್ತಿವೆ ಎಂದು ಕೇಂದ್ರ ಚಾಟಿ ಬೀಸುವ ಸಾಧ್ಯತೆಯೂ ಇಲ್ಲದಿಲ್ಲ.

ನ್ಯಾ. ವರ್ಮಾ ಪದಚ್ಯುತಿಗೆ ಕೇಂದ್ರ ಮುಂದು

ನವದೆಹಲಿ (ಪಿಟಿಐ): ಮನೆಯಲ್ಲಿ ನೋಟುಗಳ ಕಂತೆ ಪತ್ತೆಯಾದ ಪ್ರಕರಣದಲ್ಲಿ ಆರೋಪಿಯಾಗಿರುವ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರನ್ನು ವಾಗ್ದಂಡನೆಗೆ ಗುರಿಪಡಿಸಿ, ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದ್ದು, ಎಲ್ಲ ಪಕ್ಷಗಳೊಂದಿಗೆ ಸಮಾಲೋಚನೆ ಆರಂಭಿಸಿದೆ.

ಈ ಕುರಿತು ಬುಧವಾರ ಮಾಹಿತಿ ನೀಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ‘ನ್ಯಾಯಮೂರ್ತಿ ವರ್ಮಾ ಅವರನ್ನು ಪದಚ್ಯುತಿಗೊಳಿಸುವ ಸಂಬಂಧ ಎಲ್ಲ ಪಕ್ಷಗಳು ಒಟ್ಟಾಗಿ ವಾಗ್ದಂಡನೆ ಗೊತ್ತುವಳಿ ಮಂಡಿಸಬೇಕು ಎಂಬುದು ಸರ್ಕಾರದ ಬಯಕೆ. ಮುಂದೆ ನಡೆಯುವ ಮುಂಗಾರು ಅಧಿವೇಶನ-ದಲ್ಲಿಯೇ ಈ ಕುರಿತ ಗೊತ್ತುವಳಿ ಮಂಡಿಸುವ ಸಂಬಂಧ ಎಲ್ಲ ಪಕ್ಷಗಳೊಂದಿಗೆ ಚರ್ಚೆ ಆರಂಭಿಸಿದ್ದೇನೆ’ ಎಂದರು.

‘ನ್ಯಾ. ವರ್ಮಾ ಅವರನ್ನು ವಾಗ್ದಂಡನೆಗೆ ಗುರಿಪಡಿಸುವ ಕುರಿತು ಪ್ರಮುಖ ರಾಜಕೀಯ ಪಕ್ಷಗಳಿಗೆ ಈಗಾಗಲೇ ತಿಳಿಸಲಾಗಿದೆ. ಸಣ್ಣ ಪಕ್ಷಗಳಿಗೂ ಈ ಬಗ್ಗೆ ವಿವರಿಸಿ, ಅವುಗಳನ್ನು ಕೂಡ ಈ ಪ್ರಕ್ರಿಯೆಯ ಭಾಗವಾಗುವಂತೆ ಮಾಡಲಾಗುವುದು’ ಎಂದು ಹೇಳಿದರು.

‘ಭ್ರಷ್ಟಾಚಾರ ವಿಚಾರವು ಒಂದು ಪಕ್ಷದ ಕಾರ್ಯ-ಸೂಚಿಯಲ್ಲ ಎಂಬುದು ಸರ್ಕಾರದ ಭಾವನೆ. ನ್ಯಾಯಾಂಗ ಅಥವಾ ಯಾವುದೇ ಕ್ಷೇತ್ರವಿರಲಿ, ಭ್ರಷ್ಟಾಚಾರವೆಂಬ ಪಿಡುಗಿನ ವಿರುದ್ಧ ಹೋರಾಡಬೇಕು ಎಂಬುದು ಎಲ್ಲ ರಾಜಕೀಯ ಪಕ್ಷಗಳ ನಿಲುವಾಗಿದೆ’ ಎಂದರು.

ಭ್ರಷ್ಟಾಚಾರದಿಂದ ವ್ಯವಸ್ಥೆ ಮೇಲಿನ ನಂಬಿಕೆಗೆ ಧಕ್ಕೆ: ಸಿಜೆಐ

‘ನ್ಯಾಯಾಂಗದಲ್ಲಿ ಕಂಡುಬರುವ ಭ್ರಷ್ಟಾಚಾರ ಮತ್ತು ದುರ್ವರ್ತನೆ ಇಡೀ ವ್ಯವಸ್ಥೆಯ ಸಮಗ್ರತೆ ಕುರಿತ ನಂಬಿಕೆಯನ್ನು ಹಾಳು ಮಾಡುತ್ತವೆ. ನ್ಯಾಯಾಂಗ ಕುರಿತು ಸಾರ್ವಜನಿಕರಲ್ಲಿ ನಕಾರಾತ್ಮಕ ಭಾವನೆ ಮೂಡುವಂತೆ ಮಾಡುತ್ತವೆ’ ಎಂದು ಸುಪ್ರೀಂ ಕೋರ್ಟ್ ಸಿಜೆಐ ಬಿ.ಆರ್. ಗವಾಯಿ ಹೇಳಿದ್ದಾರೆ.

ಬ್ರಿಟನ್‌ನ ಸುಪ್ರೀಂ ಕೋರ್ಟ್‌ನಲ್ಲಿ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಮತ್ತು ದುರ್ವರ್ತನೆ ಘಟನೆಗಳು ಕಂಡುಬಂದಾಗಲೆಲ್ಲಾ ಸುಪ್ರೀಂ ಕೋರ್ಟ್ ತಕ್ಷಣವೇ ಕ್ರಮ ಕೈಗೊಳ್ಳುತ್ತಾ ಬಂದಿದೆ’ ಎಂದಿದ್ದಾರೆ.

ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರ ಆರೋಪಗಳ ಹಿನ್ನೆಲೆಯಲ್ಲಿ ಸಿಜೆಐ ಈ ಮಾತು ಹೇಳಿದ್ದಾರೆ.

> ಕೊಲಿಜಿಯಂ ವ್ಯವಸ್ಥೆ ಬಗ್ಗೆ ಸಾಕಷ್ಟು ಟೀಕೆಗಳಿವೆ. ಆದರೆ, ಈ ವ್ಯವಸ್ಥೆಯಲ್ಲಿನ ಲೋಪಗಳಿಗೆ ಕಂಡುಕೊಳ್ಳುವ ಪರಿಹಾರವು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತೆ ಇರಬಾರದು. ನ್ಯಾಯಮೂರ್ತಿಗಳು ಬಾಹ್ಯ ನಿಯಂತ್ರಣದಿಂದ ಮುಕ್ತವಾಗಿ ಕಾರ್ಯ ನಿರ್ವಹಿಸುವಂತಿರಬೇಕು.
> **ಬಿ.ಆರ್.ಗವಾಯಿ,** ಸಿಜೆಐ

2026ರಿಂದ ಲಡಾಖ್, ಜಮ್ಮು ಮತ್ತು ಕಾಶ್ಮೀರದಲ್ಲಿ ಗಣತಿ ಆರಂಭ: ಕೇಂದ್ರ ಗೃಹ ಸಚಿವಾಲಯ

2027ಕ್ಕೆ ಗಣತಿ, ಜಾತಿಗಣತಿ ಆರಂಭ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಜನಗಣತಿ ಮತ್ತು ಜಾತಿ ಗಣತಿಯನ್ನು 2027ರ ಮಾರ್ಚ್ 1ರಿಂದ ಆರಂಭಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಎರಡು ಹಂತದಲ್ಲಿ ಗಣತಿ ನಡೆಯಲಿವೆ. ಹಿಮಪಾತ ಆರಂಭವಾಗುವ ಮೊದಲೇ ಅಂದರೆ, 2026ರ ಅ.1ರಿಂದ ಕೇಂದ್ರಾಡಳಿತ ಪ್ರದೇಶಗಳಾದ ಲಡಾಖ್, ಜಮ್ಮು ಮತ್ತು ಕಾಶ್ಮೀರ ಮತ್ತು ಹಿಮಾಚಲ ಪ್ರದೇಶ, ಉತ್ತರಾಖಂಡ ರಾಜ್ಯಗಳಲ್ಲಿ ಗಣತಿಗಳು ಆರಂಭವಾಗಲಿವೆ.

ಈ ಕುರಿತು ಗೃಹ ಸಚಿವಾಲಯವು ಬುಧವಾರ ಹೇಳಿಕೆ ಬಿಡುಗಡೆ ಮಾಡಿದ್ದು, ‘ಜೂನ್ 16ರಂದು ಗೆಜೆಟ್ ಅಧಿಸೂಚನೆ ಹೊರಡಿಸಲಾಗುವುದು. ಆ ಬಳಿಕ ಗಣತಿ ನಡೆಸುವ ಪ್ರಕ್ರಿಯೆಯನ್ನು ಆರಂಭಿಸಲಾಗುವುದು’ ಎಂದು ಹೇಳಿದೆ.

ಈ ಗಣತಿಗಳ ಜೊತೆಯಲ್ಲಿಯೇ ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ಪ್ರಕ್ರಿಯೆಯನ್ನು ನಡೆಸಲಾಗುವುದೇ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ.

ದೇಶದಲ್ಲಿ ಇದೇ ಮೊದಲ ಬಾರಿಗೆ ಡಿಜಿಟಲ್ ಗಣತಿಯ ಅವಕಾಶವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ನಾಗರಿಕರು ತಮ್ಮ ಸ್ವವಿವರಗಳನ್ನು ತಾವಾಗಿಯೇ ಡಿಜಿಟಲ್ ಗಣತಿ ಬಳಸಿಕೊಂಡು ನಮೂದಿಸಬಹುದಾಗಿದೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷಗಳ ಹಲವು ನಾಯಕರು ಜಾತಿ ಗಣತಿ ನಡೆಸುವಂತೆ ಕೇಂದ್ರ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಿದ್ದರು. ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ ಕೆಲವೇ ದಿನಗಳ ಬಳಿಕ ಜಾತಿ ಗಣತಿ ನಡೆಸುವುದಾಗಿ ಕೇಂದ್ರ ಸರ್ಕಾರವು ಘೋಷಿಸಿತ್ತು.



ಜನಗಣತಿ ಮತ್ತು ಜಾತಿಗಣತಿ ನಡೆಸಲು ತಗಲುವ ಅಂದಾಜು ವೆಚ್ಚ


₹575 ಕೋಟಿ 2025–26ರಲ್ಲಿ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಗಣತಿಗಾಗಿ ಮೀಸಲಿಟ್ಟ ಅನುದಾನ

ಕೇಂದ್ರ ಸರ್ಕಾರವು ಗಣತಿಗಾಗಿ ಈ ಬಾರಿಯ ಬಜೆಟ್‌ನಲ್ಲಿ ಮೀಸಲಿಟ್ಟ ಮೊತ್ತದ ಕುರಿತು ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿದ್ದವು. ಇದಕ್ಕೆ ಪ್ರತಿಕ್ರಿಯಿಸಿದ್ದ ಕೇಂದ್ರ ಗೃಹ ಸಚಿವಾಲಯವು, ‘ಹೆಚ್ಚುವರಿ ಹಣ ಬೇಕಾದರೆ, ಹಣಕಾಸು ಸಚಿವಾಲಯವನ್ನು ಕೇಳುತ್ತೇವೆ’ ಎಂದು ಹೇಳಿತ್ತು

₹3,941 ಕೋಟಿ 2019ರಲ್ಲಿ ಕೇಂದ್ರ ಸಂಪುಟವು ರಾಷ್ಟ್ರೀಯ ಜನಸಂಖ್ಯಾ ನೋಂದಣಿಗಾಗಿ ಮೀಸಲಿಡಲು ಒಪ್ಪಿಗೆ ನೀಡಿದ್ದ ಮೊತ್ತ

₹8,754 ಕೋಟಿ 2019ರಲ್ಲಿ ಕೇಂದ್ರ ಸಂಪುಟವು ಗಣತಿಗಾಗಿ ಮೀಸಲಿಡಲು ಒಪ್ಪಿಗೆ ನೀಡಿದ್ದ ಮೊತ್ತ

ಮಹಿಳಾ ಮೀಸಲು ಯಾವಾಗ?

ಜನಗಣತಿ ಪ್ರಕ್ರಿಯೆ ಮುಗಿದು ತಿಂಗಳೊಳಗೆ ದೇಶದಲ್ಲಿನ ಜನಸಂಖ್ಯೆಯ ಅಂದಾಜು ಪ್ರಮಾಣ ತಿಳಿಯುತ್ತದೆ. 2029–2030ರ ಹೊತ್ತಿಗೆ ಅಂತಿಮ ವರದಿ ಬರಬಹುದು. ಆ ಬಳಿಕವೇ ಲೋಕಸಭೆ ಮತ್ತು ವಿಧಾನಸಭೆಗಳ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಆರಂಭಗೊಳ್ಳಬಹುದು. ಕ್ಷೇತ್ರ ಮರುವಿಂಗಡಣೆ ಆಯೋಗವನ್ನು ರಚಿಸಬೇಕಾಗುತ್ತದೆ. ತನ್ನ ಅಂತಿಮ ವರದಿ ಸಲ್ಲಿಸಲು ಈ ಆಯೋಗಕ್ಕೆ ಹಲವು ವರ್ಷಗಳೇ ಬೇಕಾಗಬಹುದು.

ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವುದು ಕೂಡ ಬಹಳ ದೂರದ ಮಾತಾಗುತ್ತದೆ. ಕ್ಷೇತ್ರ ಮರುವಿಂಗಡಣೆ ಆದ ಬಳಿಕವಷ್ಟೇ ಮಹಿಳಾ ಮೀಸಲಾತಿ ಜಾರಿ ಮಾಡಬಹುದಾಗಿದೆ.

> **2021ರಲ್ಲಿಯೇ ನಡೆಯಬೇಕಿದ್ದ ಗಣತಿಯನ್ನು ಇನ್ನೂ 23 ತಿಂಗಳು ಮುಂದೂಡುವುದಕ್ಕೆ ಕಾರಣವಿಲ್ಲ. ಮೋದಿ ಸರ್ಕಾರಕ್ಕೆ ಪತ್ರಿಕೆಗಳಲ್ಲಿ ತಲೆಬರಹ (ಹೆಡ್‌ಲೈನ್) ಬರುವಂತೆ ಮಾಡಿಕೊಳ್ಳಲು ಗೊತ್ತಿದೆಯಷ್ಟೆ, ಗಡುವಿನೊಳಗೆ (ಡೆಡ್‌ಲೈನ್) ಕೆಲಸ ಮಾಡುವುದು ಗೊತ್ತಿಲ್ಲ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ರಾಹುಲ್ ಗಾಂಧಿ ಅವರ ‘ನರೇಂದರ್ ಸರೆಂಡರ್’ ಹೇಳಿಕೆಗೆ ಪ್ರತಿಕ್ರಿಯೆ

ಕಾಂಗ್ರೆಸ್ – ಬಿಜೆಪಿ ವಾಕ್‌ಸಮರ

ನವದೆಹಲಿ (ಪಿಟಿಐ): ಭಾರತ – ಪಾಕಿಸ್ತಾನ ನಡುವಿನ ಸೇನಾ ಸಂಘರ್ಷದ ವೇಳೆ ಅಮೆರಿಕದಿಂದ ದೂರವಾಣಿ ಕರೆ ಬಂದ ಬೆನ್ನಲ್ಲೇ ಪ್ರಧಾನಿ ಮೋದಿ ಅವರು ಶರಣಾದರು (ನರೇಂದರ್ ಸರೆಂಡರ್) ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೀಡಿದ್ದ ಹೇಳಿಕೆ ಕುರಿತು ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ. ರಾಹುಲ್ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಕಾಂಗ್ರೆಸ್, ಬಿಜೆಪಿಯನ್ನು ಟೀಕಿಸಿದೆ. ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಹಾಗೂ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಬುಧವಾರ ಪ್ರತ್ಯೇಕವಾಗಿ ಸುದ್ದಿಗೋಷ್ಠಿ ನಡೆಸಿ ವಾಕ್ ಸಮರ ನಡೆಸಿದರು. ಅದರ ಪ್ರಮುಖಾಂಶಗಳು ಇಲ್ಲಿವೆ...

ಬಿಜೆಪಿ ವಾಗ್ದಾಳಿ

- ‘ಮೋದಿ ಶರಣಾಗಿದ್ದಾರೆ’ ಎಂದು ಹೇಳುವ ಮೂಲಕ ರಾಹುಲ್ ಗಾಂಧಿ ದೇಶದ ಸಶಸ್ತ್ರ ಪಡೆಗಳನ್ನು ಅವಮಾನಿಸಿದ್ದಾರೆ. ಈ ಮೂಲಕ ಅವರು ‘ಆಪರೇಷನ್ ಸಿಂಧೂರ’ದ ಯಶಸ್ಸನ್ನು ದುರ್ಬಲಗೊಳಿಸಿರುವುದರ ಜತೆಗೆ, ನೆರೆಯ ಪಾಕಿಸ್ತಾನವೂ ಮಾಡದ ಆರೋಪಗಳನ್ನು ಮಾಡಿದ್ದಾರೆ
- ರಾಹುಲ್ ಅವರ ಈ ಟೀಕೆಗಳು ಅವರ ಅನಾರೋಗ್ಯಕರ ಮತ್ತು ಅಪಾಯಕಾರಿ ಮನಃಸ್ಥಿತಿಯನ್ನು ಬಿಂಬಿಸುತ್ತವೆ. ಅವರು ಪಾಕಿಸ್ತಾನದ ಸೇನಾ ಮುಖ್ಯಸ್ಥ, ಅಲ್ಲಿನ ಪ್ರಧಾನಿ ಮತ್ತು ಭಯೋತ್ಪಾದಕ ಸೂತ್ರಧಾರರನ್ನೂ ಮೀರಿಸಿದ್ದಾರೆ
- ವಿಭಜನೆ ಬಳಿಕ ಚೀನಾ ಮತ್ತು ಪಾಕಿಸ್ತಾನಗಳು ಭಾರತದ ಭೂ ಪ್ರದೇಶದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿವೆ. ಇತಿಹಾಸವು ನೆಹರೂ– ಗಾಂಧಿ ಕುಟುಂಬದ ಶರಣಾಗತಿಗಳಿಂದಲೇ ತುಂಬಿದೆ. ಆದರೆ ಪ್ರಧಾನಿ ಮೋದಿ ಅವರು ‘ಭಾರತ ಮಾತೆಯ ಸಿಂಹ’
- ರಾಹುಲ್ ಮತ್ತು ಕಾಂಗ್ರೆಸ್ ಶರಣಾಗತಿಯ ಇತಿಹಾಸವನ್ನು ಹೊಂದಿರಬಹುದು. ಆದರೆ ಭಾರತ ಯಾರ ಮುಂದೆಯೂ ಶರಣಾಗುವುದಿಲ್ಲ
- ವಿರೋಧ ಪಕ್ಷಗಳ ಮೈತ್ರಿಯಲ್ಲಿ ‘ಇಂಡಿಯಾ’ ಹೆಸರಿರಬಹುದು, ಆದರೆ ಅವರ ಹೃದಯದಲ್ಲಿ ಇರುವುದು ಪಾಕಿಸ್ತಾನ

> ರಾಹುಲ್ ಅವರ ಹೇಳಿಕೆಯು ದೇಶದ್ರೋಹಕ್ಕಿಂತ ಕಡಿಮೆಯೇನಲ್ಲ. ಶರಣಾಗತಿ ಎಂಬುದು ಕಾಂಗ್ರೆಸ್ ಪಕ್ಷದ ನಿಘಂಟು ಮತ್ತು ಡಿಎನ್‌ಎನಲ್ಲಿಯೇ ಇದೆ. ನೀವು ಭಯೋತ್ಪಾದನೆಗೆ ಶರಣಾಗಿದ್ದೀರಿ, ಶರ್ಮ್-ಅಲ್-ಶೇಖ್‌ಗೆ ಶರಣಾಗಿದ್ದೀರಿ, 1971ರ ಯುದ್ಧ ಗೆದ್ದ ನಂತರ ಶಿಮ್ಲಾದ ಮೇಜಿನ ಬಳಿ ಶರಣಾಗಿದ್ದೀರಿ, ದೇಶದ ಸ್ವಾತಂತ್ರ್ಯದ ಸಮಯದಲ್ಲಿ ಮುಸ್ಲಿಂ ಲೀಗ್‌ಗೆ ಶರಣಾಗಿದ್ದೀರಿ
> **ಜೆ.ಪಿ. ನಡ್ಡಾ,** ಬಿಜೆಪಿ ಅಧ್ಯಕ್ಷ

ಕಾಂಗ್ರೆಸ್ ಪ್ರತಿ ವಾಗ್ದಾಳಿ

- ನರೇಂದ್ರ ಮೋದಿ ಎಂದರೆ ಭಾರತ ಮತ್ತು ಭಾರತ ಎಂದರೆ ನರೇಂದ್ರ ಮೋದಿ ಎಂಬುದು ಬಿಜೆಪಿಯ ತಪ್ಪು ತಿಳಿವಳಿಕೆ. ಮೋದಿ ಅವರು ಪ್ರಧಾನಿಯಾಗಿ ಚತುರತೆಯಿಂದ ಮತ್ತು ‘ವಿಶ್ವಗುರು’ವಾಗಿ ಹೇಗೆ ರಾಷ್ಟ್ರೀಯ ಹಿತಾಸಕ್ತಿ ವಿಚಾರಗಳಲ್ಲಿ ಪದೇ ಪದೇ ಶರಣಾಗಿದ್ದಾರೆ ಎಂಬುದನ್ನು ರಾಹುಲ್ ಅವರ ‘ನರೇಂದರ್ ಸರೆಂಡರ್’ ಹೇಳಿಕೆ ಒಳಗೊಂಡಿದೆ
- ಬಿಜೆಪಿ ಮತ್ತು ಆರ್‌ಎಸ್‌ಎಸ್ ಜನರ ಇತಿಹಾಸವೇ ಹೇಡಿತನದಿಂದ ಕೂಡಿದೆ.
- ಶೌರ್ಯದಿಂದ ಹೋರಾಡಿದ ಭಾರತೀಯ ಸೇನೆಯು ಪಾಕಿಸ್ತಾನವನ್ನು ಮಂಡಿಯೂರುವಂತೆ ಮಾಡಿತ್ತು, ಆದರೆ ಟ್ರಂಪ್ ಕರೆ ಬಂದ ಕೂಡಲೇ ಮೋದಿ ಶರಣಾದರು. ‘ವ್ಯಾಪಾರದ ವಿಷಯವನ್ನು ಪ್ರಸ್ತಾಪಿಸಿ ಕದನ ವಿರಾಮ ಮಾಡಿಸಿದ್ದೇನೆ’ ಎಂದು ಟ್ರಂಪ್ ಈಗಾಗಲೇ ಹಲವು ಸಾರಿ ಹೇಳಿದ್ದಾರೆ. ಇದಕ್ಕೆ ಮೋದಿ ಕಡೆಯಿಂದ ಇಲ್ಲಿಯವರೆಗೂ ಉತ್ತರ ಬಂದಿಲ್ಲ. ಅವರು ಉತ್ತರಿಸುವುದೂ ಇಲ್ಲ. ಏಕೆಂದರೆ ಅವರ ಕೆಲಸವೇ ಶರಣಾಗುವುದಾಗಿದೆ
- ನರೇಂದ್ರ ಮೋದಿ ಅವರು ದೇಶದ ಪ್ರಧಾನಿ. ಪ್ರಧಾನಿಯಾದವರು ದೇಶದ ಸೇವಕರೂ ಹೌದು. ನಮ್ಮ ದೇಶಕ್ಕೆ ಜಂಬೂದ್ವೀಪ, ಹಿಂದೂಸ್ತಾನ, ಭಾರತ, ಇಂಡಿಯಾ ಎಂದೆಲ್ಲ ಹೆಸರುಗಳಿವೆಯೇ ಹೊರತು, ನರೇಂದ್ರ ಮೋದಿ ಎಂಬ ಹೆಸರಿಲ್ಲ
- 11 ವರ್ಷಗಳಲ್ಲಿ ಪ್ರತಿ ಬಾರಿಯೂ ಮೋದಿ ಶರಣಾಗಿದ್ದಾರೆ. ಕಪ್ಪು ಹಣವನ್ನು ಹಿಂದಕ್ಕೆ ತರುವಲ್ಲಿ, ನಿರುದ್ಯೋಗ ಸಮಸ್ಯೆ ನಿವಾರಿಸುವಲ್ಲಿ, ರೈತರ ಆದಾಯ ದುಪ್ಪಟ್ಟು ಹೆಚ್ಚಿಸುವ ವಿಷಯಗಳಲ್ಲಿ ಮೋದಿ ಶರಣಾಗಿದ್ದಾರೆ
- ಅಲ್ಲದೆ ಚೀನಾಗೆ ದಿಟ್ಟ ಉತ್ತರ ನೀಡುವಲ್ಲಿಯೂ ಮೋದಿ ವಿಫಲರಾಗಿ ಶರಣಾಗಿದ್ದಾರೆ. ಅವರೇಕೆ ಇಲ್ಲಿಯವರೆಗೂ ಚೀನಾದಿಂದ ಸರಕುಗಳನ್ನು ಖರೀದಿಸುವುದಿಲ್ಲ ಎಂಬ ನೀತಿಯನ್ನು ತಂದಿಲ್ಲ

ಗೂಢಚಾರಿಕೆ ಯೂಟ್ಯೂಬರ್ ಬಂಧನ

ಚಂಡೀಗಢ (ಪಿಟಿಐ): ಪಾಕಿಸ್ತಾನದ ಪರ ಗೂಢಚಾರಿಕೆ ಮಾಡುತ್ತಿದ್ದ ಮತ್ತು ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಜೊತೆ ಸಂಪರ್ಕದಲ್ಲಿದ್ದ ಪಂಜಾಬ್‌ನ ಯೂಟ್ಯೂಬರ್ ಜಸ್‌ಬಿರ್ ಸಿಂಗ್ ಅಲಿಯಾಸ್ ಜಾನ್ ಮಹಲ್‌ನನ್ನು (41) ಪೊಲೀಸರು ಬಂಧಿಸಿದ್ದಾರೆ.

ಪಾಕ್‌ನ ಗುಪ್ತಚರ ವಿಭಾಗ ಐಎಸ್‌ಐ ಮತ್ತು ಅಲ್ಲಿನ ಸೇನೆಯ ಅಧಿಕಾರಿಗಳ ಜೊತೆಗೆ ನಿಕಟ ಸಂಪರ್ಕದಲ್ಲಿ ಇರುವುದು ತನಿಖೆಯಲ್ಲಿ ದೃಢವಾದ ಬಳಿಕ ಆತನನ್ನು ಬಂಧಿಸಲಾಯಿತು ಎಂದು ಪಂಜಾಬ್‌ನ ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

ಜಸ್‌ಬಿರ್ ಸಿಂಗ್, ‘ಜಾನ್ ಮಹಲ್’ ಹೆಸರಿನಲ್ಲಿ ಯೂಟ್ಯೂಬ್ ವಿಡಿಯೊ ಚಾನಲ್ ನಡೆಸುತ್ತಿದ್ದು, ಈ ಚಾನಲ್‌ಗೆ 11 ಲಕ್ಷ ಚಂದಾದಾರರಿದ್ದಾರೆ. ಪ್ರವಾಸ ಮತ್ತು ಅಡುಗೆ ಸಂಬಂಧಿತ ವಿಡಿಯೊ ಪ್ರಸಾರ ಮಾಡುತ್ತಿದ್ದರು.

‘ಪಾಕಿಸ್ತಾನ ಗುಪ್ತಚರ ನಿರ್ವಾಹಕ (ಪಿಐಒ) ಶಕೀರ್ ಅಲಿಯಾಸ್ ಜಾಟ್ ರಾಂಧವ ಜೊತೆಗೆ ಈತ ಸಂಪರ್ಕ-ದಲ್ಲಿದ್ದು, ಪಾಕ್ ಪರ ಗೂಢಚಾರಿಕೆ ಮಾಡುತ್ತಿದ್ದ. 2020, 2021, 2024ರಲ್ಲಿ ಪಾಕ್‌ಗೆ ಭೇಟಿ ನೀಡಿದ್ದು, ಐಎಸ್‌ಐ ಅಧಿಕಾರಿಗಳ ಜೊತೆಗೆ ಸಂಪರ್ಕದಲ್ಲಿದ್ದ. ಜ್ಯೋತಿ ಬಂಧನದ ಬಳಿಕ ತನ್ನ ಪಾಕ್ ಸಂಪರ್ಕಕ್ಕೆ ಸಂಬಂಧಿಸಿದ ವಿವರಗಳನ್ನು ಅಳಿಸಿಹಾಕಲು ಪ್ರಯತ್ನಿಸಿದ್ದ’ ಎಂದರು.

ಜ್ಯೋತಿ ಮತ್ತು ಸಿಂಗ್ 2024ರಲ್ಲಿ ಪಾಕ್ ರಾಯಭಾರ ಕಚೇರಿ ಅಧಿಕಾರಿಗಳು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪರಿಚಿತರಾಗಿದ್ದು, ಪರಸ್ಪರ ಸಂಪರ್ಕಕ್ಕೆ ಬಂದಿದ್ದರು. ಸಿಂಗ್‌ನನ್ನು ಮೂರು ದಿನ ಅವಧಿಗೆ ಪೊಲೀಸ್ ವಶಕ್ಕೆ ನೀಡಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ವಂದೇ ಭಾರತ್ ಮತ್ತು ಎಕ್ಸ್‌ಪ್ರೆಸ್ ರೈಲಿನ ಎಂಜಿನ್‌ಗಳಲ್ಲಿ ಶ್ರೀರಾಮನ ಬೃಹತ್ ಚಿತ್ರವನ್ನು ಬಿಡಿಸಿರುವ ಎರಡು ಫೋಟೊಗಳ ಕೊಲಾಜ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಹಂಚಿಕೊಳ್ಳುತ್ತಿದ್ದಾರೆ. ಎಂಜಿನ್‌ಗಳಿಗೆ ಕೇಸರಿ ಬಣ್ಣ ಬಳಿದು, ಅದರ ಮೇಲೆ ಶ್ರೀರಾಮನ ಚಿತ್ರ ಬಿಡಿಸಲಾಗಿದೆ. ‘ಶ್ರೀರ್’, ‘ಶ್ರೀ ರಾಮ್’ ಎಂದು ಬರೆಯುವುದರ ಜೊತೆಗೆ ತ್ರಿವರ್ಣದ ಧ್ವಜವನ್ನೂ ಬಿಡಿಸಿರುವುದು ಕೊಲಾಜ್ ಚಿತ್ರದಲ್ಲಿ ಕಾಣಿಸುತ್ತಿದೆ. ಆದರೆ, ಇದು ನಿಜವಲ್ಲ.




ಚಿತ್ರವನ್ನು ಸ್ಕ್ಯಾನ್ ಮಾಡಿ ಪರಿಶೀಲಿಸಿದಾಗ ಅದರಲ್ಲಿ @ ದಿ ರೇಲ್ ಪೈಲಟ್ ಎಂಬ ವಾಟರ್ ಮಾರ್ಕ್ ಇರುವುದು ಕಂಡು ಬಂತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಅದೇ ಹೆಸರಿನಲ್ಲಿರುವ ಇನ್‌ಸ್ಟಾಗ್ರಾಂ ಖಾತೆ ಕಂಡು ಬಂತು. ಅದರಲ್ಲಿ ಮಾಡಲಾದ ಪೋಸ್ಟ್‌ಗಳನ್ನು ಪರಿಶೀಲಿಸಿದಾಗ ಈಗ ಹಂಚಿಕೊಳ್ಳಲಾಗುತ್ತಿರುವ ಚಿತ್ರ ಸಿಕ್ಕಿತು. ಈ ಚಿತ್ರಗಳನ್ನು ಕೃತಕ ಬುದ್ಧಮತ್ತೆ ತಂತ್ರಜ್ಞಾನದಲ್ಲಿ ಸೃಷ್ಟಿಸಲಾಗಿದೆ ಎಂಬ ಒಕ್ಕಣೆಯೂ ಅದರ ಶೀರ್ಷಿಕೆಯಲ್ಲಿತ್ತು. ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಚಿತ್ರಗಳನ್ನು ಎಐ ಚಿತ್ರಗಳನ್ನು ಪತ್ತೆ ಹಚ್ಚುವ ಹೈವ್ ಮಾಡರೇಷನ್ ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅವುಗಳು ಎಐ ಚಿತ್ರ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಪೊರೆವ ಜೀವವೇ ಶರಣು

ನುಡಿ ಬೆಳಗು



ಪಿ.ಚಂದ್ರಿಕಾ

ನಮ್ಮ ಬೀದಿಗೆ ಕಸ ತೆಗೆದುಕೊಂಡು ಹೋಗಲು ಬರುವ ಪೌರ ಕಾರ್ಮಿಕಳಾದ ಜಯಮ್ಮ ಒಣ ಕಸ ಹಸಿ ಕಸವನ್ನು ಬೇರೆ ಮಾಡಿ ಹಾಕುವಂತೆ ಎಷ್ಟು ಹೇಳಿದರೂ ಕೆಲವರು ಮಾತ್ರ ಕೇಳುವುದೇ ಇಲ್ಲ. ಮೊನ್ನೆ ಒಬ್ಬ ಹೆಂಗಸು ಕೊಳೆತು ಹುಳ ಬಂದಿದ್ದ ಆಹಾರದ ದೊಡ್ಡ ಕವರನ್ನು ತಂದು ಹಾಕಿದಳು. ಅದರಲ್ಲಿ ಬರಿಯ ಹಸಿ ಕಸ ಮಾತ್ರ ಇರಲಿಲ್ಲ. ಬದಲಿಗೆ ಪ್ಲಾಸ್ಟಿಕ್ ಕವರ್, ತಿಂದು ಎಸೆದ ಪ್ಲಾಸ್ಟಿಕ್ ಸ್ಪೂನು, ಮಾತ್ರೆಯ ಉಳಿಕೆ, ಸ್ಯಾನಿಟರಿ ಪ್ಯಾಡ್‌ಗಳು... ಹೀಗೆ ಏನೇನೋ ಇದ್ದವು. ಜಯಮ್ಮ, ‘ಇದನ್ನೆಲ್ಲಾ ಒಟ್ಟಿಗೆ ತಂದು ಹಾಕಿದರೆ ನಾನು ಪ್ರತ್ಯೇಕಿಸುವುದು ಹೇಗೆ’ ಎಂದು ಕೇಳಿದಳು. ಅದಕ್ಕೆ ಆ ಹೆಂಗಸು, ‘ನಿನ್ನ ಕೆಲಸ ಏನಿದೆಯೋ ಅದನ್ನು ಮಾಡು. ಗಾಡಿಗೆ ತಂದು ಹಾಕುವುದಷ್ಟೇ ನನ್ನ ಕೆಲಸ’ ಎಂದು ಜಗಳ ಮಾಡಿದಳು. ‘ಹುಳ ಬರುವ ತನಕ ಇಟ್ಟು ಈಗ ತಂದು ಹಾಕ್ತೀಯಲ್ಲಾ? ಇದನ್ನೆಲ್ಲ ಒಟ್ಟಿಗೆ ಹಾಕಿದರೆ ನನಗೆ ಬೈತಾರೆ. ಲಾರಿಗೆ ಹಾಕಿಸಿಕೊಳ್ಳುವುದಿಲ್ಲ. ಇದನ್ನು ನಾನು ಕೈಯಿಂದ ಸಪರೇಟ್ ಮಾಡಬೇಕಾಗುತ್ತೆ. ಊಟ ಮಾಡುವಾಗ ಕೈ ವಾಸನೆ ಬರುತ್ತೆ. ನಮಗೂ ಅಸಹ್ಯ ಅನ್ನಿಸಲ್ಲವಾ’ ಎಂದು ಪ್ರಶ್ನಿಸಿದ್ದಕ್ಕೆ, ‘ನೀನು ಪಡಕೊಂಡು ಬಂದಿದ್ದು ಇದು. ನೀನು ಮಾಡು, ನನಗ್ಯಾಕೆ ಹೇಳುತ್ತೀಯ’ ಎಂದು ಹೆಂಗಸು ತನ್ನ ಪಾಡಿಗೆ ತಾನು ಗಾಡಿಗೆ ಕಸಹಾಕಿ ಹೊರಟಳು.

ಜಯಮ್ಮನ ಕಣ್ಣಲ್ಲಿ ಕೋಪ ದುಃಖಗಳೆರಡು ಇದ್ದವು. ‘ನಾಳೆಯಿಂದ ಹೀಗೆ ಮಾಡಿದರೆ ಕಸ ಹಾಕಿಸಿಕೊಳ್ಳುವುದಿಲ್ಲ’ ಎಂದಾಗ `ಹೌದಾ! ಹಾಕಿಸಿಕೊಳ್ಳಲ್ವಾ? ಕಂಪ್ಲೇಂಟ್ ಮಾಡ್ತೀನಿ, ನಾಳೆಯಿಂದ ಈ ರಸ್ತೆಗೆ ನೀನು ಬರಲೇಬೇಡ’ ಎಂದು ಬೈಯುತ್ತಾ ಹೊರಟುಹೋದಳು. ಬಲಗೈಗೆ ಹಾಕಿದ್ದ ಗ್ಲೌವ್ ತೆಗೆದು ಮೂಗನ್ನು ಮುಚ್ಚಿಕೊಂಡು ಎಡಗೈಯಿಂದ ಕವರ್‌ನಲ್ಲಿ ಇದ್ದದ್ದನ್ನು ತೆಗೆದು ಆಕೆ ಪ್ರತ್ಯೇಕಿಸುವಾಗ ನನಗೆ ಖೇದವೆನ್ನಿಸಿತು. ಸಂಕಟ ಎನ್ನಿಸಿ, ‘ಒಂದು ಕಂಪ್ಲೇಂಟ್ ಕೊಡು’ ಎಂದೆ. ಅದಕ್ಕೆ ಜಯಮ್ಮ, ‘ಅವಳು ಬುದ್ಧಿ ಇಲ್ಲದೆ ಮಾತಾಡಿದಳು ಬಿಡಮ್ಮ, ನನಗೆ ಹೊಟ್ಟೆ ಪಾಡು. ಜಗಳ ಅಂತ ಹೋದ್ರೆ ಕೆಲಸ ಮಾಡೋಕ್ಕಾಗಲ್ಲ. ಇವತ್ತು ಈ ರಸ್ತೆ, ನಾಳೆ ಇನ್ನೊಂದು ರಸ್ತೆ. ಮನೇಲಿ ಮಕ್ಕಳ ಹೊಟ್ಟೆ ನೋಡೋರ್‍ಯಾರು’ ಎಂದಳು.

ಊರಿನ ಎಲ್ಲರ ಮನೆಯ ಕಸವನ್ನು ಬೇರೆ ಮಾಡುವ ಇಂಥ ಪೌರಕಾರ್ಮಿಕರ ಕೆಲಸಕ್ಕೆ ನಾವ್ಯಾಕೆ ಗೌರವ ಕೊಡುವುದಿಲ್ಲ? ಅವರನ್ನು ಮನುಷ್ಯರು ಎನ್ನುವ ಕನಿಷ್ಠ ಪ್ರಜ್ಞೆಯಿಂದಲೂ ಮಾತಾಡಿಸುವುದಿಲ್ಲ. ನಮ್ಮ ಮನೆಯ ಕಸವನ್ನು ತೆಗೆಯಲೂ ನಮಗೆ ಅಸಹ್ಯವಾಗುತ್ತೆ. ಎಲ್ಲರ ಮನೆಗಳ ಕಸ ತೆಗೆದುಕೊಂಡು ಹೋಗುವವರ ಮನಃಸ್ಥಿತಿ ಹೇಗಿರುತ್ತೆ ಎಂದು ಎಂದಾದರೂ ಯೋಚಿಸಿದ್ದೇವಾ? ಇಂಥ ಪೌರಕಾರ್ಮಿಕರನ್ನು ಮಾತನಾಡಿಸಿದ ಅನುಭವವನ್ನು ದೇವನೂರ ಮಹದೇವ ಬರೆಯುತ್ತಾರೆ. ಈ ಕೆಲಸದ ಬಗ್ಗೆ ಪೌರಕಾರ್ಮಿಕ ‘ನನ್ನ ಮಕ್ಕಳದ್ದು ಎಂದುಕೊಳ್ಳುತ್ತೇನೆ’ ಎನ್ನುತ್ತಾನೆ. ಅವನ ಕಾಲಿಗೆ ಎರಗಬೇಕಲ್ಲವೇ? ನಾವು ಅವರನ್ನು ನಮ್ಮ ಬಂಧು ಎಂದು ಅಂದುಕೊಳ್ಳದಿದ್ದರೆ ಮನುಷ್ಯತ್ವಕ್ಕೆ ಬೆಲೆ ಎಲ್ಲಿದೆ? ಜಯಮ್ಮನಂಥ ಜೀವಗಳು ಅತ್ಯಂತ ತಾಳ್ಮೆಯಿಂದ ನಮ್ಮನ್ನು ಪೊರೆಯುತ್ತಲೇ ಇರುತ್ತವೆ. ನಾವು ಋಣಿಗಳಾಗಬೇಕಲ್ಲವೇ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜೂನ್ 5, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದಶಮಿ ಗಂ. 26-17 ನಕ್ಷತ್ರ: ಹಸ್ತ ಅಹೋರಾತ್ರ ಯೋಗ: ಸಿದ್ಧಿ (ಆಸ್ರಿಕ್) ಗಂ. 9-14 ಕರಣ: ತೈತಿಲ ಗಂ. 13-04, ವೃಷಭ ಮಾಸದ 22 ನೇ ದಿನ.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-06 ಸೂರ್ಯಾಸ್ತ : 06-52

ಮುಸ್ಲಿಂ ದಿನಾಂಕ : 08 ಜುಲ್‌ಹಿಜಾ , ಮಳೆ ನಕ್ಷತ್ರ: ರೋಹಿಣಿ ನಾಲ್ಕನೇ ಪಾದ.

ದಿನ ವಿಶೇಷ : ಗಂಗಾ ದಶಹರ, ಅದೃಷ್ಟ ಸಂಖ್ಯೆ : 2, 9

ಮೇಷ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆ-ಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಎಲ್ಲ ಕೆಲಸಗಳು ಸಂಪೂರ್ಣಗೊಂಡು ವಿಪುಲ ಆದಾಯ ಪಡೆದುಕೊಳ್ಳುವಿರಿ.

ವೃಷಭ: ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುವುದು. ದಿನವಿಡೀ ಸಮಾಧಾನ ಇರುವುದು. ಕೆಟ್ಟ ಹವ್ಯಾಸ ಬಾಧಿಸದಂತೆ ಎಚ್ಚರವಹಿಸಿ. ಆದಾಯ ವೆಚ್ಚಗಳು ಸರಿ ಸಮವಾಗಿರುವುದು.

ಮಿಥುನ: ಭವಿಷ್ಯದ ಯೋಜನೆಗಳಿಗೆ ಗಮನ ಕೊಡುವಿರಿ. ಸಾಲದ ಹಣ ಹಿಂತಿರುಗಿ ಬರುವುದು. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸಿ. ಅನವಶ್ಯಕ ವಿವಾದಗಳಿಂದ ದೂರ ಉಳಿದು ಕೆಲಸ ಪೂರ್ತಿ ಮಾಡಿರಿ.

ಕರ್ಕಾಟಕ: ರಾಜಕೀಯ ವರ್ಗದವರಿಗೆ ಶತ್ರುಪೀಡೆ ಕಂಡುಬರಲಿದೆ. ಸಂಪಾದನೆಯಲ್ಲಿ ಕಡಿಮೆಯಿದ್ದರೂ ಆರ್ಥಿಕವಾಗಿ ಚಿಂತೆ ಇರದು. ಕೃಷಿಕರಿಗೆ ಕೃಷಿಯಲ್ಲಿ ಕಾದು ನೋಡುವ ತೀರ್ಮಾನ ಒಳ್ಳೆಯದು. ಪ್ರಯತ್ನಬಲ ಇರಲಿ.

ಸಿಂಹ: ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವೂ ಕ್ಷಣಿಕ. ಧ್ಯೇಯವನ್ನು ತಲುಪುವ ಹಾದಿಯಲ್ಲಿ ಬಾಲ್ಯಸ್ನೇಹಿತರ ಸಹಕಾರ ದೊರೆಯಲಿದೆ.

ಕನ್ಯಾ: ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಸ್ವಾದಿಷ್ಟ ಭೋಜನದಿಂದ ತೊಂದರೆ ತರಬಹುದು. ಗಂಡನ ಹಣಕಾಸಿನ ಪರಿಸ್ಥಿತಿಗೆ ಸಹಕರಿಸಿ.

ತುಲಾ: ಉನ್ನತ ಅಧಿಕಾರಿಗಳನ್ನು ಕಾಣಲು ದಿನವಿಡೀ ಓಡಾಟ ನಡೆಸುವಿರಿ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆಗಳು ಅನುಭವಕ್ಕೆ ಬಂದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ. ಮಹಾವಿಷ್ಣುವಿನ ಸೇವೆಯಿಂದ ದೈವಾನುಕೂಲ.

ವೃಶ್ಚಿಕ: ಉತ್ತಮ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಬೇಡ. ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾ-ಗುವಿರಿ. ಪರಿಣತರಿಗೆ ಶಿಕ್ಷಣ ವೃತ್ತಿ ದೊರೆಯುವ ಸಂಭವವಿದೆ.

ಧನು: ಸಾಂಸಾರಿಕ ವಿಷಯದಲ್ಲಿ ಆರಿಸಿಕೊಳ್ಳುವ ನಿರ್ಧಾರಗಳು ಹಿರಿಯರ ಕೋಪಕ್ಕೆ ಕಾರಣವಾಗುತ್ತದೆ. ವೃತ್ತಿಪರ ಸಂಚಾರವು ಇರುವುದರಿಂದ ಕಾಲಕ್ಕೆ ಸರಿಯಾಗಿ ಆಹಾರ ಸೇವನೆ ಮಾಡಲು ಅಡ್ಡಿ ಉಂಟಾಗಬಹುದು.

ಮಕರ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜತೆಯಲ್ಲಿ ವಿದೇಶದಲ್ಲಿ ಕೆಲಸ ಮಾಡುವ ಅವಕಾಶ ಸಿಗಬಹುದು. ಯಾವುದೇ ಜವಾಬ್ದಾರಿಯುತ ಕೆಲಸವನ್ನು ಯೋಚಿಸದೇ, ಅವಸರದಲ್ಲಿ ಒಪ್ಪಿಕೊಳ್ಳಬೇಡಿ.

ಕುಂಭ: ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಪರಿಸ್ಥಿತಿ ಸುಲಭವಾಗಿ ಇರುವುದಿಲ್ಲ. ಎದುರಾಗುವ ಸ್ಪರ್ಧೆಯಲ್ಲಿ ಪ್ರಮುಖ ಸ್ಥಾನ ಪಡೆಯಲು ತಯಾರಿ ಜತೆಗೆ ದೇವತಾನುಗ್ರಹ ಪಡೆದುಕೊಳ್ಳಿರಿ.

ಮೀನ: ಜೀವನದ ಕಷ್ಟ ಸುಖಗಳು ತಿರುಗುವ ಚಕ್ರದಂತಿರುವುದರಿಂದ ಒಳ್ಳೆಯ ದಿನಗಳು ಜೀವನದಲ್ಲಿದೆ ಎಂಬ ಆಶಾ ಭಾವನೆಯನ್ನು ಮರೆಯದಿರಿ. ಮನೆಯಲ್ಲಿ ಮಕ್ಕಳ ಒಡನಾಟದಿಂದಾಗಿ ಮನಸ್ಸಿಗೆ ಸಂತೋಷವಾಗುವುದು.

ಪದಬಂಧ 6064

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ವೇಷ ಹಾಕಿಕೊಂಡು ನೋಡಿದ ಜಾಗ (4)
3.ಇನ್ನೂ ಬಲಿಯದಿರುವ ಕಾಯಿ (4)
5.ಚಕ ಚಕನೆ ಓದುತ್ತಿರುವವನು (3)
6.ಪದಾತಿಯಲ್ಲಿ ಕಾಣುತ್ತಿರುವ ಗಂಡ (2)
8.ವಠಾದವರು ಮಾಡಿದ ಒತ್ತಾಯ (3)
10.ಕೆಲವರು ಮಾಡುವ ಕಾರ್ಯ (3)
13.ಹಮ್ಮೀರನಿಗೊಲಿದ ಶಿವ (2)
15.ಕಾಲದಲ್ಲೇ ಭೇಟಿ ಮಾಡಿರುವ ಪ್ರಿಯಕರ! (3)
16.ಮರೀಚಿಕೆ ಇಲ್ಲಿ ಕಾಣುತ್ತಿದೆ (4)
17.ರಾಜನ ಗೃಹವಲ್ಲ! ಜೈಲು! (4)

ಮೇಲಿಂದ ಕೆಳಕ್ಕೆ

1.ಹುದುಗಿಟ್ಟ ಧನ (3)
2.ಈತ ಮುಸಲ್ಮಾನ ದೊರೆ (3)
3.ಪೆದ್ದನಿಲ್ಲಿದ್ದಾನೆ (3)
7.ಅರಿವು ಹೀಗೆ ಬಂದಿದೆ (5)
9.ಶೀರೋನಾಮೆಯಿದು (5)
11.ಸರಿಯಾದ ಸಮಯ (3)
12.ವಲಯದಿಂದ ಗುಳೆ ಹೋಗುವುದು (3)
14.ಸಾಗಿಸುವಿಕೆಗೊಂದು ಪರ್ಯಾಯ ಪದ (3)

1			2	■	3			4
	■	■	5			■	■	■
6	7	■		■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12	■	13	14
■	■	■	15			■	■	
16				■	17			

6063ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಧುಮಾಸ
3.ಅನುಭಾವ 5.ಬಡತನ
7.ಸಂಕ್ರಮಣ 9. ವನಪಾಲಕ
12.ಮದಕರಿ 13.ನವರಂಗ
15.ಸರಹದ್ದು 16.ಪರಿಚಿತ

ಮೇಲಿಂದ ಕೆಳಕ್ಕೆ:
1.ಮನೋಬ 2.ಮಾವುತ
4.ವರುಣ 6.ನವೀನ
8.ಕ್ರಮುಕ 9.ವರ್ತಕ
10.ಲಶುನ 11.ಅಂಗಜಾತ
12.ಮಟ್ಟಸ 14.ವೈಯಾರಿ

ಸುಡೊಕು 6448

		3		6				2
	4						5	
	1			5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6447 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,542
ಇಂದಿನ ಅಂತ್ಯ	24,620
▲	77
ದಿನದ ಗರಿಷ್ಠ	24,644

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1350 (1350)
ಸೋಯಾ (ರಿಫೈನ್ಡ್)	₹1190 (1190)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೋಲೀನ್	₹1160 (1160)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹179

(ಪ್ರತಿ ಕೆಜಿಗೆ)

ವಿನಿಮಯ ದರ

$	ಡಾಲರ್	85.87
£	ಪೌಂಡ್	116.26
€	ಯುರೊ	97.77
¥	ಯೆನ್ (100ಕ್ಕೆ)	60

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಹೊಸ	26000-49500	ಸಿದ್ದಾಪುರ	
ಚಾಲಿ	39089-43598	ಶಿವಮೊಗ್ಗ		ಕೆಂಪುಗೋಟು	19600-29100
ಕೋಕ	7019-22099	ಬೆಟ್ಟೆ	53572-58600	ರಾಶಿ	42009-46499
ಫ್ಯಾಕ್ಟರಿ	6099-26129	ಗೊರಬಲು	17009-31689	ತಟ್ಟಿಬೆಟ್ಟೆ	28900-39309
ಹೊಸಚಾಲಿ	35999-44769	ರಾಶಿ	47099-58511	ಬಿಳೆಗೋಟು	25000-31200
ಪುತ್ತೂರು		ಸರಕು	60000-91240	ಚಾಲಿ	34109-41599
ಕೋಕ	21000-31500			ಕೋಕ	18289-27699

ಮುಂಬೈ ಧಾರಣೆ (ಶೇಂಗಾ)

04-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1360 (1360)
ಒಂದು ವಾರದ ಡೆಲಿವರಿ	1355 (1355)
ಪಾಮ್ ವಾರದ ಡೆಲಿವರಿ	1158 (1158)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿ)

ಚಿನ್ನ 10ಗ್ರಾಂ	₹96,250 (96,300)
ಬೆಳ್ಳಿ ಕೆಜಿ	₹1,01,000 (1,00,400)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕಿ.ಜಿ)	₹241-518
ದ್ವಿತಳಿ (ಕಿ.ಜಿ)	₹325-670

ಬೇಡಿಕೆ ಹೆಚ್ಚಳದಿಂದ ಸೂಚ್ಯಂಕ ಏರಿಕೆ: ಎಸ್ ಆ್ಯಂಡ್ ಪಿ ಸಮೀಕ್ಷೆ

ಸೇವಾ ವಲಯದಲ್ಲಿ ಅಲ್ಪ ಪ್ರಗತಿ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯವು ಮೇ ತಿಂಗಳಲ್ಲಿ ಅಲ್ಪ ಏರಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿಯು ಬುಧವಾರ ತಿಳಿಸಿದೆ.

ಏಪ್ರಿಲ್ ತಿಂಗಳಲ್ಲಿ ಸೂಚ್ಯಂಕವು 58.7 ಇತ್ತು. ಇದು ಮೇ ತಿಂಗಳಲ್ಲಿ 58.8 ಆಗಿದೆ. ಬೇಡಿಕೆಯ ಹೆಚ್ಚಳ, ಹೊಸ ಗ್ರಾಹಕರು ಸಿಗುತ್ತಿರುವುದು ಸೂಚ್ಯಂಕದ ಏರಿಕೆಗೆ ಕಾರಣವಾಗಿದೆ ಎಂದು ವರದಿಯು ತಿಳಿಸಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ಆಧಾರದ ಮೇಲೆ ಲೆಕ್ಕ ಹಾಕುವ ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಕುಸಿತ ಎಂದು ಪರಿಗಣಿಸಲಾಗುತ್ತದೆ.

'ಸೇವಾ ವಲಯದ ಚಟುವಟಿಕೆ ಸೂಚ್ಯಂಕವು ಮೇ ತಿಂಗಳಲ್ಲಿ 58.8ರಷ್ಟು ದಾಖಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿದ ಬೇಡಿಕೆಯಿಂದ ಸೂಚ್ಯಂಕವು ಏರಿಕೆ ಕಂಡಿದೆ. ಏಪ್ರಿಲ್‌ಗೆ ಹೋಲಿಸಿದರೆ ಮೇ ತಿಂಗಳಲ್ಲಿ ರಫ್ತು ಹೆಚ್ಚಳವಾಗಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ಜಪಾನ್, ಯುರೋಪ್ ಮತ್ತು ಉತ್ತರ ಅಮೆರಿಕದಿಂದ ರಫ್ತಿಗೆ ಬೇಡಿಕೆ ಉಂಟಾಗಿದೆ. ಹೆಚ್ಚಿದ ಬೇಡಿಕೆಯಿಂದ ದೇಶದ ಸೇವಾ ಪೂರೈಕೆದಾರರು ಹೆಚ್ಚಿನ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹260ರಷ್ಟು ಹೆಚ್ಚಳವಾಗಿ, ₹99,260ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಧಾರಣೆ (ಶೇ 99.5 ಪರಿಶುದ್ಧತೆ) ₹100 ಏರಿಕೆಯಾಗಿ, ₹98,700 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1,900 ಹೆಚ್ಚಳವಾಗಿ, ₹1.02 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಹಳದಿ ಲೋಹದ ದರ ಏರಿಕೆಯಾಗಿದೆ. ಹೀಗಾಗಿ ದೇಶದ ಮಾರುಕಟ್ಟೆಯಲ್ಲೂ ಚಿನ್ನದ ಬೆಲೆ ಹೆಚ್ಚಳವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೆನ್ಸೆಕ್ಸ್ 260 ಅಂಶ ಏರಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಖರೀದಿ ಹೆಚ್ಚಳದಿಂದ ಬುಧವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 260 ಅಂಶ ಏರಿಕೆಯಾಗಿ, 80,998ಕ್ಕೆ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 77 ಅಂಶ ಹೆಚ್ಚಳವಾಗಿ, 24,620ಕ್ಕೆ ಕೊನೆಗೊಂಡಿತು.

ಎಟರ್ನಲ್, ಭಾರ್ತಿ ಏರ್‌ಟೆಲ್, ಇಂಡಸ್‌ಇಂಡ್ ಬ್ಯಾಂಕ್, ಟೆಕ್ ಮಹೀಂದ್ರ, ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಮೋಟರ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಟಾಟಾ ಸ್ಟೀಲ್ ಮತ್ತು ಹಿಂದೂಸ್ತಾನ್ ಯುನಿಲಿವರ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬಜಾಜ್ ಫಿನ್‌ಸರ್ವ್, ಎಕ್ಸಿಸ್ ಬ್ಯಾಂಕ್, ಟಿಸಿಎಸ್, ಟೈಟನ್ ಮತ್ತು ಲಾರ್ಸನ್ ಆ್ಯಂಡ್ ಟೂಬ್ರೊ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ರೂಪಾಯಿ ಮೌಲ್ಯ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 26 ಪೈಸೆ ಇಳಿಕೆಯಾಗಿದೆ. ಡಾಲರ್ ಎದುರು ರೂಪಾಯಿ ಮೌಲ್ಯವು ₹85.87 ಆಗಿದೆ.

ವಿದೇಶಿ ಬಂಡವಾಳದ ಹೊರಹರಿವು, ಕಚ್ಚಾ ತೈಲ ಬೆಲೆ ಏರಿಕೆ ಮತ್ತು ರಷ್ಯಾ–ಉಕ್ರೇನ್ ನಡುವಿನ ಸಂಘರ್ಷದಿಂದ ರೂಪಾಯಿ ಮೌಲ್ಯ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಮಂಗಳವಾರದ ವಹಿವಾಟಿನಲ್ಲಿ ₹2,853 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಸುದ್ದಿ 2 ನಿಮಿಷ

ತೆರಿಗೆ ವರಮಾನದಲ್ಲಿ ಅರ್ಧ ಪಾಲು ಕೇಳುತ್ತಿರುವ ರಾಜ್ಯ: ಪನಗಢಿಯಾ

ಲಖನೌ (ಪಿಟಿಐ): ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೆರಿಗೆ ವರಮಾನವನ್ನು ಶೇಕಡ 50ರ ಪ್ರಮಾಣದಲ್ಲಿ ಹಂಚಿಕೊಳ್ಳುವಂತೆ ಆಗಬೇಕು ಎಂಬ ಅಭಿಪ್ರಾಯವನ್ನು ಬಹುತೇಕ ರಾಜ್ಯಗಳು ದಾಖಲಿಸಿವೆ ಎಂದು 16ನೇ ಹಣಕಾಸು ಆಯೋಗದ ಅಧ್ಯಕ್ಷ ಅರವಿಂದ ಪನಗಢಿಯಾ ತಿಳಿಸಿದ್ದಾರೆ.

ಈಗಿನ ವ್ಯವಸ್ಥೆಯಲ್ಲಿ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಶೇ 41ರಷ್ಟು ಪಾಲು ಸಿಗುತ್ತಿದೆ. ಇನ್ನುಳಿದ ಮೊತ್ತವು ಕೇಂದ್ರ ಸರ್ಕಾರಕ್ಕೆ ಸಿಗುತ್ತದೆ.

ಸಮಾಲೋಚನೆಯ ಭಾಗವಾಗಿ ಹಣಕಾಸು ಆಯೋಗವು ಎಲ್ಲ ರಾಜ್ಯಗಳಿಗೆ ಭೇಟಿ ನೀಡುತ್ತಿದೆ. ಆಯೋಗದ ಇತರ ಸದಸ್ಯರ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪನಗಢಿಯಾ ಅವರು 'ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಶೇ 41ರಷ್ಟು, ಕೇಂದ್ರಕ್ಕೆ ಶೇ 59ರಷ್ಟು ಪಾಲು ಸಿಗಬೇಕು ಎಂದು ಹಿಂದಿನ ಹಣಕಾಸು ಆಯೋಗವು ಹೇಳಿತ್ತು. ಅದೇ ಈಗ ಚಾಲ್ತಿಯಲ್ಲಿದೆ' ಎಂದು ತಿಳಿಸಿದರು.

ರಾಜ್ಯಗಳಿಗೆ ಸಿಗುವ ತೆರಿಗೆ ಪಾಲು ಶೇ 50ಕ್ಕೆ ಹೆಚ್ಚಬೇಕು ಎಂಬ ಬೇಡಿಕೆಯನ್ನು ಉತ್ತರ ಪ್ರದೇಶ ಸೇರಿದಂತೆ 22ಕ್ಕೂ ಹೆಚ್ಚು ರಾಜ್ಯಗಳು ಮಂಡಿಸಿವೆ ಎಂದು ಅವರು ಮಾಹಿತಿ ನೀಡಿದರು. ಆದರೆ, ಹಣಕಾಸು ಆಯೋಗವು ಇದನ್ನು ತನ್ನ ಶಿಫಾರಸಿನಲ್ಲಿ ಅಳವಡಿಸಲಿದೆಯೇ ಎಂಬ ಮಾಹಿತಿ ಒದಗಿಸಲು ಅವರು ನಿರಾಕರಿಸಿದರು.

ಹಣಕಾಸು ಆಯೋಗದ ಶಿಫಾರಸುಗಳನ್ನು ಅವು ಇರುವ ರೀತಿಯಲ್ಲೇ ಒಪ್ಪಿಕೊಳ್ಳುವ ಸಂಪ್ರದಾಯ ಬೆಳೆದುಬಂದಿದೆ ಎಂದು ಕೂಡ ಪನಗಢಿಯಾ ತಿಳಿಸಿದ್ದಾರೆ.



ತೆರಿಗೆ ವರಮಾನವನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಹಂಚಿಕೊಳ್ಳುವುದರ ಬಗ್ಗೆ ಆಯೋಗವು ಶಿಫಾರಸು ಸಲ್ಲಿಸಬೇಕಿದೆ. ಆಯೋಗವು ಅಕ್ಟೋಬರ್ 31ಕ್ಕೆ ಮೊದಲು ಶಿಫಾರಸು ಸಲ್ಲಿಸುವ ನಿರೀಕ್ಷೆ ಇದೆ.

ಮಹಿಳಾ ಉದ್ಯಮಿಗಳಿಗೆ ವಾಟ್ಸ್‌ಆ್ಯಪ್ ಮೂಲಕ ತರಬೇತಿ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಬ್ಯುಸಿನೆಸ್ ಆ್ಯಪ್ ಮೂಲಕ ದೇಶದ 25 ಸಾವಿರ ಮಹಿಳಾ ಉದ್ಯಮಿಗಳಿಗೆ ಡಿಜಿಟಲ್ ಕೌಶಲ ತರಬೇತಿ ನೀಡಲು ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ಮತ್ತು ಮೆಟಾ ಕಂಪನಿ ಯೋಜನೆ ಆರಂಭಿಸಿದೆ.

ಮೊದಲ ಹಂತವಾಗಿ 'ವ್ಯಾಪಾರ ಸಖಿ' ಯೋಜನೆಯು ಜೂನ್‌ನಿಂದ ನವೆಂಬರ್‌ವರೆಗೆ ಇರಲಿದೆ. ದೇಶದ ಹಲವು ಭಾಷೆಯಲ್ಲಿ ತರಬೇತಿ ನೀಡಲಿದೆ.

ಆನ್‌ಲೈನ್ ವ್ಯಾಪಾರದ ಬಗ್ಗೆ ಮಹಿಳಾ ಉದ್ಯಮಿಗಳಲ್ಲಿ ವಿಶ್ವಾಸಾರ್ಹತೆ ಮೂಡಿಸುವುದು, ಉತ್ಪನ್ನಗಳ ಪ್ರದರ್ಶನ, ಸ್ವಯಂಚಾಲಿತ ಸಂದೇಶಗಳು, ವಾಟ್ಸ್‌ಆ್ಯಪ್ ಮೂಲಕ ಜಾಹೀರಾತು ಪ್ರಸಾರದ ತರಬೇತಿಯನ್ನು ನೀಡುವ ಗುರಿ ಹೊಂದಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಳಗನಹಳ್ಳಿಯಲ್ಲಿ ಬೆಳೆದ ಮೆಕ್ಕೆಜೋಳ ಕೇರಳದ ರಾಸುಗಳಿಗೆ ಮೇವು

ಬಲಿಯದ ಮೆಕ್ಕೆಜೋಳ ಕೇರಳಕ್ಕೆ

• ರವಿಕುಮಾರ್

ಹಂಪಾಪುರ (ಮೈಸೂರು ಜಿಲ್ಲೆ): ಎಚ್. ಡಿ. ಕೋಟೆ ತಾಲ್ಲೂಕಿನಲ್ಲಿ ತಂಬಾಕು ಮತ್ತು ಹತ್ತಿಗೆ ಪರ್ಯಾಯವಾಗಿ ರೈತರು ಮೆಕ್ಕೆಜೋಳವನ್ನು ಬೆಳೆಯುತ್ತಿದ್ದು, ಬಲಿಯದ ಬೆಳೆಯನ್ನು ಮೇವಿನ ರೂಪದಲ್ಲಿ ನೆರೆಯ ಕೇರಳಕ್ಕೆ ಮಾರಾಟ ಮಾಡುವ ಮೂಲಕ ಉತ್ತಮ ಆದಾಯ ಗಳಿಸುತ್ತಿದ್ದಾರೆ.

ತಾಲ್ಲೂಕಿನ ಬೆಳಗನಹಳ್ಳಿ, ಹೊಸತೊರವಳ್ಳಿ, ಹಾರೋಪುರ, ಕೊಡಸೀಗೆ, ಮಗ್ಗೆ, ಅಂತರಸಂತೆ, ಹೆಗ್ಗನೂರು, ಮಾದಾಪುರ, ಚಿಕ್ಕೆರೆಯೂರು, ಹೊಸಹೊಳಲು ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗಿದೆ. ಬೆಳೆ ಬಲಿತು ಕಟಾವಿಗೆ ಬರಲು ಮೂರೂವರೆ ತಿಂಗಳು ಬೇಕು. ಆದರೆ ರೈತರು ಎರಡೂವರೆ ತಿಂಗಳ ಬೆಳೆಯನ್ನು ಕಟಾವು ಮಾಡಿ, ತೂಕದ ಲೆಕ್ಕದಲ್ಲಿ ಮಾರುತ್ತಿದ್ದಾರೆ. ಒಂದು ಟನ್ ಜೋಳಕ್ಕೆ ₹1,900ರಿಂದ ₹2,500 ಪಡೆಯುತ್ತಿದ್ದಾರೆ.

'ಒಂದು ಎಕರೆಯಲ್ಲಿ ಬೆಳೆಯಲು ₹8 ಸಾವಿರದವರೆಗೆ ಖರ್ಚಾಗುತ್ತದೆ. 19ರಿಂದ 20 ಟನ್ ಮೇವಿನ ಕಡ್ಡಿ ದೊರೆಯುತ್ತಿದ್ದು, ₹40 ಸಾವಿರದಿಂದ ₹45 ಸಾವಿರಕ್ಕೆ ಮಾರಾಟವಾಗುತ್ತಿದೆ. ಖರ್ಚು ಕಳೆದು ₹30 ಸಾವಿರದಿಂದ ₹35 ಸಾವಿರದವರೆಗೆ ಲಾಭ ದೊರೆಯುತ್ತಿದೆ' ಎನ್ನುತ್ತಾರೆ ಬೆಳಗನಹಳ್ಳಿ ರೈತರು.

'ಮೆಕ್ಕೆಜೋಳವನ್ನು ಪೂರ್ಣ ಪ್ರಮಾಣದಲ್ಲಿ ಬೆಳೆದು, ಕಟಾವು ಮಾಡಿ, ಜೋಳ ಬಿಡಿಸಿ ಮಾರುವವರೆಗೆ ಖರ್ಚು ಹೆಚ್ಚು. ಎಕರೆಗೆ 15 ರಿಂದ 16 ಕ್ವಿಂಟಲ್ ಇಳುವರಿ ಸಿಗುತ್ತದೆ. ಕ್ವಿಂಟಲ್‌ಗೆ ₹1,200 ದರವಿದ್ದು, ಎಕರೆಗೆ ₹17 ಸಾವಿರದವರೆಗೆ ದೊರೆಯುತ್ತದೆ. ಕಟಾವು ಮುಗಿಸುವವರೆಗೆ ₹15 ಸಾವಿರ ಖರ್ಚಾಗುತ್ತದೆ. ಹಾಗಾಗಿ, ಜೋಳದ ಕಡ್ಡಿ ಮಾರಿದರೆ ಲಾಭ ಗಳಿಸಬಹುದು' ಎನ್ನುತ್ತಾರೆ ಕೊಡಸೀಗೆ ಗ್ರಾಮದ ರೈತ ನಂಜುಂಡ.



ಬೆಳಗನಹಳ್ಳಿಯಲ್ಲಿ ಬಲಿಯದ ಮೆಕ್ಕೆಜೋಳವನ್ನು ಮೇವಿಗಾಗಿ ಕಟಾವು ಮಾಡಲಾಗಿದೆ

'ಕೇರಳದ ಮಾನಂದವಾಡಿ ಹಾಗೂ ವಯನಾಡ್‌ನ ಪಟ್ಟಣ ಮತ್ತು ನಗರ ಪ್ರದೇಶಗಳ ಮನೆಗಳಲ್ಲಿ ಹಾಲಿಗಾಗಿ ಹಸುಗಳನ್ನು ಸಾಕಿರುವವರು ಮೇವಿಗಾಗಿ ಪರದಾಡುತ್ತಿದ್ದಾರೆ. ಹೀಗಾಗಿ ಜೋಳದ ಕಡ್ಡಿಗಳನ್ನು ಖರೀದಿಸಿ, ಕಂತೆ ಲೆಕ್ಕದಲ್ಲಿ ಮಾರುತ್ತಿದ್ದೇವೆ. ನಮಗೂ ಲಾಭವಿದೆ' ಎನ್ನುತ್ತಾರೆ ಮಾನಂದವಾಡಿಯ ಗೂಡ್ಸ್ ವಾಹನ ಮಾಲೀಕ ಮನೀಶ್.

ಗಾಜಾ: ನೆರವು ವಿತರಣೆ ನಿಲ್ಲಿಸಿದ ಅಮೆರಿಕದ ಸಂಸ್ಥೆ

ಕೈರೊ/ಜೆರುಸಲೇಂ/ವಿಶ್ವ ಸಂಸ್ಥೆ (ರಾಯಿಟರ್ಸ್): ಕಳೆದ ಕೆಲವು ದಿನಗಳಿಂದ ಗಾಜಾದ ಜನರಿಗೆ ಆಹಾರ ಸೇರಿದಂತೆ ಹಲವು ರೀತಿಯ ಮಾನವೀಯ ನೆರವು ನೀಡುತ್ತಿದ್ದ ಅಮೆರಿಕದ 'ಗಾಜಾ ಹ್ಯುಮ್ಯಾನಿಟೇರಿಯನ್ ಫೌಂಡೇಶನ್' ಬುಧವಾರ ಜನರಿಗೆ ಯಾವುದೇ ನೆರವು ನೀಡದೆ ಹಿಂತಿರುಗಿದೆ. 'ಗಾಜಾ ನಾಗರಿಕರಿಗೆ ಸೂಕ್ತ ರಕ್ಷಣೆ ಒದಗಿಸಿ' ಎಂದು ಸಂಸ್ಥೆಯು ಇಸ್ರೇಲ್‌ಗೆ ಹೇಳಿದೆ.

'ನೆರವು ವಿತರಣೆ ಮಾಡುತ್ತಿದ್ದ ಸ್ಥಳಕ್ಕೆ ಬರುವ ಗಾಜಾ ಜನರ ಮೇಲೆ ಗುಂಡಿನ ದಾಳಿ ನಡೆಯುತ್ತಿದೆ. ಮಂಗಳವಾರ 27 ಮಂದಿ ಮೃತಪಟ್ಟಿದ್ದಾರೆ. ಭಾನುವಾರದಿಂದ ಈಚೆಗೆ ಮೂರು ದಿನಗಳಲ್ಲಿ ಸುಮಾರು 80 ಜನರು ಇದೇ ಕಾರಣಕ್ಕೆ ಮೃತಪಟ್ಟಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ' ಎಂದು ಗಾಜಾದ ಆಸ್ಪತ್ರೆಯೊಂದರ ಅಧಿಕಾರಿಗಳು ಹೇಳಿದ್ದಾರೆ.

'ಗೊಂದಲಗಳು ಆಗದಂತೆ, ತೊಂದರೆಗಳು ತಲೆದೋರದಂತೆ ಹೇಗೆ ನಡೆಯಬೇಕು ಎಂಬುದರ ಕುರಿತು ಜನರಿಗೆ ಮಾರ್ಗದರ್ಶನ ಮಾಡಿ' ಎಂದು ಸಂಸ್ಥೆ ಹೇಳಿದೆ. 'ಆಹಾರ ಪಡೆದುಕೊಳ್ಳಲು ನಿಂತುಕೊಂಡಿದ್ದ ಜನರ ಮೇಲೆ ಇಸ್ರೇಲ್‌ನ ಸೈನಿಕರು ಗುಂಡು ಹಾರಿಸಿದರು' ಎಂದು ಗಾಜಾ ಜನರು ಹೇಳುತ್ತಿದ್ದಾರೆ.

ಈ ಆರೋಪವನ್ನು ಇಸ್ರೇಲ್ ನಿರಾಕರಿಸಿದೆ. ಆದರೆ, ಮಂಗಳವಾರ ಗುಂಡಿನ ದಾಳಿ ನಡೆಸಿದ್ದನ್ನು ಇಸ್ರೇಲ್ ಒಪ್ಪಿಕೊಂಡಿದೆ. 'ಕೆಲವು ಶಂಕಾಸ್ಪದ ವ್ಯಕ್ತಿಗಳಿಗೆ ಗುಂಡು ಹಾರಿಸಲಾಗಿದೆ. ಅವರು ಯುದ್ಧ ವಲಯದ ಒಳಗೆ ಬರುತ್ತಿದ್ದರು. ಎಚ್ಚರಿಕೆ ನೀಡಿದರೂ ಅವರು ಹಿಂದೆ ಸರಿಯಲಿಲ್ಲ' ಎಂದು ಹೇಳಿದೆ. ಅಮೆರಿಕ ಸಂಸ್ಥೆಯು ನೆರವು ವಿತರಣೆ ಮಾಡುತ್ತಿದ್ದ ಜಾಗವನ್ನು ಇಸ್ರೇಲ್ ಯುದ್ಧ ವಲಯ ಎಂದು ಕರೆದಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ಬೆಂಗಳೂರು	₹18000-20000
ದಾವಣಗೆರೆ	₹15300-15300

ಈರುಳ್ಳಿ

(ಕ್ವಿಂಟಲ್‌ಗೆ)

ದಪ್ಪ	₹1,000-1,500
ಮಧ್ಯಮ	₹600-1,000
ಸಣ್ಣ	₹300-600

'ಸಂಘರ್ಷದ ಪುನರಾವರ್ತನೆ ಸಾಧ್ಯತೆ ದೂರ'

ಇಸ್ಲಾಮಾಬಾದ್ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ ನಡುವೆ ಸೇನಾ ಸಂಘರ್ಷ ಪುನರಾವರ್ತನೆಯಾಗುವ ಸಾಧ್ಯತೆ ದೂರವಿದೆ. ಆದರೆ, ಅಂತಹ ಬೆಳವಣಿಗೆ ನಡೆದರೆ ಪಾಕಿಸ್ತಾನ ತಕ್ಕ ಪ್ರತ್ಯುತ್ತರ ನೀಡಲಿದೆ' ಎಂದು ಪಾಕಿಸ್ತಾನದ ವಿದೇಶಾಂಗ ವ್ಯವಹಾರಗಳ ಸಚಿವ ಇಶಾಕ್ ದರ್ ಹೇಳಿದರು.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರ ಇತ್ತೀಚಿನ ಟರ್ಕಿ, ಇರಾನ್, ಅಜರ್‌ಬೈಜಾನ್ ಮತ್ತು ತಜಿಕಿಸ್ತಾನ ಭೇಟಿಗೆ ಸಂಬಂಧಿಸಿದಂತೆ ಬುಧವಾರ ಇಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಭವಿಷ್ಯವನ್ನು ಊಹಿಸಲು ಸಾಧ್ಯವಿಲ್ಲ. ಆದರೆ, ಭಾರತ–ಪಾಕ್ ನಡುವಿನ ಸೇನಾ ಸಂಘರ್ಷ ಪುನರಾವರ್ತನೆಯಾಗುವ ಸಾಧ್ಯತೆ ತೀರಾ ಕ್ಷೀಣಿಸಿದೆ' ಎಂದರು.

'ಕದನ ವಿರಾಮಕ್ಕೆ ಸಂಬಂಧಿಸಿದಂತೆ ಉಭಯ ದೇಶಗಳು ಎಲ್ಲ ಕ್ರಮಗಳನ್ನು ಕೈಗೊಂಡಿವೆ. ಎರಡೂ ಬದಿಯಲ್ಲಿ ಸೇನಾಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ. ಹಾಗಾಗಿ ಹೊಸ ಸಂಘರ್ಷದ ಸಾಧ್ಯತೆ ಕಡಿಮೆ ಎನ್ನುವುದು ನನ್ನ ಅಭಿಪ್ರಾಯ. ಆದಾಗ್ಯೂ, ಭಾರತ ಸೇನಾ ಸಂಘರ್ಷ ಮುಂದುವರಿಸಿದರೆ ಅದಕ್ಕೆ ಸೂಕ್ತ ಉತ್ತರ ನೀಡಲಾಗುವುದು' ಎಂದು ಹೇಳಿದರು.

ಉ.ಕೊರಿಯಾ ಜತೆ ಮಾತುಕತೆಗೆ ಲೀ ಜೇ ಮ್ಯುಂಗ್ ಒಲವು

ಸೋಲ್ (ಎಪಿ): ತಮ್ಮ ಐದು ವರ್ಷಗಳ ಅಧಿಕಾರದ ಅವಧಿಯಲ್ಲಿ ಉತ್ತರ ಕೊರಿಯಾದ ಜೊತೆ ಮಾತುಕತೆ ಪುನರಾರಂಭಿಸುವ ಮತ್ತು ಅಮೆರಿಕ ಹಾಗೂ ಜಪಾನ್ ಜೊತೆಗಿನ ತ್ರಿಪಕ್ಷೀಯ ಸಂಬಂಧ ವೃದ್ಧಿಗೆ ದಕ್ಷಿಣ ಕೊರಿಯಾದ ನೂತನ ಅಧ್ಯಕ್ಷ ಲೀ ಜೇ ಮ್ಯುಂಗ್ ಒಲವು ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಶಾಸನ ಸಭೆಯಲ್ಲಿ ಬುಧವಾರ ತಮ್ಮ ಚೊಚ್ಚಲ ಭಾಷಣ ಮಾಡಿದ ಅವರು, 'ಉತ್ತರ ಕೊರಿಯಾದ ಪರಮಾಣು ಬೆದರಿಕೆ ಮತ್ತು ಮಿಲಿಟರಿ ಒತ್ತಡವನ್ನು ದಕ್ಷಿಣ ಕೊರಿಯಾ– ಅಮೆರಿಕ ಸೇನಾ ಮೈತ್ರಿಕೂಟವು ಪ್ರಬಲವಾಗಿ ತಡೆಯಲಿದೆ. ಆದರೆ, ಉತ್ತರ ಕೊರಿಯಾದ ಜೊತೆ ಮಾತುಕತೆಗೆ ನಾನು ಮುಕ್ತ ಮನಸ್ಸು ಹೊಂದಿದ್ದು, ಮಾತುಕತೆ ಮತ್ತು ಸಹಕಾರದ ಮೂಲಕ ಕೊರಿಯಾ ದ್ವೀಪದಲ್ಲಿ ಶಾಂತಿ ಸ್ಥಾಪಿಸಲು ಬಯಸುತ್ತೇನೆ' ಎಂದರು.

ನೆರೆಯ ರಾಷ್ಟ್ರಗಳೊಂದಿಗೆ ವ್ಯಾವಹಾರಿಕ ರಾಜತಾಂತ್ರಿಕ ಪ್ರಯತ್ನಗಳ ಮೂಲಕ ಉತ್ತರ ಕೊರಿಯಾ–ಅಮೆರಿಕ–ಜಪಾನ್ ಮಧ್ಯೆ ತ್ರಿಪಕ್ಷೀಯ ಸಹಕಾರ ಸ್ಥಾಪಿಸಲು ಶ್ರಮಿಸುವುದಾಗಿ ಹೇಳಿದರು.

ಗುಪ್ತಚರ ಸಂಸ್ಥೆಗಳ ಸಹಕಾರದಿಂದ ಭಯೋತ್ಪಾದನೆ ನಿಗ್ರಹ: ಭುಟ್ಟೊ

ಇಸ್ಲಾಮಾಬಾದ್(ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ ಗುಪ್ತಚರ ಸಂಸ್ಥೆಗಳ ನಡುವಿನ ಸಹಕಾರದಿಂದ ದಕ್ಷಿಣ ಏಷ್ಯಾದಲ್ಲಿ ಭಯೋತ್ಪಾದನೆಯನ್ನು ಗಣನೀಯವಾಗಿ ತಗ್ಗಿಸಬಹುದು' ಎಂದು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಮುಖ್ಯಸ್ಥ ಮತ್ತು ಅಲ್ಲಿನ ಮಾಜಿ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಹೇಳಿದರು.

ಭಾರತದೊಂದಿಗಿನ ಇತ್ತೀಚಿನ ಸಂಘರ್ಷಕ್ಕೆ ಸಂಬಂಧಿಸಿದಂತೆ ಜಾಗತಿಕ ರಾಜತಾಂತ್ರಿಕ ಬೆಂಬಲ ಪಡೆಯುವುದರ ಭಾಗವಾಗಿ ಬಿಲಾವಲ್ ಭುಟ್ಟೊ ಅವರು ಉನ್ನತ ಅಧಿಕಾರಿಗಳ ನಿಯೋಗದೊಂದಿಗೆ ಅಮೆರಿಕ ಪ್ರವಾಸದಲ್ಲಿದ್ದಾರೆ. ಮಂಗಳವಾರ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗುಪ್ತಚರ ಸಂಸ್ಥೆಗಳಾದ ಐಎಸ್‌ಐ ಮತ್ತು 'ರಾ' ಜತೆಗೂಡಿ ಕೆಲಸ ಮಾಡಿದರೆ ಭಾರತ ಹಾಗೂ ಪಾಕಿಸ್ತಾನದಲ್ಲಿ ಭಯೋತ್ಪಾದನೆ ಗಣನೀಯವಾಗಿ ತಗ್ಗುವ ಸಂಪೂರ್ಣ ವಿಶ್ವಾಸ ತಮಗಿದೆ ಎಂದು ಭುಟ್ಟೊ ಹೇಳಿರುವುದಾಗಿ 'ಡಾನ್' ಪತ್ರಿಕೆ ವರದಿ ಮಾಡಿದೆ.

'ಅಣ್ವಸ್ತ್ರ, ಶಸ್ತ್ರಾಸ್ತ್ರ ಸಾಮರ್ಥ್ಯ ಹೊಂದಿರುವ ಎರಡು ದೇಶಗಳ ನಡುವಿನ ಸಂಘರ್ಷದ ಒತ್ತಡ ಕದನ ವಿರಾಮದ ನಂತರವೂ ಹೆಚ್ಚಿದೆಯೇ ಹೊರತು ಕಡಿಮೆಯಾಗಿಲ್ಲ. ವಿಶ್ವ ಸಮುದಾಯ ಇದನ್ನು ಗಮನಿಸಬೇಕು' ಎಂದು ಭುಟ್ಟೊ ಹೇಳಿದ್ದಾರೆ.

'ಭಾರತ – ಪಾಕ್ ಸಂಘರ್ಷ ತಗ್ಗಿಸುವ ನಿಟ್ಟಿನಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ವಹಿಸಿದ ಪಾತ್ರವನ್ನು ಸ್ಮರಿಸುತ್ತೇನೆ. ಇದು ಸ್ವಾಗತಾರ್ಹ. ಆದರೆ, ಇದು ಮೊದಲ ಹೆಜ್ಜೆ ಮಾತ್ರ' ಎಂದು ಹೇಳಿದರು.


'ರಾಜತಾಂತ್ರಿಕತೆ ಮತ್ತು ಮಾತುಕತೆಯಿಂದ ಮಾತ್ರ ಶಾಂತಿ ಸ್ಥಾಪನೆ ಸಾಧ್ಯ. ಭಯೋತ್ಪಾದನೆ ತಗ್ಗಿಸುವ ನಿಟ್ಟಿನಲ್ಲಿ ಭಾರತಕ್ಕೆ ಪಾಕಿಸ್ತಾನ ಈಗಲೂ ಸಹಕಾರ ನೀಡಲಿದೆ. 150ರಿಂದ 170ಕೋಟಿ ಜನರ ಭವಿಷ್ಯವನ್ನು ಭಯೋತ್ಪಾದಕರ ಕೈಯಲ್ಲಿಡಲುಸಾಧ್ಯವಿಲ್ಲ'ಎಂದರು.

'ಭಯೋತ್ಪಾದಕ ದಾಳಿ ನಡೆದಾಗ, ಅದರಿಂದ ಪಾಕಿಸ್ತಾನದೊಂದಿಗೆ ಭಾರತದ ಯುದ್ಧದ ಸಾಧ್ಯತೆ ಹೆಚ್ಚಿಸಲಿದೆ' ಎಂದು ವಿಶ್ಲೇಷಿಸುವುದು ಸಮರ್ಥನೀಯವಲ್ಲ. ಅಣ್ವಸ್ತ್ರ ಸಾಮರ್ಥ್ಯದ ಎರಡು ದೇಶಗಳ ನಡುವಿನ ಸಂಘರ್ಷ ಕೊನೆಗಾಣಿಸುವಂತಹ ಯಾವುದೇ ವ್ಯವಸ್ಥೆ ಇಲ್ಲ. ಜಂಟಿ ತನಿಖೆ, ಪರಸ್ಪರ ಸಹಕಾರದಿಂದ ಮಾತ್ರ ಭಯೋತ್ಪಾದನೆ ನಿಗ್ರಹ ಸಾಧ್ಯ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾನೂನಿಗೆ ತಿದ್ದುಪಡಿ ತಂದ ಬಾಂಗ್ಲಾದೇಶ ಸರ್ಕಾರ

'ರೆಹಮಾನ್ ಈಗ ರಾಷ್ಟ್ರಪಿತ ಅಲ್ಲ'

ಢಾಕಾ (ಪಿಟಿಐ): ಬಂಗಬಂಧು ಶೇಖ್ ಮುಜೀಬುರ್ ರೆಹಮಾನ್ ಅವರಿಗೆ ನೀಡಲಾಗಿದ್ದ ಬಾಂಗ್ಲಾದೇಶದ 'ರಾಷ್ಟ್ರ ಪಿತ' ಗೌರವವನ್ನು ಮಧ್ಯಂತರ ಸರ್ಕಾರವು ಹಿಂಪಡೆದಿದೆ. ಜೊತೆಗೆ, ಸ್ವಾತಂತ್ರ್ಯ ಹೋರಾಟಗಾರರು ಯಾರು ಎಂಬುದರ ವ್ಯಾಖ್ಯಾನವನ್ನೂ ಸರ್ಕಾರ ಬದಲಾಯಿಸಿದೆ.



ಶೇಖ್ ಮುಜೀಬುರ್ ರೆಹಮಾನ್

ದೇಶದ ನೋಟುಗಳ ಮೇಲಿದ್ದ ಶೇಖ್ ಮುಜೀಬುರ್ ರೆಹಮಾನ್ ಅವರ ಭಾವಚಿತ್ರವನ್ನು ಕೆಲವು ದಿನಗಳ ಹಿಂದೆ ಮಧ್ಯಂತರ ಸರ್ಕಾರವು ತೆಗೆದುಹಾಕಿತ್ತು. ಮುಜೀಬುರ್ ರೆಹಮಾನ್ ಅವರು ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ತಂದೆಯೂ ಹೌದು. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಾರರ ಪರಿಷತ್ತಿನ ಕಾಯ್ದೆಗೆ ತಿದ್ದುಪಡಿ ತರುವ ಸುಗ್ರೀವಾಜ್ಞೆಯನ್ನು ಮಂಗಳವಾರ ರಾತ್ರಿ ಹೊರಡಿಸಿರುವ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ, ರೆಹಮಾನ್ ಅವರು 'ರಾಷ್ಟ್ರಪಿತ' ಎಂದು ಉಲ್ಲೇಖಿಸಲಾಗಿದ್ದ ಭಾಗಗಳನ್ನು ಕೈಬಿಟ್ಟಿದೆ.

'ಬಂಗಬಂಧು ಅವರು ಸ್ವಾತಂತ್ರ್ಯಕ್ಕಾಗಿ ಕರೆ ನೀಡಿದಕ್ಕೆ ಪ್ರತಿಕ್ರಿಯೆಯಾಗಿ ಯುದ್ಧ ಆರಂಭವಾಯಿತು' ಎಂಬ 'ಬಾಂಗ್ಲಾ ವಿಮೋಚನಾ ಯುದ್ಧ'ದ ವ್ಯಾಖ್ಯಾನವನ್ನೂ ಬದಲಾಯಿಸಲಾಗಿದೆ. 'ಪಾಕಿಸ್ತಾನ ಸೇನಾ ಪಡೆ ವಿರುದ್ಧ ಸಮಾನತೆ, ಮಾನವ ಘನತೆ ಮತ್ತು ಸಾಮಾಜಿಕ ನ್ಯಾಯದ ಆಧಾರದಲ್ಲಿ ಸಾರ್ವಭೌಮ, ಪ್ರಜಾಪ್ರಭುತ್ವ ದೇಶ ಸ್ಥಾಪನೆಗಾಗಿ 1971ರ ಮಾರ್ಚ್ 26ರಿಂದ ಡಿಸೆಂಬರ್ 16ರವರೆಗೆ ಬಾಂಗ್ಲಾದೇಶದ ಜನರು ನಡೆಸಿದ ಯುದ್ಧ' ಎಂದು ಮರುವ್ಯಾಖ್ಯಾನಿಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರು ಯಾರು?

ಯುದ್ಧ ನಡೆದ ಸಂದರ್ಭದಲ್ಲಿನ ಸಂಸತ್ತಿನ ಎಲ್ಲ ಸದಸ್ಯರು, ಪ್ರಾದೇಶಿಕ ಸಭೆಯ ಸದಸ್ಯರು, ಬಾಂಗ್ಲಾದೇಶದ ದೇಶಭ್ರಷ್ಟ ಸರ್ಕಾರ ಮತ್ತು ಈ ಸರ್ಕಾರದೊಂದಿಗೆ ಸಂಪರ್ಕ ಹೊಂದಿದ್ದವರನ್ನು (ಹೆಚ್ಚಿನ ಸದಸ್ಯರು ಅವಾಮಿ ಲೀಗ್ ಪಕ್ಷದ ಸದಸ್ಯರಾಗಿದ್ದರು) ಸ್ವಾತಂತ್ರ್ಯ ಹೋರಾಟಗಾರರು ಎಂದು ಹೇಳಲಾಗುತ್ತಿತ್ತು. ತಿದ್ದುಪಡಿಯ ಬಳಿಕ ಈ ಎಲ್ಲರನ್ನೂ ಈಗ 'ವಿಮೋಚನಾ ಸಮರದ ಸಹವರ್ತಿಗಳು' ಎಂದು ಗುರುತಿಸಲಾಗುತ್ತದೆ.

ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ 'ಬಾಂಗ್ಲಾ ವಿಮೋಚನಾ ಯುದ್ಧ'ದಲ್ಲಿ ಭಾಗ ವಹಿಸಲು ದೇಶದಲ್ಲಿ ಮತ್ತು ಭಾರತದಲ್ಲಿ ಯುದ್ಧ ತರಬೇತಿ ಪಡೆದುಕೊಂಡವರು, ಪಾಕಿಸ್ತಾನ ಸೇನೆಯ ಹಾಗೂ ಅದರ ಬೆಂಬಲಿಗರ ವಿರುದ್ಧ ಶಸ್ತ್ರಾಸ್ತ್ರ ಹಿಡಿದವರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಗುರು ತಿಸಲು ಮಧ್ಯಂತರ ಸರ್ಕಾರ ನಿರ್ಧರಿಸಿದೆ.

ಯುದ್ಧದ ಸಮಯದಲ್ಲಿ ಪಾಕಿಸ್ತಾನದ ಸೈನಿಕರಿಂದ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರನ್ನೂ, ಯುದ್ಧದ ವೇಳೆ ಗಾಯಗೊಂಡವರನ್ನು ಉಪಚರಿಸಿದ ವೈದ್ಯರು, ನರ್ಸ್‌ಗಳು ಮತ್ತು ವೈದ್ಯ ಸಹಾಯಕರನ್ನೂ ಸ್ವಾತಂತ್ರ್ಯ ಹೋರಾಟಗಾರರು ಎಂದು ಪರಿಗಣಿಸಲು ಸರ್ಕಾರ ನಿರ್ಧರಿಸಿದೆ.

ನಟನೆಯಲ್ಲಿ ಹುಡುಕಾಟ ನಿರಂತರ

ಪೋಷಕ ಕಲಾವಿದನಾಗಿ ಸಾಕಷ್ಟು ಚಿತ್ರಗಳು ಅಭಿನಯಿಸಿರುವ ಸಂಪತ್ ಮೈತ್ರೇಯ ಮುಖ್ಯಭೂಮಿಕೆಯಲ್ಲಿರುವ 'ನೀತಿ' ಚಿತ್ರ ಈ ವಾರ ತೆರೆ ಕಾಣುತ್ತಿದೆ. ಈ ನೆಪದಲ್ಲಿ ಅವರು ತಮ್ಮ ಸಿನಿಪಯಣವನ್ನು ಮೆಲುಕು ಹಾಕಿದರು.


ಸಂಪತ್

ವಿನಾಯಕ ಕೆ.ಎಸ್

'ಒಂದೇ ಮನೆಯಲ್ಲಿ ಒಂದು ರಾತ್ರಿ ನಡೆಯುವ ವಿಭಿನ್ನ ಕಥೆಯಿದು. ಸಿನಿಮಾದಲ್ಲಿ ಮುಖ್ಯವಾಗಿ ಎರಡೇ ಪಾತ್ರಗಳಿರುವುದು. ಉಳಿದ ಪಾತ್ರಗಳು ಅಲ್ಲಲ್ಲಿ ಆಗಾಗ ಬಂದು ಹೋಗುತ್ತವೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾವಿದು. ನಾನು ಒಂದು ಪಾತ್ರದಲ್ಲಿದ್ದರೆ, ಖುಷಿ ರವಿ ಇನ್ನೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ' ಎಂದು 'ನೀತಿ' ಸಿನಿಮಾದ ಮಾಹಿತಿಯೊಂದಿಗೆ ಮಾತು ಪ್ರಾರಂಭಿಸಿದರು ಸಂಪತ್.

'ನೀತಿ' ಚಿತ್ರಕ್ಕೆ ರಾಜಗೋಪಾಲ್ ಕಥೆ ಬರೆದು ನಿರ್ದೇಶಿಸಿದ್ದಾರೆ. ಪ್ರವೀಣ್ ಅಥರ್ವ ಕೂಡ ಚಿತ್ರದಲ್ಲಿದ್ದಾರೆ. ರೂಸಿಕ್ ಸಂಗೀತ ಸಂಯೋಜನೆಯಿದೆ. ಹಂಗೇರಿ ದೇಶದ 'ಪಿಲ್‌ಹಾರ್ಮೋನಿಕ್ ಆರ್ಕೆಸ್ಟ್ರಾ'ದಲ್ಲಿ ಚಿತ್ರದ ಸಂಗೀತದ ಕೆಲಸಗಳು ನಡೆದಿರುವುದು ವಿಶೇಷ ಎಂದಿದೆ ಚಿತ್ರತಂಡ. ಪ್ರದೀಪ್ ಪದ್ಮಕುಮಾರ್ ಛಾಯಾಚಿತ್ರಗ್ರಹಣ, ಆರ್. ರಾಜ್‌ಕುಮಾರ್ ಸಂಕಲನವಿದೆ.

ರಂಗಭೂಮಿ ಕಲಾವಿದನಾಗಿ ಗುರುತಿಸಿಕೊಂಡ ಇವರು ಸಣ್ಣ, ಸಣ್ಣ ಪಾತ್ರಗಳೊಂದಿಗೆ ಚಿತ್ರರಂಗದಲ್ಲಿ ನೆಲೆ ಕಂಡುಕೊಂಡರು. ಈತನಕ 30ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಮೂರನೇ ಕೃಷ್ಣಪ್ಪ', 'ಬಿಸಿಲು ಕುದುರೆ', 'ಅನ್ನ' ಮೊದಲಾದ ಚಿತ್ರಗಳಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡ ಇವರಿಗೆ ಬ್ರೇಕ್ ನೀಡಿದ್ದು 'ಕಿರಗೂರಿನ ಗಯ್ಯಾಳಿಗಳು', 'ಕವಲು ದಾರಿ' ಚಿತ್ರಗಳು.

'ಕೆಜಿಎಫ್' ಚಿತ್ರದಿಂದಲೂ ಒಂದಷ್ಟು ಅವಕಾಶ ಹೆಚ್ಚಾಯಿತು. ಈಗಲೂ ನನ್ನನ್ನು 'ಕವಲು ದಾರಿ ಸಂಪತ್' ಎಂದೇ ಕರೆಯುತ್ತಾರೆ. ಅಷ್ಟರಮಟ್ಟಿಗೆ ಆ ಪಾತ್ರ ಜನಪ್ರಿಯತೆ ನೀಡಿತು. ರಂಗಭೂಮಿ, ಚಿತ್ರರಂಗ ಸೇರಿದರೆ ಸುಮಾರು 25 ವರ್ಷಗಳ ಪಯಣವಿದು. ವಿವಿಧ ಪಾತ್ರಗಳ ಮೂಲಕ ನನ್ನನ್ನು ನಾನು ಹುಡುಕಿಕೊಳ್ಳುತ್ತ ಇರುತ್ತೇನೆ. ಈ ಹುಡುಕಾಟ ನಿರಂತರ. ಬಹುತೇಕ ಪ್ರಯೋಗಾತ್ಮಕ ಚಿತ್ರಗಳಲ್ಲಿಯೇ ಕೆಲಸ ಮಾಡಿದ್ದು ಹೆಚ್ಚು. ಕೆಲಸವಿದ್ದಾಗ ಖುಷಿಯಾಗುತ್ತದೆ. ಕೆಲಸವಿಲ್ಲದಿದ್ದಾಗ ಒಂದು ರೀತಿ ಬೇಸರ' ಎನ್ನುತ್ತಾರೆ ಅವರು. 'ಧರಣಿ' ಚಿತ್ರದಲ್ಲಿ ಮುಖ್ಯ ಖಳನಾಯಕನಾಗಿ ನಟಿಸುತ್ತಿರುವೆ. ಜಡೇಶ್ ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್' ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ದುನಿಯಾ ವಿಜಯ್ ಅವರ 'ಸಿಟಿ ಲೈಟ್ಸ್' ಚಿತ್ರದಲ್ಲಿಯೂ ಒಂದು ಸಣ್ಣ ಪಾತ್ರ ನೀಡಿದ್ದಾರೆ. ಟಿ.ಕೆ.ದಯಾನಂದ್ ನಿರ್ದೇಶನ 'ಡೆಂಜಿ'ಯಲ್ಲೊಂದು ಪಾತ್ರ ಮಾಡಿರುವೆ. 'ಮಾರಿಕ' ಎಂಬ ಇನ್ನೊಂದು ಚಿತ್ರ ಚಿತ್ರೀಕರಣದಲ್ಲಿದೆ. ಹೀಗೆ ಒಂದಷ್ಟು ಸಿನಿಮಾಗಳು ಕೈಯ್ಯಲ್ಲಿವೆ' ಎಂದು ತಮ್ಮ ಮುಂದಿನ ಯೋಜನೆಗಳ ಕುರಿತು ಅವರು ಮಾಹಿತಿ ನೀಡಿದರು.

ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಮಾರುತ


ದುನಿಯಾ ವಿಜಯ್

ಎಸ್.ನಾರಾಯಣ್ ನಿರ್ದೇಶನದ, ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖಪಾತ್ರದಲ್ಲಿ ನಟಿಸಿರುವ 'ಮಾರುತ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ.

ಸದ್ಯ ಚಿತ್ರದ ರಿರೆಕಾರ್ಡಿಂಗ್ ಆರಂಭವಾಗಿದ್ದು, ಭಾರತದ ಹೆಸರಾಂತ ಕಲಾವಿದರು ಇದರಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆ. ಮಂಜು ಮತ್ತು ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ನಾಯಕಿಯಾಗಿ ಬೃಂದಾ ಆಚಾರ್ಯ ಬಣ್ಣಹಚ್ಚಿದ್ದಾರೆ. ಪಿ.ಕೆ.ಎಚ್ ದಾಸ್ ಛಾಯಾಚಿತ್ರಗ್ರಹಣ, ಎಸ್.ನಾರಾಯಣ್, ಜೆಸ್ಸಿ ಗಿಫ್ಟ್ ಸಂಗೀತ ನಿರ್ದೇಶನ, ಶಿವಪ್ರಸಾದ್ ಯಾದವ್ ಸಂಕಲನ, ವಿನೋದ್ ಹಾಗೂ ಅರ್ಜುನ್ ಸಾಹಸ ನಿರ್ದೇಶನ ಮತ್ತು ಮೋಹನ್ ಕುಮಾರ್, ಸಂತು ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ. ಸಾಧುಕೋಕಿಲ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ, ಸುಜಯ್ ಶಾಸ್ತ್ರಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ವಿಶೇಷ ಪಾತ್ರದಲ್ಲಿ ನಟ ರವಿಚಂದ್ರನ್ ನಟಿಸಿದ್ದಾರೆ.

ಕಣ್ಣಪ್ಪನಿಗೆ ಜೊತೆಯಾದ ಶಿವರಾಜ್‌ಕುಮಾರ್


ಚಿತ್ರತಂಡದೊಂದಿಗೆ ಶಿವರಾಜ್‌ಕುಮಾರ್

ನಟ ಮೋಹನ್ ಬಾಬು ನಿರ್ಮಾಣದ, ಮುಖೇಶ್ ಕುಮಾರ್ ಸಿಂಗ್ ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ 'ಕಣ್ಣಪ್ಪ' ಜೂನ್ 27ರಂದು ಬಿಡುಗಡೆಯಾಗಲಿದೆ.

ಚಿತ್ರದ ಟೀಸರ್ ಪ್ರದರ್ಶನ ಹಾಗೂ ಹಾಡೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. ನಟ ಶಿವರಾಜ್‌ಕುಮಾರ್ ಹಾಗೂ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು. ಮೋಹನ್ ಬಾಬು ಅವರ ಪುತ್ರ ವಿಷ್ಣು ಮಂಚು ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಬಾಲಿವುಡ್ ನಟ ಅಕ್ಷಯ್ ಕುಮಾರ್ ಶಿವನ ಪಾತ್ರದಲ್ಲಿ ಹಾಗೂ ಕಾಜಲ್ ಅಗರವಾಲ್ ಪಾರ್ವತಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಭಾಸ್, ಮೋಹನ್‌ಲಾಲ್ ಚಿತ್ರದ ತಾರಾಬಳಗದಲ್ಲಿದ್ದಾರೆ.

'ನಾನು ಈ 'ಕಣ್ಣಪ್ಪ' ಚಿತ್ರದಲ್ಲಿ ನಟಿಸಬೇಕಾಗಿತ್ತು. ಹಲವು ಚಿತ್ರಗಳ ಚಿತ್ರೀಕರಣ ಒಪ್ಪಿಕೊಂಡಿದ್ದರಿಂದ ನಟಿಸಲು ಆಗಲಿಲ್ಲ. ಮುಂದೊಂದು ದಿನ ವಿಷ್ಣು ಮಂಚು ಅವರ ಜೊತೆ ನಟಿಸುತ್ತೇನೆ. ನಟ ಮೋಹನ್ ಬಾಬು ನಮ್ಮ ಕುಟುಂಬದ ಸದಸ್ಯರು ಇದ್ದಹಾಗೆ. ಅವರು ಕರೆದರೆ ಪ್ರೀತಿಯಿಂದ ನಟಿಸಿ ಬರುತ್ತೇನೆ' ಎಂದರು ಶಿವರಾಜ್‌ಕುಮಾರ್.

'ಕನ್ನಡದಲ್ಲಿ ನಟಿಸಬೇಕು ಎನ್ನುವ ಆಸೆ ಬಹುದಿನದಿಂದ ಇದೆ. ಅಂಬರೀಶ್ ಅವರ ಮುಂದೆಯೂ ಇದನ್ನೇ ಹೇಳಿದ್ದೆ. ಶಿವಣ್ಣನ ಜೊತೆ ಚಿತ್ರವೊಂದರಲ್ಲಿ ನಟಿಸಬೇಕು. ನ್ಯೂಜಿಲೆಂಡ್‌ನ ಕಾಡೊಂದರಲ್ಲಿ ಬೃಹತ್ ಸೆಟ್ ಹಾಕಿ ಈ ಚಿತ್ರದ ಚಿತ್ರೀಕರಣ ಮಾಡಿದ್ದೇವೆ. 'ಬೇಡರ ಕಣ್ಣಪ್ಪ' ವರನಟ ಡಾ.ರಾಜ್‌ಕುಮಾರ್ ಅವರು ಮಾಡಿದ್ದ ಚಿತ್ರ. ಆ ನಂತರ ಶಿವರಾಜ್‌ಕುಮಾರ್ ಅವರೂ ಕಣ್ಣಪ್ಪ ಚಿತ್ರದಲ್ಲಿ ನಟಿಸಿದ್ದರು. ಈಗ ನಾವು 'ಕಣ್ಣಪ್ಪ' ಚಿತ್ರವನ್ನು ಜನರ ಮುಂದೆ ತರುತ್ತಿದ್ದೇವೆ. ರಾಜ್ಯದಲ್ಲಿ ಈ ಚಿತ್ರವನ್ನು ರಾಕ್‌ಲೈನ್ ವೆಂಕಟೇಶ್ ವಿತರಣೆ ಮಾಡುತ್ತಿದ್ದಾರೆ' ಎಂದರು ಮೋಹನ್ ಬಾಬು.

ಡಿ.5ಕ್ಕೆ 'ದಿ ರಾಜಾ ಸಾಬ್'


ಪ್ರಭಾಸ್

'ಕಲ್ಕಿ 2898 ಎಡಿ' ಸಿನಿಮಾ ಬಳಿಕ ನಟ ಪ್ರಭಾಸ್ ನಟನೆಯ ಹೊಸ ಸಿನಿಮಾ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಮಾರುತಿ ನಿರ್ದೇಶನದ 'ದಿ ರಾಜಾ ಸಾಬ್' ಸಿನಿಮಾ ಡಿ.5ರಂದು ತೆರೆಕಾಣಲಿದೆ.

ಚಿತ್ರದ ಟೀಸರ್ ಜೂನ್ 16ಕ್ಕೆ ರಿಲೀಸ್ ಆಗಲಿದೆ. ಈವರೆಗೂ ಆ್ಯಕ್ಷನ್ ಅವತಾರದಲ್ಲಿಯೇ ತೆರೆಗಳಲ್ಲಿ ಮಿಂಚಿದ್ದ ಪ್ರಭಾಸ್, ಇದೇ ಮೊದಲ ಬಾರಿಗೆ 'ದಿ ರಾಜಾ ಸಾಬ್' ಮೂಲಕ ಹಾರರ್ ಜಾನರ್ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್ ಅಡಿಯಲ್ಲಿ ಟಿ.ಜಿ. ವಿಶ್ವಪ್ರಸಾದ್ ನಿರ್ಮಾಣದಲ್ಲಿ ಈ ಚಿತ್ರ ಮೂಡಿಬರುತ್ತಿದೆ.

ಬಿಗ್ ಬಜೆಟ್‌ನ ಈ ಚಿತ್ರಕ್ಕೆ ಕಾರ್ತಿಕ್ ಪಳನಿ ಛಾಯಾಚಿತ್ರಗ್ರಹಣ, ತಮನ್ ಎಸ್. ಸಂಗೀತ ನಿರ್ದೇಶನವಿದೆ. ಮಾಳವಿಕಾ ಮೋಹನನ್, ನಿಧಿ ಅಗರವಾಲ್ ಮತ್ತು ರಿಧಿ ಕುಮಾರ್ ಈ ಚಿತ್ರದಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ತೆಲುಗು, ಹಿಂದಿ, ತಮಿಳು, ಕನ್ನಡ ಮತ್ತು ಮಲಯಾಳ ಭಾಷೆಗಳಲ್ಲಿ ಈ ಚಿತ್ರ ರಿಲೀಸ್ ಆಗಲಿದೆ.

ಮುಂದುವರಿದ ಮಳೆ • ಹಲವೆಡೆ ರಸ್ತೆ, ರೈಲು ಸಂಪರ್ಕ ಕಡಿತ

ಅಸ್ಸಾಂ: ಸಂಕಷ್ಟದಲ್ಲಿ 6.5 ಲಕ್ಷ ಜನ


ಮನೆಯೊಳಗೆ ನೀರು ತುಂಬಿದ್ದ ಕಾರಣ ವಕ್ತಿಯೊಬ್ಬರು ತಮ್ಮ ಮನೆಯಲ್ಲಿದ್ದ ಭತ್ತದ ಚೀಲವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಭೀಕರ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, 6.5 ಲಕ್ಷ ಜನರು ಸಂಕಷ್ಟಕ್ಕೀಡಾಗಿದ್ದಾರೆ.

ರಾಜ್ಯದ ವಿವಿಧೆಡೆ ಕಳೆದ 24 ಗಂಟೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ವ್ಯಕ್ತಿಯೊಬ್ಬರು ನಾಪತ್ತೆಯಾಗಿದ್ದಾರೆ.

ಬ್ರಹ್ಮಪುತ್ರ ಸೇರಿದಂತೆ ಏಳು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಹಲವಾರು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹೈಲಾಕಂಡಿ, ಶ್ರೀಭೂಮಿ, ಮೋರಿಗಾನ್, ಕಚಾರ್, ಸೋನಿತ್‌ಪುರ ಮತ್ತು ತಿನ್‌ಸುಕಿಯಾ ಜಿಲ್ಲೆಗಳಲ್ಲಿ ಆರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ.

ಅಸ್ಸಾಂನ ತಗ್ಗು ಪ್ರದೇಶಗಳಲ್ಲಿರುವ ಜಿಲ್ಲೆಗಳಲ್ಲಿ ಬುಧವಾರ ಮುಂಜಾನೆಯಿಂದಲೇ ಭಾರಿ ಮಳೆಯಾಗುತ್ತಿದೆ. 21 ಜಿಲ್ಲೆಗಳ 1506 ಗ್ರಾಮಗಳಲ್ಲಿನ 6,33,114 ಜನ ನಿರಾಶ್ರಿತರಾಗಿದ್ದಾರೆ ಎಂದು ಅಸ್ಸಾಂ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ರಾಜ್ಯದ ಹಲವೆಡೆ ರಸ್ತೆ, ರೈಲು ಸಂಪರ್ಕ ಕಡಿತಗೊಡಿವೆ. 223 ಪರಿಹಾರ ಕೇಂದ್ರಗಳು ಕಾರ್ಯಾಚರಿಸುತ್ತಿದ್ದು, 39,746 ಜನರಿಗೆ ಆಶ್ರಯ ನೀಡಲಾಗಿದೆ.

ಪ್ರವಾಹ ಮತ್ತು ಭೂಕುಸಿತದಿಂದಾಗಿ ಈ ವರ್ಷ ಪ್ರಾಣ ಕಳೆದುಕೊಂಡವರ ಸಂಖ್ಯೆ 17ಕ್ಕೆ ಏರಿಕೆಯಾಗಿದೆ.

4097 ಜನರ ಸ್ಥಳಾಂತರ: ಮಣಿಪುರದಲ್ಲಿಯೂ ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು. ಬುಧವಾರ ಒಟ್ಟು 4,097 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ. ಮಣಿಪುರದಲ್ಲಿ ಈವರೆಗೆ 1.65 ಲಕ್ಷ ಜನ ತೊಂದರೆಗೊಳಗಾಗಿದ್ದಾರೆ.

ವಿದೇಶಿಗರು ಸೇರಿ 33 ಮಂದಿಯ ರಕ್ಷಣೆ

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯಿಂದಾಗಿ ಸಂಭವಿಸಿದ ಭೂಕುಸಿತದಿಂದ ಸಿಕ್ಕಿಂನ ಛಟೇನ್ ಪ್ರದೇಶದಲ್ಲಿ ಸಿಲುಕಿದ್ದ ಇಬ್ಬರು ವಿದೇಶಿಗರು ಸೇರಿದಂತೆ 33 ಮಂದಿಯನ್ನು ಭಾರತೀಯ ವಾಯುಪಡೆ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದೆ.

ಲಾಚೇನ್ ಗ್ರಾಮದ ಸಂಪರ್ಕವು ಸಂಪೂರ್ಣವಾಗಿ ಮುಚ್ಚಿಹೋಗಿದ್ದು, ಅಲ್ಲಿ ಸಿಲುಕಿರುವ 113 ಮಂದಿಯ ರಕ್ಷಣೆಗಾಗಿ ಕಾರ್ಯಾಚರಣೆ ನಡೆಯುತ್ತಿದೆ.

ಪ್ರತಿಕೂಲ ಹವಾಮಾನ, ಕಡಿದಾದ ಪ್ರದೇಶದಿಂದಾಗಿ ಕಾರ್ಯಾಚರಣೆ ವಿಳಂಬವಾಗುತ್ತಿದೆ. ಸೇನೆಯ ವಿಶೇಷ ತಂಡಗಳು ಮತ್ತು ಎಂಜಿನಿಯರಿಂಗ್ ಸಲಕರಣಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

3 ಸಾವಿರ ಜನಕ್ಕೆ ತೊಂದರೆ

ಇಟಾನಗರ: ಅರುಣಾಚಲ ಪ್ರದೇಶದಲ್ಲಿ ಬುಧವಾರವೂ ಭಾರಿ ಮಳೆ ಮುಂದುವರಿದಿದ್ದು, ಭೂಕುಸಿತ ಮತ್ತು ಪ್ರವಾಹದಿಂದಾಗಿ 23 ಜಿಲ್ಲೆಗಳಲ್ಲಿ ಮೂರು ಸಾವಿರಕ್ಕೂ ಅಧಿಕ ಮಂದಿ ತೊಂದರೆಗೊಳಗಾಗಿದ್ದಾರೆ.

ದಿಬಾಂಗ್ ಕಣಿವೆ ಮತ್ತು ಅಂಜಾವ್ ಜಿಲ್ಲೆಗಳಲ್ಲಿ ಮತ್ತೆ ಭೂಕುಸಿತ ಸಂಭವಿಸಿದೆ. ರಾಜ್ಯ ಪ್ರಮುಖ ನದಿಗಳ ನೀರಿನ ಹರಿವಿನ ಮಟ್ಟದಲ್ಲಿ ಭಾರಿ ಏರಿಕೆಯಾಗಿದೆ.

ಭಾಷಾ ವಿವಾದ ಕುರಿತು ಮಾತನಾಡದ ಕಮಲ್


ಕಮಲ್ ಹಾಸನ್

ಚೆನ್ನೈ (ಪಿಟಿಐ): ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ, 'ಥಗ್ ಲೈಫ್' ಚಿತ್ರತಂಡದೊಂದಿಗೆ ಬುಧವಾರ ವೇದಿಕೆ ಹಂಚಿಕೊಂಡ ನಟ ಕಮಲ್ ಹಾಸನ್, ತಮಿಳು-ಕನ್ನಡ ಭಾಷಾ ವಿವಾದ ಕುರಿತಂತೆ ಮಾತನಾಡಲಿಲ್ಲ.

'ನನ್ನ ಬೆನ್ನಿಗೆ ನಿಂತ ತಮಿಳುನಾಡಿಗೆ ಧನ್ಯವಾದ' ಎಂದು ಕಮಲ್ ಹಾಸನ್ ಹೇಳಿದರು. 'ತಮಿಳಿನಿಂದ ಕನ್ನಡ ಹುಟ್ಟಿದೆ' ಎಂಬ ಅವರ ಹೇಳಿಕೆ ವಿವಾದಕ್ಕೀಡಾಗಿದ್ದು, ಕರ್ನಾಟಕದಲ್ಲಿ ವ್ಯಾಪಕ ಆಕ್ರೋಶವೂ ವ್ಯಕ್ತವಾಗಿದೆ. ಹೀಗಾಗಿ, ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

ನಟ ಸಿಲಂಬರಸನ್ ಸೇರಿದಂತೆ ಚಿತ್ರದ ನಟ–ನಟಿಯರು ವೇದಿಕೆಯಲ್ಲಿದ್ದರು. ಕನ್ನಡ ಕುರಿತ ಹೇಳಿಕೆ ವಿಚಾರವಾಗಿ ಕರ್ನಾಟಕ ಹೈಕೋರ್ಟ್ ಅವರನ್ನು ತರಾಟೆಗೆ ತೆಗೆದುಕೊಂಡ ನಂತರ ಕಮಲ್ ಹಾಸನ್ ಇದೇ ಮೊದಲ ಬಾರಿಗೆ ಸಾರ್ವಜನಿಕ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ.

'ಚಿತ್ರತಂಡ ಬಹಳ ಶ್ರಮಪಟ್ಟಿದೆ. ತಾಂತ್ರಿಕ ಸಿಬ್ಬಂದಿ ಶ್ರಮದಿಂದ ಚಿತ್ರವು ಅಂತರರಾಷ್ಟ್ರೀಯ ಗುಣಮಟ್ಟದಿಂದ ಕೂಡಿದೆ' ಎಂದರು.

ಚಿತ್ರ ನಿರ್ದೇಶಕ ಮಣಿರತ್ನಂ ಅವರನ್ನು ಹೊಗಳಿದ ಅವರು, 'ಮಣಿರತ್ನಂ ಅವರು 'ಸಿನಿಮಾ ಜ್ಞಾನಿ'ಯಾಗಿ ಹೊರಹೊಮ್ಮಿದ್ದಾರೆ. ಅವರೊಂದಿಗೆ ಕೆಲಸ ಮಾಡಲು ನಾನು ಉತ್ಸುಕವಾಗಿದ್ದೇನೆ' ಎಂದು ಹೇಳಿದರು.

ಚಿತ್ರವು ಜೂನ್ 5ರಂದು ಬಿಡುಗಡೆಯಾಗಲಿದೆ.


ಚೆನಾಬ್ ರೈಲ್ವೆ ಸೇತುವೆ —ಪಿಟಿಐ ಚಿತ್ರ

ಜಗತ್ತಿನ ಅತಿ ಎತ್ತರದ ಚೆನಾಬ್ ಸೇತುವೆ ನಾಳೆ ಉದ್ಘಾಟನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜಗತ್ತಿನ ಅತಿ ಎತ್ತರದ ಚೆನಾಬ್ ರೈಲ್ವೆ ಸೇತುವೆಯನ್ನು ಶುಕ್ರವಾರ ಉದ್ಘಾಟಿಸಲಿದ್ದಾರೆ.

ಇದೇ ವೇಳೆ ₹46,000 ಕೋಟಿಗೂ ಅಧಿಕ ವೆಚ್ಚದ ಯೋಜನೆಗಳಿಗೆ ಜಮ್ಮು ಮತ್ತು ಕಾಶ್ಮೀರದ ಕಟ್ರಾದಲ್ಲಿ ಚಾಲನೆ ನೀಡಲಿದ್ದಾರೆ.

ಉಧಂಪುರ–ಶ್ರೀನಗರ–ಬಾರಾಮುಲ್ಲಾ ರೈಲು ಸಂಪರ್ಕ ಯೋಜನೆ (ಯುಎಸ್‌ಬಿಆರ್‌ಎಲ್) ಮತ್ತು ಕಟ್ರಾ-ಶ್ರೀನಗರ ನಡುವೆ ಸಂಚರಿಸುವ ವಂದೇ ಭಾರತ ರೈಲಿಗೂ ಹಸಿರು ನಿಶಾನೆ ತೋರಲಿದ್ದಾರೆ.

ಚೆನಾಬ್ ಸೇತುವೆಯ ವೈಶಿಷ್ಟ್ಯ

359 ಮೀಟರ್ ನದಿಮಟ್ಟದಿಂದ ಸೇತುವೆಯ ಎತ್ತರ	**1,315** ಮೀಟರ್ ಕಮಾನು ಸೇತುವೆಯ ಉದ್ದ	**35** ಮೀಟರ್ ವಿಶ್ವವಿಖ್ಯಾತ ಐಫೆಲ್ ಟವರ್‌ಗಿಂತ ಅಧಿಕ ಎತ್ತರ

ಯುಎಸ್‌ಬಿಆರ್‌ಎಲ್ ವಿಶೇಷತೆ

₹43,780 ಕೋಟಿ ಯೋಜನೆಗೆ ತಗುಲಿದ ವೆಚ್ಚ	**272** ಕಿ.ಮೀ. ಯೋಜನೆಯ ಉದ್ದ
36 ಯೋಜನೆ ಒಳಗೊಂಡ ಸುರಂಗಗಳು	**943** ಯೋಜನೆ ಒಳಗೊಂಡ ಸೇತುವೆಗಳು



ಮೀರಠ್: 52 ಉರಗಗಳ ಹತ್ಯೆ

ಮೀರಠ್ (ಪಿಟಿಐ): ಉತ್ತರ ಪ್ರದೇಶದ ಮೀರಠ್ ಜಿಲ್ಲೆಯ ಸಮೌಲಿ ಗ್ರಾಮದ ರೈತರೊಬ್ಬರ ಮನೆಯಿಂದ ಹೊರಬಂದಿದ್ದ ನೂರಾರು ಹಾವುಗಳ ಪೈಕಿ 52 ಹಾವುಗಳನ್ನು ಗ್ರಾಮಸ್ಥರು ಕೊಂದಿದ್ದಾರೆ. ಎರಡು ದಿನಗಳ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು, ಅದೇ ಮನೆಯಿಂದ ಎಂಟು ಹಾವುಗಳನ್ನು ರಕ್ಷಿಸಿದ್ದಾರೆ.

ಗ್ರಾಮದ ರೈತ ಮಹ್ಫೂಜ್ ಸೈಫಿ ಅವರ ಮನೆಯಿಂದ ಮಂಗಳವಾರ ರಾತ್ರಿ 8 ಉರಗಗಳನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ರಕ್ಷಿಸಲಾದ ಹಾವುಗಳು ವಿಷ ಪೂರಿತವಲ್ಲದ ಉರಗ ಜಾತಿಗೆ ಸೇರಿದವಾಗಿವೆ' ಎಂದು ವಿಭಾಗೀಯ ಅರಣ್ಯ ಅಧಿಕಾರಿ (ಡಿಎಫ್‌ಒ) ರಾಜೇಶ್ ಕುಮಾರ್ ಮಾಹಿತಿ ನೀಡಿದ್ದಾರೆ.

'ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಆಕ್ಷೇಪಾರ್ಹ ಹೇಳಿಕೆ ನೀಡುವುದಲ್ಲ'

ಲಖನೌ (ಪಿಟಿಐ): 'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಕೆಲ ಮಿತಿ ಇದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಭಾರತೀಯ ಸೇನೆ, ಯಾವುದೇ ವ್ಯಕ್ತಿ ವಿರುದ್ಧ ಮಾನಹಾನಿ ಹೇಳಿಕೆ ನೀಡಬಹುದು ಎಂಬ ಸ್ವಾತಂತ್ರ್ಯವಲ್ಲ' ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

2022ರ ಭಾರತ್ ಜೋಡೊ ಯಾತ್ರೆಯ ಸಂದರ್ಭದಲ್ಲಿ ಆಕ್ಷೇಪಾರ್ಹ ಹೇಳಿಕೆಯನ್ನು ನೀಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನೀಡಿದ್ದ ಸಮನ್ಸ್ ರದ್ದುಪಡಿಸಲು ಕೋರಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಪೀಠ ಇದೇ ವೇಳೆ ತಿರಸ್ಕರಿಸಿದೆ.

ಲಖನೌ ಪೀಠದ, ನ್ಯಾಯಮೂರ್ತಿ ಸುಭಾಷ್ ವಿದ್ಯಾರ್ಥಿ ಅವರಿದ್ದ ಪೀಠ ಈ ಕುರಿತು ಮೇ 29ರಂದು ಆದೇಶ ನೀಡಿದೆ. ಭಾರತೀಯ ಸೇನೆ ವಿರುದ್ಧ ರಾಹುಲ್ ಗಾಂಧಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದು ಹೇಳಿತು. ಈ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿ ಕೆಳಹಂತದ ಕೋರ್ಟ್ ಫೆಬ್ರುವರಿ ತಿಂಗಳಲ್ಲಿ ನೀಡಿದ್ದ ಆದೇಶವನ್ನು ಪೀಠವು ಎತ್ತಿಹಿಡಿಯಿತು.

ಸಂವಿಧಾನದ ವಿಧಿ 19 (1)(ಎ) ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಲಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಅದರರ್ಥ ಯಾವುದೇ ವ್ಯಕ್ತಿ, ಸೇನೆ ವಿರುದ್ಧ ಆಕ್ಷೇಪಾರ್ಹ ಹೇಳಿಕೆಯನ್ನು ನೀಡಬಹುದು ಎಂಬುದಲ್ಲ ಎಂದು ನ್ಯಾಯಮೂರ್ತಿ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

‘ಬ್ರಾಟ್ ಡೆಡ್ ಎನ್ನುತ್ತಿದ್ದಾರೆ, ಮಾಡುವುದೇನು?’

ತುಂಬಿದ ಕಣ್ಣಾಲಿ ದಿಕ್ಕು ತೋಚದ ಸ್ಥಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಸಿಬಿ ವಿಜಯೋತ್ಸವಕ್ಕೆ ಹೋಗುತ್ತೇವೆ ಎಂದು ನಾವು ಯಾರೂ ಮನೆಯಲ್ಲಿ ಹೇಳಿಲ್ಲ. ಈಗ ನೋಡಿದರೆ ಹೀಗಾಗಿದೆ. ನಮ್ಮ ಸ್ನೇಹಿತ ಕುಸಿದು ಬಿದ್ದಿದ್ದ. ಅವನು ಮಾತನಾಡುತ್ತಿರಲಿಲ್ಲ. ಇವರು (ವೈದ್ಯರು) ನೋಡಿದರೆ, ‘ಬ್ರಾಟ್ ಡೆಡ್’ ಎಂದು ಹೇಳುತ್ತಿದ್ದಾರೆ. ಏನು ಮಾಡುವುದು ಎಂದು ಗೊತ್ತಾಗುತ್ತಿಲ್ಲ...’

ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ ಗಾಯಗೊಂಡವರನ್ನು ಚಿಕಿತ್ಸೆಗೆ ಸೇರಿಸಲಾಗಿದ್ದ ವೈದೇಹಿ ಆಸ್ಪತ್ರೆ ಎದುರು ನಿಂತಿದ್ದ ಕಾಲೇಜು ವಿದ್ಯಾರ್ಥಿಯೊಬ್ಬನ ಚಡಪಡಿಕೆಯಿದು. ಇನ್ನೂ ಮೂರ್ನಾಲ್ಕು ವಿದ್ಯಾರ್ಥಿಗಳು ಆತನ ಜತೆಗೆ ದಿಗ್ಭ್ರಾಂತರಾಗಿ ನಿಂತಿದ್ದರು. ‘ಬ್ರಾಟ್ ಡೆಡ್’ ಎಂದು ವೈದ್ಯರು ಹೇಳಿದ್ದನ್ನು ಹೇಗೆ ಅರಗಿಸಿಕೊಳ್ಳಬೇಕೆಂದು ಗೊತ್ತಾಗದೆ ನಿಂತಿದ್ದರು.

ತುಂಬಿದ ಕಣ್ಣಾಲಿಗಳು, ಉಬ್ಬಿದ ಗಂಟಲು, ಏನು ಮಾಡಬೇಕೆಂದು ದಿಕ್ಕುತೋಚದ ಸ್ಥಿತಿ. ಅತೀವ ಸಂಚಾರ ದಟ್ಟಣೆಯ ಮಲ್ಯ ರಸ್ತೆಯಲ್ಲೂ ಸ್ಮಶಾನ ಮೌನ. ಅಷ್ಟರಲ್ಲೇ ಹೊರಬಂದ ವೈದ್ಯರೊಬ್ಬರು ಮತ್ತೊಂದು ಯುವಕರ ಗುಂಪಿನತ್ತ ಹೋಗಿ, ಏನೋ ಮಾಹಿತಿ ನೀಡಿದರು. ಆ ಗುಂಪಿನಲ್ಲಿದ್ದ ಒಂದಿಬ್ಬರು ಯುವಕ ಯುವತಿಯರು ಕುಸಿದು ಕೂತರು.

ಅವರತ್ತ ನುಗ್ಗಿದ ಸುದ್ದಿವಾಹಿನಿಗಳ ಕ್ಯಾಮೆರಾಮನ್‌ಗಳನ್ನು ತಡೆದ ಯುವಕನೊಬ್ಬ, ‘ದಯವಿಟ್ಟು ಶೂಟ್ ಮಾಡಬೇಡಿ ಸರ್. ನಮ್ಮ ಸ್ನೇಹಿತೆ ನಮ್ಮೊಂದಿಗೆ ಬಂದಿದ್ದಾಳೆ ಎಂದು ಅವರ ಅಪ್ಪ–ಅಮ್ಮನಿಗೆ ಗೊತ್ತಿಲ್ಲ. ಟಿ.ವಿಯಲ್ಲಿ ನೋಡಿದರೆ ಗಾಬರಿಯಾಗುತ್ತಾರೆ. ನಾವು ಹೇಗೋ ತಿಳಿಸುತ್ತೇವೆ’ ಎಂದು ಕೈಮುಗಿದ.

ಆ ಹೊತ್ತಿಗೆ ಕಸ್ತೂರಬಾ ರಸ್ತೆ ಕಡೆಯಿಂದ ಬಂದ ಕಾರೊಂದು ಆಸ್ಪತ್ರೆಯ ತುರ್ತು ವಿಭಾಗದ ಎದುರು ನಿಂತಿತು. ಕಾರಿನಿಂದಿಳಿದ ಯುವಕರು, ಯುವತಿಯೊಬ್ಬಳನ್ನು ಹೊತ್ತು ಆಸ್ಪತ್ರೆಯೊಳಕ್ಕೆ ಹೋದರು. ಆಕೆಯ ಕಾಲು ತಿರುಚಿಕೊಂಡಿತ್ತು. ಅದರ ಬೆನ್ನಲ್ಲೇ ಮತ್ತೊಂದು ಕಾರಿನಲ್ಲಿ ಇನ್ನೊಬ್ಬ ಗಾಯಾಳುವನ್ನು ಕರೆತರಲಾಯಿತು.

ಈ ವೇಳೆಗೆ ಹೊರಬಂದ ಆಸ್ಪತ್ರೆಯ ವೈದ್ಯಾಧಿಕಾರಿ ಹುಮೇರಿ, ‘16 ಗಾಯಾಳುಗಳನ್ನು ಇಲ್ಲಿಗೆ ಕರೆತರಲಾಗಿದೆ. ಅವರಲ್ಲಿ ನಾಲ್ವರು ಇಲ್ಲಿಗೆ ಬರುವ ಮುನ್ನವೇ ಮೃತಪಟ್ಟಿದ್ದರು. ಇನ್ನುಳಿದವರ ಸ್ಥಿತಿ ಸ್ಥಿರವಾಗಿದೆ’ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಅವರು ಗಾಯಾಳುಗಳ ಭೇಟಿಗೆ ಬಂದಾಗ, ಆಸ್ಪತ್ರೆ ಎದುರು ನೂರಾರು ಜನರು ಸೇರಿದ್ದರು. ಮುಖ್ಯಮಂತ್ರಿ, ಗೃಹ ಸಚಿವ ಮತ್ತು ಅಧಿಕಾರಿಗಳ ದಂಡು ಅಲ್ಲಿಂದ ಹೊರಟರು. ನೂರಾರು ಮಂದಿ ಇದ್ದರೂ ಅಲ್ಲಿ ಮೌನ ಮಡುಗಟ್ಟಿತ್ತು.

ನಿಟ್ಟುಸಿರು ಬಿಟ್ಟ ಗೆಳೆಯರು

ವೈದೇಹಿ ಆಸ್ಪತ್ರೆ ಎದುರು ಮತ್ತೊಂದು ಯುವಕರ ಗುಂಪು ನಿಂತಿತ್ತು. ಆಸ್ಪತ್ರೆ ಸಿಬ್ಬಂದಿ ಅವರನ್ನು ಒಳಗೆ ಬಿಟ್ಟಿರಲಿಲ್ಲ. ‘ನಮ್ಮ ಗೆಳೆಯನಿಗೆ ಸಹ ಗಾಯವಾಗಿತ್ತು. ಇಲ್ಲಿಗೆ ನಾವೇ ಕರೆದುಕೊಂಡುಬಂದು ಸೇರಿಸಿದೆವು. ಒಳಗೆ ಏನಾಗುತ್ತಿದೆಯೋ ಏನೋ’ ಎಂದು ಚಡಪಡಿಸುತ್ತಿದ್ದರು. ಅಷ್ಟರಲ್ಲಾಗಲೇ ಆರ್‌ಸಿಬಿ ಜರ್ಸಿ ತೊಟ್ಟಿದ್ದ ಯುವಕನೊಬ್ಬ ಆಸ್ಪತ್ರೆಯಿಂದ ಕುಂಟುತ್ತಾ ಹೊರಗೆ ಬಂದ. ಆತನನ್ನು ನೋಡಿ ಆ ಗುಂಪು ನಿಟ್ಟುಸಿರು ಬಿಟ್ಟಿತು. ಆ ಯುವಕ, ‘ಹೆಚ್ಚೇನೂ ಗಾಯವಾಗಿಲ್ಲ. ಮನೆಗೆ ಹೋಗಬಹುದು ಎಂದು ಹೇಳಿದರು’ ಎಂದು ತನ್ನ ಗೆಳೆಯರಿಗೆ ಹೇಳಿದ. ಊದಿಕೊಂಡಿದ್ದ ತನ್ನ ಕಾಲನ್ನು ತೋರಿಸಿದ. ಅವನಿಗೆ ಹೆಗಲು ಕೊಟ್ಟ ಗೆಳೆಯನೊಬ್ಬನ ಕಣ್ಣಾಲಿ ತುಂಬಿಕೊಂಡಿತು. ‘ಬನ್ನಿ ಹೋಗೋಣ’ ಎಂದು ಆಸ್ಪತ್ರೆಯತ್ತ ಬೆನ್ನು ಮಾಡಿದರು.



ಬೆಂಗಳೂರಿನ ವಿಧಾನಸೌಧದ ಎದುರು ಬುಧವಾರ ನಡೆದ ಆರ್‌ಸಿಬಿ ಆಟಗಾರರ ಸನ್ಮಾನ ಹಾಗೂ ವಿಜಯೋತ್ಸವಕ್ಕೆ ಸೇರಿದ್ದ ಜನಸಾಗರ ಪ್ರಜಾವಾಣಿ ಚಿತ್ರ: ರಂಜು ಪಿ.



ಬೆಂಗಳೂರಿನಲ್ಲಿ ನಡೆದ ವಿಜಯೋತ್ಸವದ ಸಂದರ್ಭದಲ್ಲಿ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ರಜ್ಞಾಹೀನರಾದ ಮಹಿಳೆಯನ್ನು ಆಂಬುಲೆನ್ಸ್ ನಲ್ಲಿ ಒಯ್ದರು.
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಆನಂತರವೂ ಆಂಬುಲೆನ್ಸ್‌ಗಳು ಬರುವುದು ನಿಲ್ಲಲಿಲ್ಲ. ಜನರು ಮತ್ತು ವಾಹನಗಳಿಂದ ಕ್ಕಿಕ್ಕಿರಿದು ತುಂಬಿದ್ದ ರಸ್ತೆಯಲ್ಲಿ ಆರ್‌ಸಿಬಿ ಜರ್ಸಿ ತೊಟ್ಟಿದ್ದ ನಾಲ್ಕಾರು ಯುವಕರು ಪ್ರತಿ ವಾಹನಕ್ಕೂ ಬಡಿದು, ‘ಜಾಗ ಬಿಡಿ. ಜಾಗ ಬಿಡಿ’ ಎಂದು ಓಡುತ್ತಿದ್ದರು. ಅವರು ಬಿಡಿಸಿಕೊಟ್ಟ ಜಾಗದಲ್ಲೇ ಆಂಬುಲೆನ್ಸ್ ಒಂದು ಆಸ್ಪತ್ರೆ ಬಳಿಗೆ ಬಂತು. ಅದರ ಸೈರನ್ ನಿಲ್ಲುತ್ತಿದ್ದಂತೆಯೇ, ಕಸ್ತೂರಬಾ ರಸ್ತೆ ಕಡೆಯಿಂದ ಮತ್ತೊಂದು ಆಂಬುಲೆನ್ಸ್‌ನ ಸದ್ದು ಕೇಳಲಾರಂಭಿಸಿತು.



ಜನದಟ್ಟಣೆಯಲ್ಲಿ ಸಿಲುಕಿದ್ದ ಯುವತಿಯೊಬ್ಬರನ್ನು ಪೊಲೀಸರು ರಕ್ಷಿಸಿದರು

ಕಾಲ್ತುಳಿತದಲ್ಲಿ ಎಂಜಿನಿಯರ್ ಸಾವು

ಕೆ.ಆರ್.ಪೇಟೆ: ಬೆಂಗಳೂರು ನಗರದ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದಲ್ಲಿ ತಾಲ್ಲೂಕಿನ ರಾಯಸಮುದ್ರ ಗ್ರಾಮದ ಯುವಕ ಪೂರ್ಣಚಂದ್ರ ಮೃತಪಟ್ಟಿದ್ದಾರೆ.



ಪೂರ್ಣಚಂದ್ರ

ಅವರು ಗ್ರಾಮದ ಶಿಕ್ಷಕ ಆರ್.ಬಿ. ಚಂದ್ರು -ಕಾಂತಾಮಣಿ ದಂಪತಿಯ ಪುತ್ರ. ಮೈಸೂರಿನ ಖಾಸಗಿ ಕಂಪನಿಯಲ್ಲಿ ಸಿವಿಲ್ ಎಂಜಿನಿಯರ್ ಆಗಿದ್ದರು. ಕ್ಷೇತ್ರದ ಶಾಸಕ ಎಚ್.ಟಿ. ಮಂಜು ನಿವಾಸಕ್ಕೆ ಭೇಟಿ ನೀಡಿದ್ದರು.

ಆರ್‌ಸಿಬಿ ಸಂತಾಪ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಕಾಲ್ತುಳಿತದಲ್ಲಿ 11 ಜನರು ಬಲಿಯಾಗಿರುವುದರ ಬಗ್ಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಸಂತಾಪ ಸೂಚಿಸಿದೆ. ರಾತ್ರಿ 9.24ರ ಸುಮಾರಿಗೆ ಅಧಿಕೃತ ಹೇಳಿಕೆಯನ್ನು ವಾಟ್ಸ್‌ಆ್ಯಪ್ ಮೂಲಕ ಸುದ್ದಿಮಾಧ್ಯಮಗಳಿಗೆ ಹಂಚಿಕೊಂಡಿದೆ.

‘ತಂಡವು ಬೆಂಗಳೂರಿಗೆ ಬಂದ ನಂತರ ನಡೆದ ಸಾರ್ವಜನಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಸಂಭವಿಸಿದ ದುರ್ಘಟನೆಗಳ ಕುರಿತು ಮಾಧ್ಯಮಗಳ ಮೂಲಕ ತಿಳಿದುಬಂದಿತು. ಈ ದುರ್ಘಟನೆಗಳಲ್ಲಿ ಸಂಭವಿಸಿದ ಜೀವಹಾನಿಗೆ ಆರ್‌ಸಿಬಿಯು ತೀವ್ರ ಶೋಕ ವ್ಯಕ್ತಪಡಿಸುತ್ತದೆ. ಮೃತ ವ್ಯಕ್ತಿಗಳ ಕುಟುಂಬಗಳ ಬಗ್ಗೆ ಸಂತಾಪ ವ್ಯಕ್ತಪಡಿಸುತ್ತದೆ. ಪರಿಸ್ಥಿತಿಯ ಬಗ್ಗೆ ತಿಳಿದಾಕ್ಷಣ ನಮ್ಮ ಕಾರ್ಯಕ್ರಮವನ್ನು ತ್ವರಿತವಾಗಿ ಬದಲಿಸಿದ್ದೇವೆ. ಸ್ಥಳೀಯ ಆಡಳಿತದ ಮಾರ್ಗಸೂಚಿ ಮತ್ತು ಸಲಹೆಗಳನ್ನು ಅನುಸರಿಸಿದ್ದೇವೆ. ಪ್ರತಿಯೊಬ್ಬರ ಸುರಕ್ಷತೆ ಹಾಗೂ ಯೋಗಕ್ಷೇಮವನ್ನು ಬಯಸುತ್ತೇವೆ. ಜಾಗರೂಕರಾಗಿರಲು ನಮ್ಮ ಬೆಂಬಲಿಗರನ್ನು ಕೇಳಿಕೊಳ್ಳುತ್ತೇವೆ’ ಎಂದು ಆರ್‌ಸಿಬಿ ಹೇಳಿಕೆ ನೀಡಿದೆ.

ಅಪಘಾತದಲ್ಲಿ ಯುವಕ ಬಲಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಐಪಿಎಲ್ ಫೈನಲ್‌ನಲ್ಲಿ ಆರ್‌ಸಿಬಿ ತಂಡದ ಗೆಲುವಿನ ಸಂಭ್ರಮಾಚರಣೆ ನಂತರ ಮಂಗಳವಾರ ತಡರಾತ್ರಿ ನಗರದಲ್ಲಿ ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ ಒಬ್ಬ ಯುವಕ ಸಾವಿಗೀಡಾಗಿದ್ದು, ಮತ್ತಿಬ್ಬರು ಗಾಯಗೊಂಡಿದ್ದಾರೆ.

ಇಲ್ಲಿನ ವೆಂಕಟೇಶ ನಗರದ ನಿವಾಸಿ ವಿ.ಮೂರ್ತಿ ಅವರ ಪುತ್ರ ಅಭಿಷೇಕ್ (22) ಮೃತ ಯುವಕ. ಮಿಥುನ್ ಹಾಗೂ ಕೆ.ಅಭಿಷೇಕ್ ಗಾಯಗೊಂಡಿದ್ದಾರೆ. ಅವರನ್ನು ಮೆಗ್ಗಾನ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ.

ರಾತ್ರಿ ಕ್ರಿಕೆಟ್ ಪಂದ್ಯ ಮುಗಿದ ನಂತರ ಯುವಕರು ಬೈಕ್‌ಗಳಲ್ಲಿ ಸಂಭ್ರಮಾಚರಣೆಗೆ ಹೊರಟಿದ್ದರು. ಈ ವೇಳೆ ರವೀಂದ್ರನಗರ ಗಣಪತಿ ದೇವಸ್ಥಾನದ ಎದುರಿನ 100 ಅಡಿ ರಸ್ತೆಯಲ್ಲಿ ಬೈಕ್‌ಗಳ ಮಧ್ಯೆ ಡಿಕ್ಕಿ ಸಂಭವಿಸಿದೆ. ಈ ವೇಳೆ ತೀವ್ರವಾಗಿ ಗಾಯಗೊಂಡ ಅಭಿಷೇಕ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಪೂರ್ವ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಸಿದು ಬಿದ್ದ ಅಭಿಮಾನಿ ಮೃತ

ಮೂಡಲಗಿ (ಬೆಳಗಾವಿ ಜಿಲ್ಲೆ): ಮೂಡಲಗಿ ತಾಲ್ಲೂಕಿನ ಅವರಾದಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ವಿಜಯೋತ್ಸವ ವೇಳೆ ಆರ್‌ಸಿಬಿ ಕ್ರಿಕೆಟ್ ತಂಡದ ಅಭಿಮಾನಿ ಮಂಜುನಾಥ ಕಂಬಾರ ಕುಸಿದು ಬಿದ್ದು ಸಾವನ್ನಪ್ಪಿದರು.



ಮಂಜುನಾಥ ಕಂಬಾರ

‘ಅವರಾದಿ ಗ್ರಾಮದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಗೆಲುವಿನ ಸಂಭ್ರಮಾಚರಣೆ ವೇಳೆ ಕುಣಿಯುತ್ತ ಅವರು ಕುಸಿದು ಬಿದ್ದರು. ಅವರನ್ನು ತಕ್ಷಣವೇ ಮಹಾಲಿಂಗಪುರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಅವರು ಬದುಕುಳಿಯಲಿಲ್ಲ. ಅವರಿಗೆ 6 ತಿಂಗಳ ಹೆಣ್ಣುಮಗುವಿದೆ. ಪತ್ನಿ ಮತ್ತೆ ಗರ್ಭಿಣಿಯಾಗಿದ್ದಾರೆ’ ಎಂದು ಗ್ರಾಮಸ್ಥರು ‘ಪ್ರಜಾವಾಣಿ’ಗೆ ತಿಳಿಸಿದರು.

ಆರ್‌ಸಿಬಿ ತಂಡದ ಬಗ್ಗೆ ಭಾರಿ ಅಭಿಮಾನ ಹೊಂದಿದ್ದ ಮಂಜುನಾಥ ಫೈನಲ್ ಪಂದ್ಯ ವೀಕ್ಷಣೆಗೆ ಬೃಹತ್ ಎಲ್‌ಇಡಿ ಪರದೆ ವ್ಯವಸ್ಥೆ ಮಾಡಿದ್ದರು. ಪಟಾಕಿ, ಗುಲಾಲು ತಂದಿದ್ದರು. ನಾಲ್ಕು ದಿನಗಳಿಂದ ಸರಿಯಾಗಿ ಊಟ, ನಿದ್ದೆ ಮಾಡಿರಲಿಲ್ಲ. ಗ್ರಾಮದಲ್ಲಿ ‘ಅವರಾದಿ ವಾರಿಯರ್ಸ್’ ಎಂಬ ತಂಡ ಕಟ್ಟಿಕೊಂಡು ಕ್ರಿಕೆಟ್ ಟೂರ್ನಿಗಳಲ್ಲಿ ಭಾಗವಹಿಸುತ್ತಿದ್ದರು.



ಬೆಂಗಳೂರಿನಲ್ಲಿ ನಡೆದ ವಿಜಯೋತ್ಸವದ ಸಂದರ್ಭದಲ್ಲಿ ಪ್ರಜ್ಞಾಹೀನರಾದ ವ್ಯಕ್ತಿಯನ್ನು ಹೊತ್ತುಕೊಂಡು ಹೋದರು. ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜನದಟ್ಟಣೆ ನಡುವೆ ಸಿಲುಕಿಕೊಂಡ ಆಂಬುಲೆನ್ಸ್ – ಪ್ರಜಾವಾಣಿ ಚಿತ್ರ



ಬೆಂಗಳೂರಿನ ದುರಂತದಲ್ಲಿ ಮೃತರಾದವರ ಸಂಬಂಧಿಗಳು ಮತ್ತು ಗಾಯಗೊಂಡವರ ನೋವಿನಲ್ಲಿ ನಾನು ಮತ್ತು ಅಕ್ಷತಾ ಭಾಗಿಯಾಗಿದ್ದೇವೆ. ನಾವು ನಿಮ್ಮೊಂದಿಗೆ ಸಂಭ್ರಮಾಚಾರಣೆ ಮಾಡಿದ್ದೆವು; ಆದರೆ, ಈಗ ಶೋಕಾಚರಣೆ ಮಾಡುತ್ತಿದ್ದೇವೆ.
ರಿಷಿ ಸುನಕ್, ಬ್ರಿಟನ್‌ನ ಮಾಜಿ ಪ್ರಧಾನಿ

ಆರ್‌ಸಿಬಿ ಆಟಗಾರರಿಗೆ ಸರ್ಕಾರದ ಸನ್ಮಾನ

ಬೆಂಗಳೂರು: ಐಪಿಎಲ್ 18ನೇ ಆವೃತ್ತಿ ವಿಜೇತ ಆರ್‌ಸಿಬಿ ತಂಡದ ಆಟಗಾರರಿಗೆ ವಿಧಾನಸೌಧದಲ್ಲಿ ಬುಧವಾರ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ತೆರಳಿ, ಕನ್ನಡ ಬಾವುಟ ನೀಡುವ ಮೂಲಕ ಆಟಗಾರರನ್ನು ಬರಮಾಡಿಕೊಂಡರು. ವಿಧಾನಸೌಧದ ಪೂರ್ವದ ಮೆಟ್ಟಿಲುಗಳ ಮೇಲೆ ಸಂಜೆ 5ಕ್ಕೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ವಿರಾಟ್ ಕೊಹ್ಲಿ ಸೇರಿದಂತೆ ಆರ್‌ಸಿಬಿ ತಂಡದ ಎಲ್ಲ ಆಟಗಾರರೂ ಭಾಗವಹಿಸಿದ್ದರು.

ನೆಚ್ಚಿನ ಆಟಗಾರರನ್ನು ಕಣ್ತುಂಬಿಕೊಳ್ಳಲು ಒಂದು ಲಕ್ಷಕ್ಕೂ ಹೆಚ್ಚಿನ ಜನರು ವಿಧಾನಸೌಧದ ಮುಂದೆ ಜಮಾಯಿಸಿದ್ದರು. ಅಂಬೇಡ್ಕರ್ ವೀದಿಯಲ್ಲಿ ವಾಹನಗಳ ಸಂಚಾರ ನಿಷೇಧಿಸಲಾಗಿತ್ತು. ಇಡೀ ರಸ್ತೆಯಲ್ಲಿ ಜನಸಾಗರವೇ ನೆರೆದಿತ್ತು. ಯುವಕ–ಯುವತಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ನಡೆದುಕೊಂಡು ಹೋಗಲೂ ಸಾಧ್ಯವಾಗದಷ್ಟು ಜನಸಂದಣಿ ಇತ್ತು. ಆರ್‌ಸಿಬಿ.. ಆರ್‌ಸಿಬಿ, ಕೊಹ್ಲಿ.. ಕೊಹ್ಲಿ ಘೋಷಣೆಗಳು ಮುಗಿಲು ಮುಟ್ಟಿದ್ದವು.

ವಿಧಾನಸೌಧದ ಎಲ್ಲ ಗೇಟುಗಳಲ್ಲೂ ಭಾರಿ ಭದ್ರತೆ ಒದಗಿಸಲಾಗಿತ್ತು. ಸಾರ್ವಜನಿಕರಿಗೆ ವಿಧಾನಸೌಧದ ಆವರಣದ ಒಳಗೆ ಪ್ರವೇಶ ನಿಷೇಧಿಸಲಾಗಿತ್ತು. ಕೆಲವರು ಬ್ಯಾರಿಕೇಡ್, ಕಾಂಪೌಂಡ್ ಏರಿ ವಿಧಾನಸೌಧದ ಆವರಣ ಪ್ರವೇಶಿಸಲು ಪ್ರಯತ್ನಿಸಿದರು. ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಚದುರಿಸಿದರು. ಹೊರಗೆ ಹೋಗಿದ್ದ ವಿಧಾನಸೌಧದ ಸಿಬ್ಬಂದಿ ಒಳ ಪ್ರವೇಶಿಸಲು ಪರದಾಡಿದರು.

10 ನಿಮಿಷಕ್ಕೆ ಕಾರ್ಯಕ್ರಮ ಮುಕ್ತಾಯ:

ಸನ್ಮಾನ ಸಮಾರಂಭ ಕೇವಲ 10 ನಿಮಿಷಕ್ಕೆ ಮುಕ್ತಾಯವಾಯಿತು. ಎಲ್ಲ ಆಟಗಾರರನ್ನೂ ಒಟ್ಟಿಗೆ ಕೂರಿಸಿ, ಮೈಸೂರು ಪೇಟ, ಶಾಲು ಹಾಕಿ ಸನ್ಮಾನ ಮಾಡಲಲಾಯಿತು. ಸಚಿವರು, ಶಾಸಕರು ಹಾಗೂ ಅವರ ಕುಟುಂಬ ಪರಿವಾರ ಆಟಗಾರರ ಜತೆ ಸೆಲ್ಫಿಗಾಗಿ ಮುಗಿಬಿದ್ದರು. ಅವರ ವರ್ತನೆಗೆ ಆಟಗಾರರು ಬೇಸರ ವ್ಯಕ್ತಪಡಿಸಿದರು.



ವಿಜಯೋತ್ಸವದಲ್ಲಿ ಭಾಗವಹಿಸಲು ಬಂದ ಅಭಿಮಾನಿಗಳು ಕಾರ್ಯಕ್ರಮ ವೀಕ್ಷಣೆಗಾಗಿ ಮರ ಹತ್ತಿ ಕುಳಿತಿದ್ದ ದೃಶ್ಯ
–ಪ್ರಜಾವಾಣಿ ಚಿತ್ರ:ರಂಜು ಪಿ.

ಸಂಭ್ರಮವಲ್ಲ, ಶೋಕಸಾಗರ: 11 ಸಾವು

ಒಂದನೇ ಪುಟದಿಂದ...

ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯಲ್ಲಿ 35 ಸಾವಿರ ಆಸನಗಳ ವ್ಯವಸ್ಥೆಯಿದೆ. ಆದರೆ, ಮೂರು ಲಕ್ಷಕ್ಕೂ ಹೆಚ್ಚು ಜನರು ಬಂದಿದ್ದರು. ಇದರಿಂದ ಕೇಂದ್ರ ವಲಯದ ಕಬ್ಬನ್‌ಪಾರ್ಕ್ ಸುತ್ತಮುತ್ತ, ಮಹಾತ್ಮ ಗಾಂಧಿ ರಸ್ತೆ, ಕಸ್ತೂರ ಬಾ ರಸ್ತೆ, ಕ್ವೀನ್ಸ್ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತ, ಚಾಲುಕ್ಯ ವೃತ್ತ, ವಿಧಾನಸೌಧ ಸುತ್ತಮುತ್ತ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಆರ್‌ಸಿಬಿ ಆಟಗಾರರನ್ನು ನೋಡಲು ಗೇಟ್ ಹಾಗೂ ಬ್ಯಾರಿಕೇಡ್ ಮೇಲೇರಲು ಮುಂದಾಗಿ ಹಲವರು ಕೈ–ಕಾಲು ಮುರಿದುಕೊಂಡಿದ್ದಾರೆ.

ಕ್ರೀಡಾಂಗಣದ ವಿವಿಧ ದ್ವಾರಗಳ ಬಳಿಯೇ ಉಚಿತ ಟಿಕೆಟ್ ನೀಡಲಾಗುವುದು ಎಂದು ಆರ್‌ಸಿಬಿ ತನ್ನ ವೆಬ್‌ಸೈಟ್‌ನಲ್ಲಿ ಬುಧವಾರ ಮಧ್ಯಾಹ್ನ ಮಾಹಿತಿ ನೀಡಿತ್ತು. ಅದಕ್ಕೂ ಮೊದಲು ವಿಧಾನಸೌಧ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸುವುದಾಗಿ ರಾಜ್ಯ ಸರ್ಕಾರ ಹೇಳಿತ್ತು. ನೆಚ್ಚಿನ ಆಟಗಾರರನ್ನು ಕಣ್ತುಂಬಿಕೊಳ್ಳಬಹುದು ಎಂದು ಭಾವಿಸಿ ಎರಡೂ ಸ್ಥಳಗಳಲ್ಲೂ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರು.

ಕಬ್ಬನ್ ರಸ್ತೆ ಕಡೆಯಿಂದ ಕ್ರೀಡಾಂಗಣಕ್ಕೆ ಪ್ರವೇಶಿಸುವ ಮುಖ್ಯದ್ವಾರದ ಬಳಿ ಮೊದಲು ಕಾಲ್ತುಳಿತ ಸಂಭವಿಸಿದೆ. ಈ ವೇಳೆ ಗುಂಪು ಚದುರಿಸಲು ಲಾಠಿ ಬೀಸಿದ್ದರಿಂದ ಭಯದಲ್ಲಿ ಜನರು ಓಡಲು ಆರಂಭಿಸಿದರು. ಆಗ ನೆಲಕ್ಕೆ ಬಿದ್ದವರು ಅಸ್ವಸ್ಥಗೊಂಡರು.

‘ಗೇಟ್ ನಂ. 12ರ ಬಳಿಯೂ ಸಾಕಷ್ಟು ಅಭಿಮಾನಿಗಳು ಜಮಾಯಿಸಿದ್ದರು. ಸ್ಲ್ಯಾಬ್‌ವೊಂದು ಕೆಳಕ್ಕೆ ಬಿತ್ತು. ಜನರು ದಿಕ್ಕಾಪಾಲಾಗಿ ಓಡಲು ಆರಂಭಿಸಿದ್ದರಿಂದ ಅವಘಡ ಸಂಭವಿಸಿದೆ. ಇನ್ನು ಆಟಗಾರರ ಪ್ರವೇಶ ದ್ವಾರದ ಬಳಿ ಕಿಕ್ಕಿರಿದು ಸೇರಿದ್ದರು. ಪೊಲೀಸರಿಗೂ ಅವರನ್ನು ನಿಯಂತ್ರಿಸುವುದು ಅಸಾಧ್ಯವಾಗಿತ್ತು’ ಎಂದು ಪ್ರತ್ಯಕ್ಷದರ್ಶಿ ಪವನ್ ಹೇಳಿದರು.

ಪಟ್ಟು ಹಿಡಿದ ಅಭಿಮಾನಿಗಳು: ಕ್ರೀಡಾಂಗಣದಲ್ಲಿ ಸಂಜೆ 5ಕ್ಕೆ ಕಾರ್ಯಕ್ರಮ ನಿಗದಿಯಾಗಿತ್ತು. ಸಂಗೀತ ಕಾರ್ಯಕ್ರಮವನ್ನೂ ಆಯೋಜಿಸುವುದಾಗಿ ಮಾಧ್ಯಮಗಳಿಗೆ ಮಾಹಿತಿ ನೀಡಲಾಗಿತ್ತು. ನಿಗದಿತ ಸಮಯಕ್ಕೂ ಮೊದಲೇ ಸಾವಿರಾರು ಮಂದಿ ಆರ್‌ಸಿಬಿ ಅಭಿಮಾನಿಗಳು ಕ್ರೀಡಾಂಗಣದ ಬಳಿ ಸೇರಿದ್ದರು. ಕ್ರೀಡಾಂಗಣದ ಗೇಟ್ ಸಂಖ್ಯೆ 5 ಮತ್ತು 6ರ ಮೂಲಕ ಪ್ರವೇಶಕ್ಕೆ ಅವಕಾಶ ಕಲ್ಪಿಸುವಂತೆ ಅಭಿಮಾನಿಗಳು ಪಟ್ಟು ಹಿಡಿದಿದ್ದರು. ನಂತರ, ಗೇಟ್ ನಂಬರ್ 6ರಲ್ಲಿ ಕ್ರೀಡಾಂಗಣದ ಒಳಗೆ ನುಗ್ಗಲು ಯತ್ನಿಸಿದರು. ಅಲ್ಲಿಯೂ ಹಲವರು ಗಾಯಗೊಂಡರು.

‘ಗೇಟ್ ನಂ 18ರ ಬಳಿ ಅಭಿಮಾನಿಗಳಿಂದ ನೂಕುನುಗ್ಗಲು ಸಂಭವಿಸಿತು. ಇದರಿಂದಾಗಿ ಹಲವರು ಗಂಭೀರವಾಗಿ ಗಾಯಗೊಂಡರು. ಪೊಲೀಸರು ಅಭಿಮಾನಿಗಳನ್ನು ಚದುರಿಸಲು ಲಾಠಿ ಬೀಸಿದರು. ಅತ್ತ, ಗೇಟ್ ನಂಬರ್ 12ರಲ್ಲಿ ಅಭಿಮಾನಿಗಳ ಸಂಖ್ಯೆ ಹೆಚ್ಚಾಯಿತು. ಆಗ, ಕ್ರೀಡಾಂಗಣದ ಸಿಬ್ಬಂದಿ ಗೇಟ್ ತೆರೆದು ಒಳಕ್ಕೆ ಬಿಟ್ಟರು. ಬ್ಯಾರಿಕೇಡ್ ತಳ್ಳಿ ಒಳಕ್ಕೆ ನುಗ್ಗಲು ಆರಂಭಿಸಿದಾಗ ಕಾಲ್ತುಳಿತ ಸಂಭವಿಸಿದೆ. ಈ ಸ್ಥಳದಲ್ಲಿ ಮಕ್ಕಳು, ಅವರ ತಂದೆ–ತಾಯಿ, ಯುವತಿಯರು, ಯುವಕರು ಗಾಯಗೊಂಡರು’ ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದರು.

‘ಇಬ್ಬರು ಮಕ್ಕಳು ಸ್ಥಳದಲ್ಲೇ ಮೃತಪಟ್ಟರು. ಒಂಬತ್ತು ಮಂದಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕ್ರೀಡಾಂಗಣದ ಗೇಟ್ ನಂ: 3, 6, 7, 10, 14, 21ರಲ್ಲಿ ನೂಕಾಟ, ತಳ್ಳಾಟ ನಡೆದಿತ್ತು’ ಎಂದು ಮೂಲಗಳು ಹೇಳಿವೆ. ಕಾಲ್ತುಳಿತದ ಬಳಿಕ ಚಪ್ಪಲಿ, ಬ್ಯಾಗ್‌ಗಳನ್ನು ಬಿಟ್ಟು ಜನರು ಓಡಿದರು. ಕ್ರೀಡಾಂಗಣದ ಹಲವು ಗೇಟ್‌ಗಳ ಎದುರು ಚಪ್ಪಲಿಗಳ ರಾಶಿ ಬಿದ್ದಿದೆ.

ಬ್ಯಾರಿಕೇಡ್ ತಳ್ಳಿದರು, ಗ್ರಿಲ್ ದಾಟಿದರು

ವಿಧಾನಸೌಧ ಎದುರು ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರಿದ್ದರು. ವಿಧಾನಸೌಧದ ಗೇಟ್, ಗ್ರೀಲ್‌ಗಳನ್ನು ಹತ್ತಿ ಒಳ ನುಗ್ಗಿದರು. ಕೆಲವರು ಮರವನ್ನೂ ಏರಿದ್ದರು. ಕಬ್ಬನ್ ರಸ್ತೆಯಲ್ಲಿ ಉಸಿರುಗಟ್ಟಿಸುವ ವಾತಾವರಣ ಇತ್ತು.

ಕಾಲ್ತುಳಿತದಿಂದ ಸಾವಿನ ಸಂಖ್ಯೆ ಏರಿಕೆ ಆಗುತ್ತಿದ್ದಂತೆಯೇ ಪೊಲೀಸರು, ಧ್ವನಿವರ್ಧಕಗಳ ಮೂಲಕ ಕ್ರೀಡಾಂಗಣದಿಂದ ಹೊರಕ್ಕೆ ಹೋಗುವಂತೆ ಮನವಿ ಮಾಡಿದರು. ‘ಕಾಲ್ತುಳಿದಿಂದ ಸಾವುಗಳು ಸಂಭವಿಸಿವೆ. ಕೂಡಲೇ ಮನೆಗೆ ಹೋಗಿ’. ಆಂಬುಲೆನ್ಸ್ ಸಂಚಾರಕ್ಕೆ ಅವಕಾಶ ನೀಡಬೇಕೆಂದು ಮನವಿ ಮಾಡಿದ್ದು ಕಂಡು ಬಂತು.

ಆರ್‌ಸಿಬಿ ಆಟಗಾರರು ಕ್ರೀಡಾಂಗಣಕ್ಕೆ ಬಂದ ಕೂಡಲೇ ಅಭಿಮಾನಿಗಳ ಜಯಘೋಷ ಹೆಚ್ಚಾಗಿತ್ತು. ಪೊಲೀಸರು ಮನವಿ ಮಾಡಿದರೂ, ಅಭಿಮಾನಿಗಳು ಹೊರಗಡೆ ಹೋಗಲು ಹಿಂದೇಟು ಹಾಕಿದ್ದರು. ಆಗಲೂ ಕೆಲವರು ತಳ್ಳಾಟ ನಡೆದು ಅಸ್ವಸ್ಥಗೊಂಡರು.

ಹೊರಗಿನ ಸಿಬ್ಬಂದಿ ಬಂದಿರಲಿಲ್ಲ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2025ರ ಐಪಿಎಲ್ ಟೂರ್ನಿಯ ವಿವಿಧ ಪಂದ್ಯಗಳನ್ನು ಯಶಸ್ವಿಯಾಗಿ ಸಂಘಟನೆ ಮಾಡಲಾಗಿತ್ತು. ಪಂದ್ಯ ನೋಡಲು ಬರುವಷ್ಟೇ ಸಂಖ್ಯೆಯಲ್ಲಿ ಅಭಿಮಾನಿಗಳು ವಿಜಯೋತ್ಸವಕ್ಕೆ ಬರುತ್ತಾರೆಂದು ಭಾವಿಸಿ ಪೊಲೀಸರು ಭದ್ರತಾ ವ್ಯವಸ್ಥೆ ಮಾಡಿಕೊಂಡಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಹೊರಗಿನ ಸಿಬ್ಬಂದಿಯನ್ನು ಕರೆಸಿಕೊಂಡಿರಲಿಲ್ಲ. ಕಾಲ್ತುಳಿತದ ಘಟನೆಯ ಬಳಿಕ ಬೇರೆ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಬಂದರು. ಜನರು ಕಿಕ್ಕಿರಿದು ಸೇರಿದ್ದರಿಂದ ಕ್ರೀಡಾಂಗಣದ ಬಳಿಗೆ ಪೊಲೀಸರಿಗೆ ತಲುಪುವುದೂ ಕಷ್ಟವಾಗಿತ್ತು.

‘ದಿಢೀರ್ ಆಯೋಜನೆಯಿಂದಲೇ ಗಡಿಬಿಡಿ’

‘ಇಂತಹ ದೊಡ್ಡ ಕಾರ್ಯಕ್ರಮ ಆಯೋಜಿಸುವ ಮುನ್ನ ಗುಪ್ತಚರ ಇಲಾಖೆಯಿಂದ ಮಾಹಿತಿ ಪಡೆದುಕೊಳ್ಳಬೇಕು. ಮಾಹಿತಿ ಮತ್ತು ಶಿಫಾರಸುಗಳನ್ನು ಆಧರಿಸಿಯೇ ಕಾರ್ಯಕ್ರಮದ ಸ್ಥಳ ನಿಗದಿ ಮಾಡಬೇಕು. ಆದರೆ ಈ ಶಿಷ್ಟಾಚಾರವನ್ನು ಪಾಲಿಸದೆಯೇ, ದಿಢೀರ್ ಎಂದು ಕಾರ್ಯಕ್ರಮ ಆಯೋಜಿಸಿದ್ದೇ ಅನಾಹುತಕ್ಕೆ ದಾರಿಯಾಯಿತು’ ಎಂದು ರಾಜ್ಯ ಸರ್ಕಾರದ ಶಿಷ್ಟಾಚಾರ ವಿಭಾಗದ ಮೂಲಗಳು ‘ಪ್ರಜಾವಾಣಿ’ಗೆ ಮಾಹಿತಿ ನೀಡಿವೆ.

‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಆಚರಿಸುವ ಬಗ್ಗೆ ಸಂಬಂಧಿತ ಇಲಾಖೆಗಳಿಗೆ ಮಾಹಿತಿ ನೀಡಿರಲಿಲ್ಲ. ಈ ಕಾರಣದಿಂದ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿರಲಿಲ್ಲ. ಲಕ್ಷಾಂತರ ಜನರು ಕ್ರೀಡಾಂಗಣದತ್ತ ಬಂದಿದ್ದರಿಂದ, ಅವರನ್ನು ನಿಯಂತ್ರಿಸುವುದು ಕಷ್ಟವಾಯಿತು. ಸಂಜೆ 6ರ ನಂತರ ಇನ್ನೂ ಹೆಚ್ಚಿನ ಸಿಬ್ಬಂದಿಯನ್ನು ಕರೆಸಿಕೊಳ್ಳಲಾಯಿತು. ಮೊದಲೇ ಮಾಹಿತಿ ನೀಡಿದ್ದರೆ, ಈ ಗಡಿಬಿಡಿಯನ್ನು ತಪ್ಪಿಸಬಹುದಿತ್ತು. ಯಾರನ್ನು ಕ್ರೀಡಾಂಗಣದ ಒಳಗೆ ಬಿಡಬೇಕು, ಯಾರನ್ನು ಬಿಡಬಾರದು ಎಂಬುದರ ಬಗ್ಗೆ ಪೊಲೀಸರಿಗೂ ಸ್ಪಷ್ಟ ಮಾಹಿತಿ ಒದಗಿಸಿರಲಿಲ್ಲ’ ಎಂದು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಭದ್ರತೆಗೆ ನಿಯೋಜಿತರಾಗಿದ್ದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಪ್ರಜ್ಞಾಹೀನ ಬಾಲಕನೊಬ್ಬನನ್ನು ಪೊಲೀಸ್ ಅಧಿಕಾರಿಯೊಬ್ಬರು ಹೊತ್ತುಕೊಂಡು ಹೋದರು



ಸಡಗರ ಮರೆಸಿದ ದುರಂತ

ದಶದಿಕ್ಕುಗಳಿಂದ ಕ್ರೀಡಾಂಗಣಕ್ಕೆ ಅಭಿಮಾನಿಗಳ ಲಗ್ಗೆ

ಅನಾಹುತ ತಂದ ಹುಚ್ಚು, ಅತಿರೇಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್‌ನ 18ನೇ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚಾಂಪಿಯನ್ ಆಗಿರುವ ಸಂಭ್ರಮಕ್ಕೆ ಸಾಕ್ಷಿಯಾಗಲು ರಾಜಧಾನಿಯ ದಶದಿಕ್ಕುಗಳಿಂದ ಯುವ ಅಭಿಮಾನಿಗಳು ಸಾಗರೋಪಾದಿಯಾಗಿ ನಗರದ ಹೃದಯಭಾಗಕ್ಕೆ ಹರಿದು ಬಂದಿರುವುದೇ ಅನಾಹುತಕ್ಕೆ ಕಾರಣವಾಯಿತು. ಉನ್ಮಾದದ ಅಭಿಮಾನವು 11 ಜನರನ್ನು ಸಾವಿನ ದವಡೆಗೆ ದೂಡಿತು.

ಬಸ್, ಸ್ವಂತ ವಾಹನಗಳಲ್ಲಿ ನೇರವಾಗಿ ಸಾವಿರಾರು ಜನರು ಬಂದಿದ್ದರು. ಎಲ್ಲ ರಸ್ತೆಗಳು ಚಿನ್ನಸ್ವಾಮಿ ಸ್ಟೇಡಿಯಂ ಕಡೆಗೆ ಮುಖ ಮಾಡಿದಂತಾಗಿತ್ತು. ಅಲ್ಲದೇ ನಗರದ ಹೊರಗೆಯೇ ಇಳಿದ ಜನರನ್ನು ನಾಲ್ಕು ದಿಕ್ಕುಗಳಿಂದ ಮೆಟ್ರೊ ಹೊತ್ತು ತಂದಿತ್ತು. ನಿಲ್ಲಲು ಜಾಗವೇ ಇಲ್ಲದಂತಾಗಿದ್ದ ಮೆಟ್ರೊ ಒಳಗೂ ಅಭಿಮಾನಿಗಳು ಆರ್‌ಸಿಬಿ.. ಆರ್‌ಸಿಬಿ ಎಂದು ಕೂಗಿದರು. ಕಿವಿಯ ತಮಟೆ ಒಡೆದು ಹೋಗುವಷ್ಟು ಶಬ್ದದಿಂದಾಗಿ ಪ್ರಯಾಣಿಕರು ಕಿರಿಕಿರಿ ಅನುಭವಿಸಿದರು.

‘ನಾವು ಬೆವೆತು ಹೋದೆವು. ಕಿವಿಮುಚ್ಚಿಕೊಂಡೇ ಪ್ರಯಾಣಿಸಬೇಕಾಯಿತು. ಕಾಲು ಇಡಲು ಜಾಗ ಇಲ್ಲದಿದ್ದರೂ ಅಭಿಮಾನಿಗಳು ಕುಣಿಯತೊಡಗಿದ್ದರಿಂದ ಮೆಟ್ರೊ ಅಲುಗಾಡಿದಂತೆ ಭಾಸವಾಯಿತು’ ಎಂದು ಬುಧವಾರ ಮಧ್ಯಾಹ್ನ ಮೆಟ್ರೊದಲ್ಲಿ ಪ್ರಯಾಣಿಸಿದವರು ಅನುಭವ ಬಿಚ್ಚಿಟ್ಟರು.

ಮಧ್ಯಾಹ್ನ ಒಂದು ಗಂಟೆಯಿಂದ ಸಂಜೆವರೆಗೆ ಪ್ರವಾಹದಂತೆ ಹರಿದು ಬಂದಿದ್ದರಿಂದ ವಿಧಾನಸೌಧದ ಎದುರು, ಚಿನ್ನಸ್ವಾಮಿ ಸ್ಟೇಡಿಯಂ ಸುತ್ತಮುತ್ತ ಲಕ್ಷಾಂತರ ಮಂದಿ ಸೇರಿದ್ದರು. ಸ್ಟೇಡಿಯಂ ಒಳಗೆ ನಡೆದ ಅಭಿನಂದನಾ ಕಾರ್ಯಕ್ರಮ ವೀಕ್ಷಿಸಲು ಪ್ರವೇಶ ಶುಲ್ಕ ಇಲ್ಲದೇ ಇದ್ದಿದ್ದು ಎಲ್ಲ ಗೇಟ್‌ಗಳಲ್ಲಿ ನೂಕು ನುಗ್ಗಲು ಉಂಟಾಗಲು ಕಾರಣವಾಯಿತು.

ಐಪಿಎಲ್ ಟ್ರೋಫಿಯನ್ನೇ ಹೋಲುವ ಟ್ರೋಫಿಗಳನ್ನು ಇಟ್ಟುಕೊಂಡು ಹಲವರು ಜೀಪು, ತೆರೆದ ಕಾರು, ಬೈಕ್‌ಗಳಲ್ಲಿ ಮೆರವಣಿಗೆ ಮಾಡಿದರು. ಆರ್‌ಸಿಬಿ ತಂಡದ ಚಿತ್ರವನ್ನು ಪ್ರದರ್ಶಿಸುತ್ತಾ ವಾಹನಗಳಲ್ಲಿ ಸುತ್ತಾಡಿದರು. ಆರ್‌ಸಿಬಿಯ ಆಟಗಾರರನ್ನು ಕರೆದುಕೊಂಡು ಬರಲು ಎರಡು ಬಸ್‌ಗಳು ಹೊರಟಾಗ ಜನರು ಹುಚ್ಚೆದ್ದು ಕುಣಿದಿದ್ದರು.

ಪೊಲೀಸರು ಹಾಕಿದ ಬ್ಯಾರಿಕೇಡ್‌ಗಳು ಲೆಕ್ಕಕ್ಕೇ ಸಿಗಲಿಲ್ಲ. ಹಲವೆಡೆ ಬ್ಯಾರಿಕೇಡ್‌ಗಳನ್ನು ಕೆಳಗೆ ತಳ್ಳಲಾಗಿತ್ತು. ಹಲವರು ಬ್ಯಾರಿಕೇಡ್ ತಾಗಿ ಗಾಯಗೊಂಡರು. ಆರ್‌ಸಿಬಿ... ಆರ್‌ಸಿಬಿ ಎಂದು ಎಲ್ಲೆಡೆ ಮಾರ್ದನಿಸಿದ್ದರಿಂದ ಎಲ್ಲಿ ಏನಾಗುತ್ತಿದೆ ಎಂಬ ಮಾಹಿತಿ ಯಾರಿಗೂ ತಿಳಿಯದಂತಾಯಿತು.

ಮಧ್ಯೆ ಆಗಾಗ ಮಳೆ ಸುರಿದರೂ ಅಭಿಮಾನಿಗಳು ವಿಚಲಿತರಾಗಲಿಲ್ಲ. ಚಿನ್ನಸ್ವಾಮಿ ಸ್ಟೇಡಿಯಂನ ಒಂದು ಗೇಟ್‌ನಲ್ಲಿ ಉಂಟಾದ ಸಣ್ಣ ಘಟನೆ ಹಲವು ಕಡೆ ಕಾಲ್ತುಳಿತ ಉಂಟಾಗಲು ಕಾರಣವಾಯಿತು.

ಮೆಟ್ರೊ ನಿಲುಗಡೆ ಸ್ಥಗಿತ

ಆರ್‌ಸಿಬಿ ತಂಡದ ಅಭಿನಂದನೆಗಾಗಿ ಚಿನ್ನಸ್ವಾಮಿ ಕ್ರೀಡಾಂಗಣ ಮತ್ತು ವಿಧಾನಸೌಧಕ್ಕೆ ಅಭಿಮಾನಿಗಳು ಭಾರಿ ಸಂಖ್ಯೆಯಲ್ಲಿ ಮೆಟ್ರೊ ಮೂಲಕ ಬಂದಿದ್ದರಿಂದ ವಿಧಾನಸೌಧ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳು ಜನರಿಂದ ತುಂಬಿ ತುಳುಕುತ್ತಿದ್ದವು. ಜನರನ್ನು ನಿಯಂತ್ರಿಸಲು ಈ ಎರಡು ನಿಲ್ದಾಣಗಳಲ್ಲಿ ರೈಲು ನಿಲುಗಡೆಯನ್ನೇ ಬಿಎಂಆರ್‌ಸಿಎಲ್ ಸ್ಥಗಿತಗೊಳಿಸಿತು.


ಜನ ಹರಿದುಬಂದಿದ್ದರಿಂದಾಗಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಇಂಟರ್‌ಚೇಂಜ್ ನಿಲ್ದಾಣದಲ್ಲಿ, ನೂಕುನುಗ್ಗಲು ಉಂಟಾಯಿತು. ಹಸಿರು ಮಾರ್ಗ ಮತ್ತು ನೇರಳೆ ಮಾರ್ಗಕ್ಕೆ ಪ್ರಯಾಣ ಬದಲಾಯಿಸುವವರು ಪರದಾಡುವಂತಾಯಿತು. ಹಿರಿಯರು, ಮಹಿಳೆಯರು ಮುಂದೆ ಹೋಗಲಾಗದೇ, ಹಿಂದೆ ಬರಲಾರದೇ ಪ್ರಯಾಸ ಪಟ್ಟರು.

ಸಂಜೆ 4.30ರಿಂದ ಟೋಕನ್, ಕ್ಯೂಆರ್ ಟಿಕೆಟ್ ವಿತರಣೆಯನ್ನು ಕೂಡ ಸ್ಥಗಿತಗೊಳಿಸಿತು. ಇದರಿಂದಾಗಿ ಕೆ.ಆರ್. ಸರ್ಕಲ್ ಬಳಿಯ ಸರ್ ಎಂ. ವಿಶ್ವೇಶ್ವರಯ್ಯ ನಿಲ್ದಾಣ ಮತ್ತು ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಜನದಟ್ಟಣೆ ಉಂಟಾಯಿತು.

ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣದಲ್ಲಿಯೂ ತಾತ್ಕಾಲಿಕವಾಗಿ ಪ್ರವೇಶದ್ವಾರದ ಶಟರ್ ಎಳೆಯಲಾಯಿತು. ನಿಲ್ದಾಣದ ಒಳಗೆ ಹೋಗಿರುವ ಪ್ರಯಾಣಿಕರೆಲ್ಲರೂ ಮೆಟ್ರೊ ಹತ್ತಿದ ನಂತರ ಎರಡು ನಿಮಿಷ ಶಟರ್ ತೆಗೆದು ಪ್ರಯಾಣಿಕರನ್ನು ಒಳಗೆ ಬಿಡಲಾಯಿತು. ರಾತ್ರಿ 8.20ರ ಬಳಿಕ ಎಲ್ಲ ನಿಲ್ದಾಣಗಳಲ್ಲಿ ಮತ್ತೆ ಪ್ರವೇಶ ಆರಂಭವಾಯಿತು.



ವಿಧಾನಸೌಧದ ಮುಂಭಾಗ ನಡೆದ ಆರ್‌ಸಿಬಿ ವಿಜಯೋತ್ಸವದಲ್ಲಿ ಭಾಗವಹಿಸಲು ಬಂದಿದ್ದ ಅಭಿಮಾನಿಗಳ ಪರದಾಟ –ಚಿತ್ರ:ರಂಜು ಪಿ.



ಆರ್‌ಸಿಬಿ ಆಟಗಾರರ ಸನ್ಮಾನ ಹಾಗೂ ವಿಜಯೋತ್ಸವದ ವೇಳೆ ಮಿನ್ಸ್ಕ್ ಸ್ಕ್ವೇರ್ ಸುತ್ತಮುತ್ತ ಸೇರಿದ್ದ ಜನಸಾಗರ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಹೃದಯವಿದ್ರಾವಕ ಘಟನೆ: ಮೋದಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಐಪಿಎಲ್ ಕಪ್ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವ ಆಚರಣೆ ವೇಳೆ ಸಂಭವಿಸಿದ ಕಾಲ್ತುಳಿತ ಕುರಿತು ಪ್ರಧಾನಿ ನರೇಂದ್ರ ಮೋದಿ ದಿಗ್ಭ್ರಮೆ ವ್ಯಕ್ತ ಪಡಿಸಿದ್ದು, ‘ಇದು ಹೃದಯವಿದ್ರಾವಕ ಘಟನೆ’ ಎಂದು ಬುಧವಾರ ಹೇಳಿದ್ದಾರೆ.



ನರೇಂದ್ರ ಮೋದಿ

‘ಬೆಂಗಳೂರಿನಲ್ಲಿ ಸಂಭವಿಸಿದ ಈ ದುರಂತದಲ್ಲಿ, ತಮ್ಮವರನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ನನ್ನ ಸಾಂತ್ವನಗಳು. ಗಾಯಗೊಂಡವರು ಶೀಘ್ರವೇ ಗುಣರಾಗುವಂತೆ ಹಾರೈಸುವೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೂ ದುಃಖ ವ್ಯಕ್ತಪಡಿಸಿದ್ದಾರೆ.

ಸುರಕ್ಷತೆಗೆ ಆದ್ಯತೆ ಇರಲಿ: ರಾಹುಲ್

ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಘಟನೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕ ರಾಹುಲ್ ಗಾಂಧಿ, ಬುಧವಾರ ಶೋಕ ವ್ಯಕ್ತಪಡಿಸಿದ್ದಾರೆ.



ರಾಹುಲ್ ಗಾಂಧಿ

‘ಭವಿಷ್ಯದಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ವೇಳೆ ಸುರಕ್ಷತೆಗೆ ಆದ್ಯತೆ ನೀಡಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಉಭಯ ನಾಯಕರು ಸಲಹೆ ನೀಡಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

‘ಸಂತ್ರಸ್ತರೊಂದಿಗೆ ಕಾಂಗ್ರೆಸ್ ಪಕ್ಷ ನಿಲ್ಲಲಿದೆ. ಕರ್ನಾಟಕ ಸರ್ಕಾರದಿಂದ ಪರಿಹಾರ, ವೈದ್ಯಕೀಯ ನೆರವು ಒದಗಿಸುವುದಕ್ಕೂ ಪಕ್ಷ ಪ್ರಯತ್ನಿಸಲಿದೆ’ ಎಂದು ಖರ್ಗೆ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಾಯಗೊಂಡವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದರು – ಪಿಟಿಐ ಚಿತ್ರ



ಪ್ರಜ್ಞಾಹೀನರಾದ ಯುವತಿಯನ್ನು ಆಸ್ಪತ್ರೆಗೆ ಒಯ್ದರು ಚಿತ್ರ: ಪ್ರಶಾಂತ್ ಎಚ್‌.ಜಿ.



ಕ್ರೀಡಾಂಗಣದ ಎದುರು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಚಪ್ಪಲಿ, ಬೂಟುಗಳು ದುರಂತಕ್ಕೆ ಕನ್ನಡಿ ಹಿಡಿದವು –ಪಿಟಿಐ ಚಿತ್ರ

‘2 ಲಕ್ಷದಿಂದ 3 ಲಕ್ಷ ಜನ ಸೇರಿದ್ದು ಅನಿರೀಕ್ಷಿತ’

‘ದುರಂತ ನಿರೀಕ್ಷಿಸಿರಲಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ವಿಜಯೋತ್ಸವ ಸಂದರ್ಭದಲ್ಲಿ ನಡೆದ ಈ ದುರಂತವನ್ನು ಕ್ರಿಕೆಟ್ ಅಸೋಸಿಯೇಶನ್ ಅಥವಾ ನಾವು ನಿರೀಕ್ಷಿಸಿರಲಿಲ್ಲ. ಕಾಲ್ತುಳಿತದಿಂದ ಸಾವಿಗೀಡಾದವರಲ್ಲಿ ಹೆಚ್ಚಿನವರು ಯುವ ವಯಸ್ಸಿನವರು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೌರಿಂಗ್ ಮತ್ತು ವೈದೇಹಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗಾಯಗೊಂಡವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಗಾಯಗೊಂಡವರಿಗೆ ಸಾರಿಗೆ ವ್ಯವಸ್ಥೆ ಸೇರಿದಂತೆ ಎಲ್ಲ ನೆರವನ್ನು ಸರ್ಕಾರ ನೀಡಲಿದೆ’ ಎಂದರು.

‘ವಿಜಯೋತ್ಸವ ಕಾರ್ಯಕ್ರಮವನ್ನು ಕ್ರಿಕೆಟ್ ಅಸೋಸಿಯೇಶನ್‌ನವರು ಹಮ್ಮಿಕೊಂಡಿದ್ದರು. ಸರ್ಕಾರದ ವತಿಯಿಂದ ವಿಧಾನಸೌಧದ ಎದುರು ಕಾರ್ಯಕ್ರಮ ಆಯೋಜಿಸಲಾಗಿತ್ತು. ನಮ್ಮ ನಿರೀಕ್ಷೆಗೂ ಮೀರಿ ಜನ, ಅಭಿಮಾನಿಗಳು ಸೇರಿದ್ದರು. ವಿಧಾನಸೌಧ ಎದುರು ನಡೆದ ಸಮಾರಂಭದಲ್ಲಿ 1 ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರೂ ಯಾವುದೇ ಅನಿರೀಕ್ಷಿತ ಘಟನೆಗಳು, ದುರಂತ ನಡೆದಿಲ್ಲ’ ಎಂದರು.

‘ದೊಡ್ಡ ಪ್ರಮಾಣದ ದುರಂತ ಸಂಭವಿಸಿದೆ. ಸಂಭ್ರಮಾಚರಣೆ ಮಾಡುವಾಗ ಇಂತಹ ದುರಂತ ನಡೆಯಬಾರದಾಗಿತ್ತು. ಯಾರೂ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಕ್ರಿಕೆಟ್ ಸ್ಟೇಡಿಯಂನಲ್ಲಿ 35 ಸಾವಿರ ಜನರು ಕುಳಿತುಕೊಳ್ಳಲು ವ್ಯವಸ್ಥೆಯಿದೆ. ಸ್ಟೇಡಿಯಂ ಸಾಮರ್ಥ್ಯದಷ್ಟು ಜನರ ನಿರೀಕ್ಷೆಯಿತ್ತು. ಆದರೆ, 2 ಲಕ್ಷದಿಂದ 3 ಲಕ್ಷ ಜನರು ಬಂದಿದ್ದಾರೆ. ಇಷ್ಟೊಂದು ಪ್ರಮಾಣದಲ್ಲಿ ಜನರು ಬರುವ ನಿರೀಕ್ಷೆ ಮಾಡಿರಲಿಲ್ಲ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ವಿಜಯಯಾತ್ರೆಗೆ ಅವಕಾಶ ನೀಡಿರಲಿಲ್ಲ: ಸಿ.ಎಂ

‘ಇಂತಹದ್ದೊಂದು ನೂಕುನುಗ್ಗಲು ನಡೆದು, ಜನಸಂದಣಿ ನಿಯಂತ್ರಿಸಲಾಗದೆ, ಅಹಿತಕರ ಘಟನೆ ನಡೆಯಬಹುದೆಂಬ ನಿರೀಕ್ಷೆಯಿಂದಲೇ ತಂಡದ ವಿಜಯ ಯಾತ್ರೆಗೆ ಅವಕಾಶ ನೀಡದೆ ಮುಂಜಾಗ್ರತೆ ವಹಿಸಲಾಗಿತ್ತು’ ಎಂದು ಸಿದ್ದರಾಮಯ್ಯ ಹೇಳಿದರು.

‘ಕ್ರೀಡಾಂಗಣದ ಬಳಿ ಜನ ಕಿಕ್ಕಿರಿದು ಸೇರಿದ್ದರಿಂದ ನೂಕುನುಗ್ಗಲು ಉಂಟಾಗಿ ಈ ಅವಘಡ ಸಂಭವಿಸಿದೆ. ದುರಂತ ನಡೆಯಬಾರದಿತ್ತು. ನಡೆದು ಹೋಗಿದೆ. ದುರಂತದ ನೋವು, ಗೆಲುವಿನ ಸಂಭ್ರಮವನ್ನು ಅಳಿಸಿಹಾಕಿದೆ. ಆದರೆ, ಈ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ’ ಎಂದರು.



ಕಾರ್ಯಕ್ರಮ ವೀಕ್ಷಿಸಲು ವಿಧಾನಸೌಧದ ಎದುರು ಸಾಗುತ್ತಿದ್ದ ಬಸ್ ಏರಿದ ಅಭಿಮಾನಿಗಳು –ಚಿತ್ರ:ರಂಜು ಪಿ.

ಸರ್ಕಾರವೇ ಹೊಣೆ: ಟೀಕೆಗಳ ಸುರಿಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕಾಲ್ತುಳಿತಕ್ಕೆ ಸರ್ಕಾರವೇ ಹೊಣೆ. ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು’ ಎಂದು ಬಿಜೆಪಿಯ ಹಲವು ನಾಯಕರು ಒತ್ತಾಯಿಸಿದ್ದಾರೆ.

ಕಾಲ್ತುಳಿತಕ್ಕೆ ಸಿಲುಕಿ, ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಾಗರಿಕರ ಕ್ಷೇಮ ವಿಚಾರಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ವಿಜಯೋತ್ಸವದ ವೇಳೆ ನಿರೀಕ್ಷೆ ಮೀರಿ ಜನರು ಬಂದಿದ್ದಾರೆ. ಕಾಲ್ತುಳಿತಕ್ಕೆ ಸಿಲುಕಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಕೆಲವರು ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಇಂತಹ ದುರಂತಕ್ಕೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ’ ಎಂದು ದೂರಿದರು.

ಸಂಭ್ರಮಾಚರಣೆಗೆ ಸೇರಬಹುದಾದ ಜನರ ಸಂಖ್ಯೆಯನ್ನು ಸರಿಯಾಗಿ ಅಂದಾಜಿಸದೇ ಇರುವುದರಿಂದ ದುರಂತ ನಡೆದಿದೆ. ಸೂಕ್ತ ವ್ಯವಸ್ಥೆ ಮಾಡಿಕೊಂಡು ಮತ್ತೊಂದು ದಿನ ಸಂಭ್ರಮಾಚರಣೆ ಹಮ್ಮಿಕೊಳ್ಳಬಹುದಿತ್ತು. ಸರ್ಕಾರದ ಆತುರದ ನಿರ್ಧಾರವೇ ದುರಂತಕ್ಕೆ ಕಾರಣ. ಇದಕ್ಕೆ ಯಾರು ಹೊಣೆ? ರಾಜ್ಯ ಸರ್ಕಾರ ಮೃತರ ಕುಟುಂಬಗಳಿಗೆ ಸೂಕ್ತ ಪರಿಹಾರ ಘೋಷಿಸಬೇಕು. ಸೂಕ್ತ ಚಿಕಿತ್ಸೆ ಕೊಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

‘ಸರ್ಕಾರಿ ಪ್ರಾಯೋಜಿತ ಕೊಲೆ’

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಿಂದ ಸಂಭವಿಸಿದ ಸಾವುಗಳು ಸರ್ಕಾರಿ ಪ್ರಾಯೋಜಿತ ಕೊಲೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

ಆಸ್ಪತ್ರೆಗೆ ಭೇಟಿ ನೀಡಿ ಗಾಯಗೊಂಡವರ ಆರೋಗ್ಯ ವಿಚಾರಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನಡುವಿನ ಮುಸುಕಿನ ಗುದ್ದಾಟ ಕ್ರೆಡಿಟ್‌ವಾರ್ ರೂಪ ತಾಳಿದ್ದೇ ಬುಧವಾರದ ಸಂಭ್ರಮಾಚರಣೆಯ ಅವ್ಯವಸ್ಥೆಗೆ ಕಾರಣಾವಾ ಎಂಬ ಅನುಮಾನ ಮೂಡುತ್ತಿವೆ. ಸ್ಥಳದಲ್ಲಿದ್ದು ವ್ಯವಸ್ಥೆಯ ಮೇಲುಸ್ತುವಾರಿ ನೋಡಿಕೊಳ್ಳಬೇಕಾದ ಬೆಂಗಳೂರು ಉಸ್ತುವಾರಿ ಸಚಿವರೂ ಆದ ಉಪ ಮುಖ್ಯಮಂತ್ರಿ ಫೋಟೊ ತೆಗೆಸಿಕೊಳ್ಳಲು ವಿಮಾನ ನಿಲ್ದಾಣಕ್ಕೆ ಹೋಗುತ್ತಾರೆ. ಕಡೆಯ ಕ್ಷಣದವರೆಗೂ ಮೆರವಣಿಗೆ ಮಾಡಬೇಕೋ, ಬೇಡವೋ ಎನ್ನುವ ಸ್ಪಷ್ಟತೆಯೇ ಪೊಲೀಸರಿಗೆ ಇರಲಿಲ್ಲ ಎಂದು ದೂರಿದರು.

ಲಕ್ಷಾಂತರ ಜನರು ಸೇರುವ ಕ್ರೀಡಾಂಗಣದ ಬಳಿ ಆಂಬುಲೆನ್ಸ್, ಅಗ್ನಿಶಾಮಕ ವಾಹನ ಸೇರಿದಂತೆ ಯಾವುದೇ ಮುಂಜಾಗ್ರತಾ ವ್ಯವಸ್ಥೆ ಇರಲಿಲ್ಲ. ಇದಕ್ಕೆಲ್ಲಾ ಯಾರು ಹೊಣೆ? ತಮ್ಮ ಪ್ರಚಾರದ ತೆವಲಿಗೆ ಅಮಾಯಕರನ್ನು ಬಲಿ ತೆಗೆದುಕೊಂಡ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಕಿಂಚಿತ್ತಾದರೂ ಮಾನವೀಯತೆ, ಆತ್ಮಸಾಕ್ಷಿ ಇದ್ದರೆ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಒತ್ತಾಯಿಸಿದರು.

ಸರಿಯಾದ ಪೂರ್ವಸಿದ್ಧತೆ ಇಲ್ಲದೆ, ಪೊಲೀಸರಿಗೆ ಸಮಯ ಕೊಡದೆ ಅಭಿನಂದನಾ ಸಮಾರಂಭ ನಡೆಸಿದ್ದೇ ಈ ಅನಾಹುತಕ್ಕೆ ಕಾರಣ. ಮೃತರ ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಉನ್ನತ ತನಿಖೆಗೆ ಆಗ್ರಹ

ಪೂರ್ವಸಿದ್ಧತೆ ಮಾಡಿಕೊಳ್ಳದೆ ಅವಸರದಲ್ಲಿ ಎರಡು ಕಾರ್ಯಕ್ರಮ ಆಯೋಜನೆ ಮಾಡಿದ್ದು, ದೊಡ್ಡ ಸಂಖ್ಯೆಯಲ್ಲಿ ಜನರು ಸೇರಲು ಅವಕಾಶ ಮಾಡಿಕೊಟ್ಟಿದ್ದು ದುರಂತಕ್ಕೆ ಕಾರಣ. ಘಟನೆ ಬಗ್ಗೆ ಉನ್ನತಮಟ್ಟದ ತನಿಖೆ ನಡೆಸಬೇಕು ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಈ ಕುರಿತ್ ‘ಎಕ್ಸ್’ ಮಾಡಿರುವ ಅವರು, ‘ಹಿಂದೆ ವಿಶ್ವಕಪ್ ಗೆದ್ದಾಗ ಮುಂಬೈನಲ್ಲಿ ಮೆರವಣಿಗೆ ಮಾಡುವ ಮುಖಾಂತರ ಜನರಿಗೆ ಅಲ್ಲಲ್ಲಿ ಕ್ರಿಕೆಟ್ ಆಟಗಾರರನ್ನು ನೋಡಲು ಅವಕಾಶ ಕಲ್ಪಿಸಲಾಗಿತ್ತು. ಇದರಿಂದ ನೂಕುನುಗ್ಗಲಿಗೆ ಅವಕಾಶವೇ ಇರಲಿಲ್ಲ’ ಎಂದು ಸ್ಮರಿಸಿದ್ದಾರೆ.

ಆಟಗಾರರ ಅಭಿನಂದನಾ ಸಮಾರಂಭ, ತೆರೆದ ವಾಹನದ ಮೆರವಣಿಗೆ ಪೂರ್ವ ನಿರ್ಧರಿತವಾಗಿದ್ದರೂ, ಸರ್ಕಾರ ಸಂಪೂರ್ಣ ವಿಫಲವಾಗಿದೆ
ವಿ. ಸೋಮಣ್ಣ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ

ಸಂಭ್ರಮಾಚರಣೆ ಮೊದಲೇ ಆಯೋಜನೆ ಆಗಿತ್ತು. ಆದರೂ ಭದ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಇದು ನಿರ್ಲಕ್ಷ್ಯಕ್ಕೆ ಸಾಕ್ಷಿ, ಅಭಿಮಾನಿಗಳ ಸಾವಿಗೆ ಸರ್ಕಾರವೇ ಹೊಣೆ
ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಸಂಭ್ರಮದ ವೇಳೆ ನಡೆದ ಸಾವಿನ ಘಟನೆ ದಿಗ್ಭ್ರಮೆ ಮೂಡಿಸಿದೆ. ಬೇಜವಾಬ್ದಾರಿ ಸರ್ಕಾರದಿಂದ ಸಂಭ್ರಮೋತ್ಸವಕ್ಕೆ ಸೂತಕದ ಛಾಯೆ ಆವರಿಸಿದೆ
ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಸಮಾರಂಭವನ್ನು ಸರ್ಕಾರವು ಪೂರ್ವಸಿದ್ಧತೆ, ಭದ್ರತೆ ಜೊತೆ ಆಯೋಜಿಸಬಹುದಿತ್ತು. ಅಸಮರ್ಥ ಆಡಳಿತದಿಂದ ಅಮಾಯಕರು ಸಾವನ್ನಪ್ಪಿದ್ದಾರೆ
ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರ ನೈತಿಕ ಹೊಣೆ ಹೊರಬೇಕು. ಮೃತರ ಕುಟುಂಬದವರಿಗೆ ಸರ್ಕಾರ ₹25 ಲಕ್ಷ ಪರಿಹಾರ ನೀಡಬೇಕು
ಮಹೇಶ ಟೆಂಗಿನಕಾಯಿ, ಶಾಸಕ

ಹೆಣದ ಮೇಲೆ ಬಿಜೆಪಿ ರಾಜಕೀಯ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಣದ ಮೇಲೆ ಬಿಜೆಪಿ ರಾಜಕೀಯ ಮಾಡುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೂರಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುನ್ನೆಚ್ಚರಿಕೆ ಕ್ರಮವಾಗಿ ತೆರೆದ ವಾಹನ ಮೆರವಣಿಗೆಯನ್ನು ಪೊಲೀಸರು ರದ್ದುಗೊಳಿಸಿದ ನಿರ್ಧಾರವನ್ನು ಇದೇ ವಿರೋಧ ಪಕ್ಷಗಳು ಟೀಕೆ ಮಾಡಿದ್ದವು. ಈಗ ಸರ್ಕಾರದ ಮೇಲೆ ಆರೋಪ ಮಾಡುತ್ತಿವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ವಿಮಾನ ನಿಲ್ದಾಣದಿಂದಲೇ ಮೆರವಣಿಗೆ ಮಾಡಲು ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಆದರೆ, ತೆರೆದ ವಾಹನದಲ್ಲಿ ಮೆರವಣಿಗೆಗೆ ಅವಕಾಶ ನೀಡಬಾರದು ಎಂದು ಪೊಲೀಸ್ ಅಧಿಕಾರಿಗಳು ಸಲಹೆ ನೀಡಿದರು. ಈ ತೀರ್ಮಾನವನ್ನು ಖಂಡಿಸಿದ್ದ ಬಿಜೆಪಿ, ಪರಮೇಶ್ವರ ಅವರನ್ನು ಅಸಮರ್ಥ ಗೃಹ ಮಂತ್ರಿ ಎಂದು ಕರೆದಿತ್ತು’ ಎಂದರು.

‘ಯಾವುದೇ ತೊಂದರೆ ಆಗಬಾರದು ಎಂಬ ಕಾರಣಕ್ಕೆ ನಾನು ವಿಮಾನ ನಿಲ್ದಾಣಕ್ಕೆ ತೆರಳಿದೆ. ವಿಧಾನಸೌಧದ ಕಾರ್ಯಕ್ರಮದ ವೇಳೆ ಕಬ್ಬನ್ ಪಾರ್ಕ್ ಗೇಟ್ ಅನ್ನು ಮುಚ್ಚಿ ಅಗತ್ಯ ಕ್ರಮ ಕೈಗೊಳ್ಳಲಾಯಿತು’ ಎಂದು ವಿವರಿಸಿದರು.

‘ಜನದಟ್ಟಣೆ ಹೆಚ್ಚಾದ ಪರಿಣಾಮ ನಾವು ಎರಡು ತಾಸುಗಳ ಕಾಲ ಮೆಟ್ರೊ ಸಂಚಾರವನ್ನು ನಿಲ್ಲಿಸಿದ್ದೆವು. ಆದರೂ ಬಿಜೆಪಿ ಇದರಲ್ಲಿ ರಾಜಕಾರಣ ಮಾಡುತ್ತಿದೆ’ ಎಂದರು.

ಗುಪ್ತಚರ ಇಲಾಖೆ ವೈಫಲ್ಯವೇ ಎಂದು ಕೇಳಿದಾಗ, ‘ಇಲ್ಲಿ ಯಾರನ್ನೂ ದೂಷಿಸಲು ಆಗುವುದಿಲ್ಲ. ಈ ರೀತಿ ಏಕಾಏಕಿ, ಕುಟುಂಬ ಸಮೇತರಾಗಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನ ಬರುತ್ತಾರೆಂದು ನಿರೀಕ್ಷಿಸಿರಲಿಲ್ಲ’ ಎಂದರು.

ಸರ್ಕಾರಿ ಕಾರ್ಯಕ್ರಮ ಮುಂದೂಡಿಕೆ

ಬೆಂಗಳೂರು: ವಿಧಾನಸೌಧದಲ್ಲಿ ಗುರುವಾರ ನಡೆಯಲಿರುವ ಎಲ್ಲ ಸರ್ಕಾರಿ ಕಾರ್ಯಕ್ರಮಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಮಂದಿ ಮೃತಪಟ್ಟ ಕಾರಣ ಮುಂದೂಡಲಾಗಿದೆ. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅರಣ್ಯ ಇಲಾಖೆ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ವಿಧಾನಸೌಧದ ಪೂರ್ವದ್ವಾರ ಬಳಿ ಹಮ್ಮಿಕೊಂಡಿದ್ದ ‘ಪರಿಸರ ನಡಿಗೆ’ ಜಾಥಾ ಕಾರ್ಯಕ್ರಮ ಮತ್ತು ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ‘ವಿಶ್ವ ಪರಿಸರ ದಿನಾಚರಣೆ’ ಮತ್ತು ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮುಂದೂಡಲಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ನಡೆದ ಕಾರ್ಯಕ್ರಮಕ್ಕೆ ಪ್ರವೇಶಿಸಲು ಸಾವಿರಾರು ಜನರ ಜಿದ್ದಾಜಿದ್ದಿ

ಒಳಗೆ ಸಂಭ್ರಮ; ಹೊರಗೆ ನೂಕಾಟ

ಪ್ರಜಾವಾಣಿ ವಾರ್ತೆ





ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಅಭಿಮಾನಿಗಳೊಂದಿಗಿನ ಸಂಭ್ರಮಾಚರಣೆಯಲ್ಲಿ ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್, ವಿರಾಟ್ ಕೊಹ್ಲಿ ಟ್ರೋಫಿಯೊಂದಿಗೆ ಸಂಭ್ರಮಿಸಿದರು (ಎಡಚಿತ್ರ) ಆರ್‌ಸಿಬಿ ತಂಡದ ಆಟಗಾರ ಮಯಂಕ್ ಅಗರವಾಲ್ ಅವರು ಪ್ರೇಕ್ಷಕರತ್ತ ಐಪಿಎಲ್ ಕಪ್ ತೋರಿಸಿ ಸಂಭ್ರಮಿಸಿದರು ಚಿತ್ರಗಳು: ಪ್ರಶಾಂತ್ ಎಚ್.ಜಿ.

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ 6 ಗಂಟೆಯ ಸುಮಾರಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ ಮತ್ತು ಟ್ರೋಫಿಯನ್ನು ಅಭಿಮಾನಿಗಳಿಗೆ ಸಮರ್ಪಿಸುವ ಕಾರ್ಯಕ್ರಮ ಆರಂಭವಾಯಿತು. ಪ್ರೇಕ್ಷಕರ ಗ್ಯಾಲರಿಗಳು ಸಂಪೂರ್ಣ ಭರ್ತಿಯಾಗಿದ್ದವು. ಮೈದಾನ ಮಧ್ಯೆ ಭವ್ಯ ವೇದಿಕೆಯೂ ಸಿದ್ಧವಾಗಿತ್ತು. ರಘು ದೀಕ್ಷಿತ್ ಅವರ ಗಾಯನ ಕಾರ್ಯಕ್ರಮವೂ ನಡೆಯಿತು. ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್, ವಿರಾಟ್ ಕೊಹ್ಲಿ ಅವರು ಮಾತನಾಡಿದರು.

ಆಟಗಾರರಾದ ಮಯಂಕ್ ಅಗರವಾಲ್, ಸುಯಶ್ ಶರ್ಮಾ ಮತ್ತಿತರರು ಮೈದಾನದಲ್ಲಿ ಸುತ್ತು ಹಾಕಿ ಅಭಿಮಾನಿಗಳಿಗೆ ಕಪ್ ತೋರಿಸಿ ಸಂಭ್ರಮಿಸಿದರು. ಟಿ.ವಿ. ಮತ್ತು ಮೊಬೈಲ್ ಆ್ಯಪ್‌ಗಳಲ್ಲಿ ಈ ಕಾರ್ಯಕ್ರಮದ ನೇರಪ್ರಸಾರ ಶುರುವಾಗುತ್ತಿದ್ದಂತೆಯೇ ಕ್ರೀಡಾಂಗಣದ ಹೊರಗೆ ಜನರು ಹೆಚ್ಚಿನ ಪ್ರಮಾಣದಲ್ಲಿ ಸೇರತೊಡಗಿದ್ದರು. ಮೈದಾನ ಪ್ರವೇಶಿಸಲು ಶತಪ್ರಯತ್ನ ಪಟ್ಟರು. ಆದರೆ ಸಂಜೆಯ 5 ಗಂಟೆಯ ಸುಮಾರಿಗೇ ಕ್ರೀಡಾಂಗಣದ ಪ್ರವೇಶ ದ್ವಾರದ ಬಳಿ ಕಾಲ್ತುಳಿತಕ್ಕೆ ಕೆಲವು ಅಭಿಮಾನಿಗಳು ಮೃತಪಟ್ಟಿದ್ದರು. ಮತ್ತಷ್ಟು ಜನ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಅದರಲ್ಲಿ ಮಕ್ಕಳು, ಯುವಕ, ಯುವತಿಯರು ಇದ್ದರು. ಆದರೂ ಅಪಾರ ಸಂಖ್ಯೆಯ ಜನರ ಆಸಕ್ತಿ ಮಾತ್ರ ಕುಂದಿರಲಿಲ್ಲ.

ಆದರೆ ಕ್ರೀಡಾಂಗಣದೊಳಗಿನ ಪ್ರೇಕ್ಷಕರ ಗ್ಯಾಲರಿಯು ತುಂಬಿದ್ದರಿಂದ ಮತ್ತಷ್ಟು ಜನರನ್ನು ಒಳಬಿಡಲು ಸಾಧ್ಯವಿಲ್ಲ ಎಂದು ಮೈದಾನದ ಸಿಬ್ಬಂದಿ ಎಲ್ಲ ಗೇಟ್‌ಗಳನ್ನೂ ಬಂದ್ ಮಾಡಿದ್ದರು. 32 ಸಾವಿರ ಜನರ ಪ್ರೇಕ್ಷಕರ ಗ್ಯಾಲರಿ ತುಂಬಿದೆ ಎಂದು ಭದ್ರತಾ ಸಿಬ್ಬಂದಿ ಹೇಳುತ್ತಲೇ ಇದ್ದರು. ಕ್ರೀಡಾಂಗಣದ ಒಳಗಡೆ ಇದ್ದಷ್ಟೇ ಜನ ಹೊರಗಡೆಯೂ ಇದ್ದರು. ಅಷ್ಟೇ ಅಲ್ಲ. ಬೇರೆ ಬೇರೆ ದಿಕ್ಕುಗಳಿಂದ ಜನರು ಬಂದು ಸೇರುತ್ತಲೇ ಇದ್ದರು. ಪ್ರವೇಶದ್ವಾರಗಳ ಬಳಿ ಗುಂಪುಗೂಡಿ ಭದ್ರತಾ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸಿದ್ದರು.

'ಸಂಸ್ಥೆಯ ಸದಸ್ಯರಿಗಾಗಿಯೇ ಇರುವ 10ನೇ ನಂಬರ್ ದ್ವಾರದಲ್ಲಿಯೂ ಜನಜಂಗುಳಿ ಇದೆ. ಎರಡು ತಾಸಿನಿಂದ ಬಂದು ಕಾಯುತ್ತಿದ್ದೇವೆ. ಬೇರೆ ಕಡೆ ಗೇಟ್‌ಗಳು ಬಂದ್ ಆಗಿರುವುದರಿಂದ ಇಲ್ಲಿಗೆ ಜನರು ಬಂದು ಸೇರುತ್ತಿದ್ದಾರೆ. ನಮ್ಮ ಐಡಿ ಕಾರ್ಡ್‌ಗಳಿವೆ. ನಮ್ಮನ್ನು ಒಳಬಿಡಲು ಸಿಬ್ಬಂದಿ ಸಿದ್ಧರಾಗಿದ್ದಾರೆ. ಆದರೆ ಜನಜಂಗುಳಿ ದಾಟಿ ಒಳಹೋಗುವುದು ಹೇಗೆ? ಪೊಲೀಸರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇಷ್ಟೊಂದು ಅವ್ಯವಸ್ಥೆ ಆದರೆ ಹೇಗೆ' ಎಂದು ಗೇಟ್ ಮುಂದೆ ಇದ್ದ ಕೆಎಸ್‌ಸಿಎಯ ಕೆಲವು ಸದಸ್ಯರು ದೂರಿದರು.

ಆರ್‌ಸಿಬಿ ಜೆರ್ಸಿ ತೊಟ್ಟ ಅಭಿಮಾನಿಗಳ ಗುಂಪುಗಳಲ್ಲಿದ್ದ ಕೆಲವು ಯುವಕ, ಯುವತಿಯರು ಒಂದು ಗೇಟ್‌ನಿಂದ ಇನ್ನೊಂದು ಗೇಟ್‌ನತ್ತ ಓಡುತ್ತಿದ್ದರು. ಮುಂದಿದ್ದವರನ್ನು ತಳ್ಳುತ್ತಾ ಸಾಗುತ್ತಿದ್ದರು. ಇದರಿಂದಾಗಿ ವಯಸ್ಸಾದವರು, ಮಹಿಳೆಯರು ಮತ್ತು ಮಕ್ಕಳು ಗಾಸಿಗೊಂಡು ಹಿಡಿಶಾಪ ಹಾಕಿದರು. ಈ ನಡುವೆ ಕೆಲವರು 1–2 ವರ್ಷದ ಮಕ್ಕಳನ್ನು ಬಗಲಲ್ಲಿ ಎತ್ತಿಕೊಂಡು ಬಂದಿದ್ದರು. ತಮ್ಮ ಕಂದಮ್ಮಗಳನ್ನು ಗಟ್ಟಿಯಾಗಿ ಅವುಚಿಕೊಂಡು ಗುಂಪಿನಿಂದ ಹೊರಬರಲು ಹರಸಾಹಸಪಟ್ಟರು.

ಮಹಾತ್ಮಾ ಗಾಂಧಿ ರಸ್ತೆ, ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ ಮತ್ತು ಮ್ಯೂಸಿಯಂ ರಸ್ತೆಗಳಲ್ಲಿ ಜನಜಂಗುಳಿಯಿಂದಾಗಿ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಚಪ್ಪಲಿಗಳ ರಾಶಿ: ಮೈದಾನದ ಸುತ್ತ ಕೆಲವು ಪ್ರದೇಶಗಳಲ್ಲಿ ಚಪ್ಪಲಿ, ಬಟ್ಟೆಗಳ ರಾಶಿಗಳು ಬಿದ್ದಿದ್ದವು. ಬೇರೆ ಬೇರೆ ಗೇಟುಗಳ ಮೂಲಕ ಪ್ರವೇಶಿಸಲು ಯತ್ನಿಸಿದ ಜನರನ್ನು ಚದುರಿಸಲು ಲಘು ಲಾಠಿ ಪ್ರಯೋಗಿಸಿದಾಗ, ಹಲವರು ಚಪ್ಪಲಿಗಳನ್ನು ಅಲ್ಲೇ ಬಿಟ್ಟು ಓಡಿ ಹೋದರು.

ಈ ಸಂದರ್ಭದಲ್ಲಿ ಕೆಲವರು ತಮ್ಮ ಬ್ಯಾಗು, ಪರ್ಸು ಮತ್ತು ಮೊಬೈಲ್‌ಗಳನ್ನು ಕಳೆದುಕೊಂಡು ಕಣ್ಣೀರು ಹಾಕಿದ ದೃಶ್ಯಗಳೂ ಕಂಡುಬಂದವು.

ಹೃದಯ ಒಡೆದಿದೆ: ವಿರಾಟ್

ಕಾಲ್ತುಳಿತದಿಂದ 11 ಮಂದಿ ಸಾವಿಗೀಡಾಗಿರುವ ಬಗ್ಗೆ ವಿರಾಟ್ ಕೊಹ್ಲಿ ಪ್ರತಿಕ್ರಿಯಿಸಿದ್ದು, 'ಮಾತೇ ಹೊರಡದಂತಾಗಿದೆ.. ಹೃದಯ ಒಡೆದಿದೆ..' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿದ್ದಾರೆ. ಕಾಲ್ತುಳಿತದ ಬಗ್ಗೆ ಆರ್‌ಸಿಬಿ ಬಿಡುಗಡೆ ಮಾಡಿದ್ದ ಅಧಿಕೃತ ಹೇಳಿಕೆಯನ್ನು ಮರುಹಂಚಿಕೊಂಡು, ಈ ರೀತಿ ಪ್ರತಿಕ್ರಿಯಿಸಿದ್ದಾರೆ.



18 ವರ್ಷಗಳ ನಂತರ ಆರ್ ಸಿ ಬಿ ಐಪಿಎಲ್ ನಲ್ಲಿ ಜಯ ಸಾಧಿಸಿದೆ!

ವಿಜಯೋತ್ಸವಕ್ಕೆ ವ್ಯವಸ್ಥಿತ ಯೋಜನೆ ರೂಪಿಸಿಕೊಳ್ಳಬೇಕಿತ್ತು: ಸೈಕಿಯಾ

ನವದೆಹಲಿ (ಪಿಟಿಐ): 'ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಕಾಲ್ತುಳಿತದಲ್ಲಿ ಅಭಿಮಾನಿಗಳ ಸಾವು ಸಂಭವಿಸಿದ್ದು 'ದುರದೃಷ್ಟಕರ'. ಆರ್‌ಸಿಬಿಯ ಐಪಿಎಲ್ ವಿಜಯೋತ್ಸವ ಕಾರ್ಯಕ್ರಮಕ್ಕೆ ವ್ಯವಸ್ಥಿತ ಯೋಜನೆ ರೂಪಿಸಿಕೊಳ್ಳಬೇಕಿತ್ತು' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ದೇವಜಿತ್ ಸೈಕಿಯಾ ಬುಧವಾರ ತಿಳಿಸಿದರು.

18 ವರ್ಷಗಳ ಕಾಯುವಿಕೆ ನಂತರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ ಪ್ರಶಸ್ತಿ ಗೆದ್ದುಕೊಂಡ ಸಂಭ್ರಮ, ಸಂಜೆಯ ವೇಳೆಗೆ ಸೂತಕದ ಛಾಯೆ ಪಡೆದುಕೊಂಡಿತ್ತು.

'ಇಷ್ಟು ದೊಡ್ಡ ಪ್ರಮಾಣದಲ್ಲಿ ವಿಜಯೋತ್ಸವ ಹಮ್ಮಿಕೊಳ್ಳುವಾಗ ಸಾಕಷ್ಟು ಮುಂಜಾಗ್ರತೆ, ಸುರಕ್ಷತೆ, ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಎಲ್ಲೋ ಒಂದು ಕಡೆ ಲೋಪವಾಗಿವೆ' ಎಂದು ಹೇಳಿದರು.

'ಈ ಹಿಂದೆಯೂ ಐಪಿಎಲ್ ಗೆದ್ದ ತಂಡಗಳ ಸಂಭ್ರಮಾಚರಣೆ ನಡೆದಿವೆ. ಹಿಂದಿನ ವರ್ಷ ಕೋಲ್ಕತ್ತದಲ್ಲಿ ಸಹ ಐಪಿಎಲ್ ವಿಜಯೋತ್ಸವ ಕಾರ್ಯಕ್ರಮ ನಡೆದಿತ್ತು. ಆದರೆ ಅಲ್ಲಿ ಏನೂ ಆಗಿರಲಿಲ್ಲ. ಬಾರ್ಬಡೋಸ್‌ನಲ್ಲಿ ಭಾರತ ತಂಡ ಟಿ20 ವಿಶ್ವಕಪ್ ಗೆದ್ದಾಗ ಮುಂಬೈನ ಕಡಲಕಿನಾರೆ ಬಳಿ ಜನಸಾಗರವೇ ಹರಿದುಬಂದಿತ್ತು. ಆದರೆ ಅಹಿತಕರ ಘಟನೆಗಳೇನೂ ನಡೆದಿರಲಿಲ್ಲ' ಎಂದು ಸೈಕಿಯಾ ಉದಾಹರಣೆ ನೀಡಿದರು.

ಮಂಗಳವಾರ ಕೂಡ ಅಹಮದಾಬಾದಿನ ಕ್ರೀಡಾಂಗಣದಲ್ಲಿ ಐಪಿಎಲ್ ಫೈನಲ್ ಪಂದ್ಯವನ್ನು 1,20,000 ಮಂದಿ ವೀಕ್ಷಿಸಿದ್ದರು. ಆದರೆ ಬಿಸಿಸಿಐ ಬಳಿ ಇದಕ್ಕಾಗಿಯೇ ಯೋಜಿಸಿದ ತಂಡ ಸ್ಥಳೀಯ ಜಿಲ್ಲಾಡಳಿತದೊಡನೆ ಸಮನ್ವಯ ಸಾಧಿಸಿ ಕೆಲಸ ಮಾಡಿತು. ಪ್ರೇಕ್ಷಕರಿಗೆ ಸಮಸ್ಯೆಯಾಗದಂತೆ ನೋಡಿಕೊಂಡಿತು ಎಂದರು.

ಡಿ.ಎನ್.ರಾಜಣ್ಣ ಸ್ಮಾರಕ ಟ್ರೋಫಿ ದಕ್ಷಿಣ ಕನ್ನಡ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿಲ್ ಮತ್ತು ದೀಕ್ಷಿತ್ ಅವರ ಆಟದ ಬಲದಿಂದ ದಕ್ಷಿಣ ಕನ್ನಡ ಜಿಲ್ಲಾ ತಂಡವು ಡಿ.ಎನ್.ರಾಜಣ್ಣ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದಲ್ಲಿ 72–47ರಿಂದ ದಾವಣಗೆರೆ ಜಿಲ್ಲಾ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಲೀಗ್‌ನ ಪಂದ್ಯದಲ್ಲಿ ವಿರಾಮದ ವೇಳೆ (32–33) ಒಂದು ಅಂಕಗಳಿಂದ ಹಿನ್ನಡೆಯಲ್ಲಿದ್ದ ದಕ್ಷಿಣ ಕನ್ನಡ ತಂಡವು ನಂತರದಲ್ಲಿ ಪಾರಮ್ಯ ಮೆರೆಯಿತು. ಆದಿಲ್ ಮತ್ತು ದೀಕ್ಷಿತ್ ತಲಾ 19 ಅಂಕ ಗಳಿಸಿದರು. ದಾವಣಗೆರೆ ತಂಡದ ಕೌಶಿಕ್ 18 ಅಂಕ ಕಲೆಹಾಕಿದರು.

ಫಲಿತಾಂಶ: ಬಾಲಕರು: ಮಂಡ್ಯ ಜಿಲ್ಲೆ 61–52ರಿಂದ ಹಾಸನ ಜಿಲ್ಲೆ ವಿರುದ್ಧ; ಧಾರವಾಡ ಜಿಲ್ಲೆ ಬಿ 62–42ರಿಂದ ಮೈಸೂರು ಜಿಲ್ಲೆ ಬಿ ವಿರುದ್ಧ; ಮೈಸೂರು ಜಿಲ್ಲೆ ಎ 54–11ರಿಂದ ಬಳ್ಳಾರಿ ವಿರುದ್ಧ; ಚಿಕ್ಕಮಗಳೂರು ಜಿಲ್ಲೆ 54–15ರಿಂದ ಹಾಸನ ಜಿಲ್ಲೆ ವಿರುದ್ಧ; ಹೂಪ್ಸ್ 7 ಬಿಸಿ 75–24ರಿಂದ ಲಕ್ಷ್ಮಣ್ ಬಿ.ಸಿ. ವಿರುದ್ಧ; ರಾಮನಗರ ಜಿಲ್ಲೆ 48–12ರಿಂದ ಚಿಕ್ಕಬಳ್ಳಾಪುರ ಜಿಲ್ಲೆ ವಿರುದ್ಧ; ಧಾರವಾಡ ಜಿಲ್ಲೆ ಬಿ 79–53ರಿಂದ ಚಾಮರಾಜನಗರ ಜಿಲ್ಲೆ ವಿರುದ್ಧ; ದಕ್ಷಿಣ ಕನ್ನಡ ಜಿಲ್ಲೆ 72–47ರಿಂದ ದಾವಣಗೆರೆ ಜಿಲ್ಲೆ ವಿರುದ್ಧ ಗೆಲುವು ಸಾಧಿಸಿತು.

ಬಾಲಕಿಯರು: ದಾವಣಗೆರೆ ಜಿಲ್ಲೆ 56–28ರಿಂದ ಚಾಮರಾಜನಗರ ಜಿಲ್ಲೆ ಎದುರು; ವಿಜಯಪುರ ಜಿಲ್ಲೆ 47–26ರಿಂದ ಧಾರವಾಡ ಜಿಲ್ಲೆ ಎದುರು ಜಯ ಸಾಧಿಸಿತು.

ಮೀರಾಗೆ ಸೋಲುಣಿಸಿದ ಲೋಯಿಸ್

ಫ್ರೆಂಚ್ ಓಪನ್: ಫ್ರಾನ್ಸ್ ಆಟಗಾರ್ತಿಗೆ ಸೆಮೀಸ್‌ನಲ್ಲಿ ಕೊಕೊ ಗಾಫ್ ಎದುರಾಳಿ



ಫ್ರಾನ್ಸ್‌ನ ಲೋಯಿಸ್ ವಸ್ಲೂನ್ ಅವರು ಮೀರಾ ಆಂಡ್ರೀವಾ ವಿರುದ್ಧ ಎಂಟರ ಘಟ್ಟದ ಪಂದ್ಯದಲ್ಲಿ ಹೊಡೆತವೊಂದಕ್ಕೆ ಯತ್ನಿಸಿದರು ಎಪಿ/ಪಿಟಿಐ ಚಿತ್ರ

ಪ್ಯಾರಿಸ್ (ಎಎಫ್‌ಪಿ): ಸ್ಫೂರ್ತಿಯುತ ಆಟವಾಡಿದ ಆತಿಥೇಯ ಫ್ರಾನ್ಸ್‌ನ ಲೋಯಿಸ್ ವಸ್ಲೂನ್ ಅವರು ನೇರ ಸೆಟ್‌ಗಳಿಂದ ಆರನೇ ಕ್ರಮಾಂಕದ ಮೀರಾ ಆಂಡ್ರೀವಾ ಅವರನ್ನು ಸೋಲಿಸಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ಗೆ ದಾಪುಗಾಲಿಟ್ಟರು. ಸೆಮಿಫೈನಲ್‌ನಲ್ಲಿ ಅವರು ಎರಡನೇ ಶ್ರೇಯಾಂಕದ ಕೊಕೊ ಗಾಫ್ ಅವರನ್ನು ಎದುರಿಸಲಿದ್ದಾರೆ.

ಮೊದಲ ಸಲ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆಡುತ್ತಿರುವ ವಸ್ಲೂನ್ ಬುಧವಾರ ಪ್ರೇಕ್ಷಕರ ಒಕ್ಕೊರಲಿನ ಬೆಂಬಲದ ನಡುವೆ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 7–6 (8–6), 6–3 ರಿಂದ ರಷ್ಯಾದ ಹದಿಹರೆಯದ ಆಟಗಾರ್ತಿ ಆಂಡ್ರೀವಾ ಅವರನ್ನು ಮಣಿಸಿದರು.

ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದ ವಸ್ಲೂನ್ 2011ರ ನಂತರ ಈ ಟೂರ್ನಿಯ ಸೆಮಿಫೈನಲ್ ತಲುಪಿದ ಫ್ರಾನ್ಸ್‌ನ ಮೊದಲ ಆಟಗಾರ್ತಿ ಎನಿಸಿದರು. ಆ ವರ್ಷ ಮೇರಿಯನ್ ಬರ್ತೋಲಿ ನಾಲ್ಕರ ಘಟ್ಟ ತಲುಪಿದ್ದರು.

22 ವರ್ಷದ ಲೋಯಿಸ್ ಕಳೆದ ವರ್ಷ ಇಲ್ಲಿ ಆಡಬೇಕಾಗಿತ್ತು. ಆದರೆ ಮೊಣಕಾಲು ನೋವಿನಿಂದ ಕಣಕ್ಕಿಳಿದಿರಲಿಲ್ಲ. ವಿಶ್ವ ಕ್ರಮಾಂಕದಲ್ಲಿ 361ನೇ ಸ್ಥಾನದಲ್ಲಿರುವ ಲೋಯಿಸ್ ಅವರು 40 ವರ್ಷಗಳಲ್ಲಿ ಪ್ರಮುಖ ಟೂರ್ನಿಯೊಂದರ ಸೆಮಿಫೈನಲ್ ತಲುಪಿದ ಅತಿ ಕಡಿಮೆ ರ‍್ಯಾಂಕಿನ ಆಟಗಾರ್ತಿ ಎನಿಸಿದ್ದಾರೆ. 1989ರಲ್ಲಿ ಮೋನಿಕಾ ಸೆಲೆಸ್ ಮತ್ತು ಜೆನಿಫರ್ ಕೇಪ್ರಿಯಾಟಿ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯ ಪದಾರ್ಪಣೆಯಲ್ಲೇ ಸೆಮಿಫೈನಲ್ ತಲುಪಿದ್ದರು. ಅವರ ನಂತರ ಲೋಯಿಸ್ ಈ ಸಾಧನೆ ಮಾಡಿದ ಮೊದಲ ಆಟಗಾರ್ತಿ ಎನಿಸಿದರು.

'ಇಷ್ಟೊಂದು ಜನರ ಮುಂದೆ ಆಡುವುದು ಮತ್ತು ಇಂಥ ಬೆಂಬಲದ ಅನುಭವ ಪಡೆಯುವುದು ರೋಚಕ ಎನಿಸುತ್ತದೆ' ಎಂದು ವಸ್ಲೂನ್ ಹೇಳಿದರು.

ಅಮೆರಿಕದ ಕೊಕೊ ಗಾಫ್ ಅವರು ಎಂಟರ ಘಟ್ಟದ ಪಂದ್ಯದಲ್ಲಿ ಸ್ವದೇಶದ ಮ್ಯಾಡಿಸನ್ ಕೀಸ್ ಅವರನ್ನು 6–7 (6/8), 6–4, 6–1 ರಿಂದ ಸೋಲಿಸಿದರು. ಕೀಸ್ ಅವರು ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಆಗಿದ್ದಾರೆ.

ರೋಲಂಡ್ ಗ್ಯಾರೋಸ್‌ನಲ್ಲಿ ಸತತ ನಾಲ್ಕನೇ ಪ್ರಶಸ್ತಿಯ ಅಭಿಯಾನದಲ್ಲಿರುವ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಗುರುವಾರ ನಡೆಯುವ ಇನ್ನೊಂದು ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ (ಬೆಲರೂಸ್) ವಿರುದ್ಧ ಆಡಲಿದ್ದಾರೆ. ಗಾಫ್ 2022ರ ಟೂರ್ನಿಯಲ್ಲಿ ಇಲ್ಲಿ ಫೈನಲ್‌ನಲ್ಲಿ ಸೋತಿದ್ದರು.

ಸಿನ್ನರ್‌ಗೆ ಸುಲಭ ಜಯ: ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಪುರುಷರ ವಿಭಾಗದ ಪಂದ್ಯದಲ್ಲಿ ಶ್ರೇಯಾಂಕ ರಹಿತ ಆಟಗಾರ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ನೇರ ಸೆಟ್‌ಗಳಿಂದ ಸದೆಬಡಿದು ಸತತ ಎರಡನೇ ಬಾರಿ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿದರು.

ಬುಧವಾರ ಒಂದು ಗಂಟೆ 49 ನಿಮಿಷಗಳ ಕಾಲ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಇಟಲಿಯ ಆಟಗಾರ 6–1, 7–5, 6–0 ಯಿಂದ ಕಜಕಸ್ತಾನದ ಆಟಗಾರನನ್ನು ಮಣಿಸಿದರು.

ಥಾಯ್ಲೆಂಡ್ ಮೊದಲ ಎದುರಾಳಿ

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಏಷ್ಯಾ ಕಪ್ ಟೂರ್ನಿಯಲ್ಲಿ ಸೆಪ್ಟೆಂಬರ್ 5ರಂದು ಥಾಯ್ಲೆಂಡ್ ತಂಡವನ್ನು ಎದುರಿಸುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ ಎಂದು ಹಾಕಿ ಇಂಡಿಯಾ ಬುಧವಾರ ಪ್ರಕಟಿಸಿದೆ.

ಟೂರ್ನಿಯು ಚೀನಾದ ಹಾಂಗ್‌ಝೌನಲ್ಲಿ ಸೆಪ್ಟೆಂಬರ್ 5 ರಿಂದ 14 ರವರೆಗೆ ನಡೆಯಲಿದೆ. ಭಾರತ ತಂಡವು 'ಬಿ' ಗುಂಪಿನಲ್ಲಿದ್ದು, ಥಾಯ್ಲೆಂಡ್, ಜಪಾನ್, ಥಾಯ್ಲೆಂಡ್, ಸಿಂಗಪುರ ಸಹ ಇದೇ ಗುಂಪಿನಲ್ಲಿವೆ. ಆತಿಥೇಯ ಚೀನಾ, ಕೊರಿಯಾ, ಮಲೇಷ್ಯಾ ಮತ್ತು ಚೀನಾ ತೈಪೆ ತಂಡಗಳು 'ಎ' ಗುಂಪಿನಲ್ಲಿವೆ. ಈ ಟೂರ್ನಿಯಲ್ಲಿ ಗೆದ್ದ ತಂಡವು 2026ರ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯಲಿದೆ.

ಭಾರತ ಸೆ. 6ರಂದು ಜಪಾನ್ ತಂಡವನ್ನು ಎದುರಿಸಲಿದ್ದು, 8ರಂದು ಕೊನೆಯ ಲೀಗ್ ಪಂದ್ಯದಲ್ಲಿ ಸಿಂಗಪುರ ವಿರುದ್ಧ ಆಡಲಿದೆ.

ಸ್ನೇಹಪರ ಫುಟ್‌ಬಾಲ್: ಥಾಯ್ಲೆಂಡ್‌ಗೆ ಜಯ

ಪಥುಮ್ ಥಾನಿ (ಥಾಯ್ಲೆಂಡ್), (ಪಿಟಿಐ): ನೀರಸ ಆಟವಾಡಿದ ಭಾರತ ತಂಡ, ಅಂತರರಾಷ್ಟ್ರೀಯ ಫುಟ್‌ಬಾಲ್ ಸ್ನೇಹಪರ ಪಂದ್ಯದಲ್ಲಿ ಥಾಯ್ಲೆಂಡ್ ತಂಡದ ಎದುರು ಬುಧವಾರ 0–2 ಗೋಲುಗಳ ಸೋಲು ಅನುಭವಿಸಿತು.

ಜೂನ್ 10ರಂದು ಕೌಲೂನ್‌ನಲ್ಲಿ ಹಾಂಗ್‌ಕಾಂಗ್ ವಿರುದ್ಧ ಏಷ್ಯಾ ಕಪ್‌ನ ನಿರ್ಣಾಯಕ ಅರ್ಹತಾ ಸುತ್ತಿನ ಪಂದ್ಯಕ್ಕೆ ಮೊದಲು ಭಾರತಕ್ಕೆ ಈ ಪಂದ್ಯವು ಸಿದ್ಧತೆಯ ಭಾಗವಾಗಿ ನಡೆದಿತ್ತು.

ಎರಡನೇ ಸುತ್ತಿಗೆ ಕರುಣಾಕರನ್– ಆದ್ಯಾ

ಜಕಾರ್ತಾ (ಪಿಟಿಐ): ಸತೀಶ್ ಕುಮಾರ್ ಕರುಣಾಕರನ್ ಮತ್ತು ಆದ್ಯಾ ವರಿಯಾತ್ ಜೋಡಿಯು ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಮಿಶ್ರ ವಿಭಾಗದ ಎರಡನೇ ಸುತ್ತಿಗೆ ಮುನ್ನಡೆಯಿತು. ಆದರೆ ಈ ವಿಭಾಗದಲ್ಲಿ ಭಾರತದ ಇತರ ಜೋಡಿಗಳು ಬುಧವಾರ ಹೊರಬಿದ್ದವು.

ಕರುಣಾಕರನ್ ಮತ್ತು ಆದ್ಯಾ ಜೋಡಿ ಸುಮಾರು 45 ನಿಮಿಷ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಚೀನಾ ತೈಪೆಯ ಯೆ ಹಾಂಗ್ ವಿ ಮತ್ತು ನಿಕೋಲ್ ಗೊನ್ಸಾಲ್ವೆಸ್ ಚಾನ್ ಜೋಡಿಯನ್ನು 15–21, 21–16, 21–17 ರಿಂದ ಪರಾಭವಗೊಳಿಸಿತು.

ಆದರೆ ಭಾರತದ ಇತರ ಜೋಡಿಗಳು ಹೋರಾಟ ತೋರಲಿಲ್ಲ. ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಗದ್ದೆ ಜೋಡಿ 14–21, 9–21ರಲ್ಲಿ ಜಪಾನಿನ ಯುಇಯಿ ಶಿಮೊಗಾಮಿ- ಸಯಾಕಾ ಹೊಬರಾ ಎದುರು ನೇರ ಗೇಮ್‌ಗಳ ಸೋಲನುಭವಿಸಿತು.

ಅಶಿತ್ ಸೂರ್ಯ- ಅಮೃತಾ ಪ್ರಮುತೇಶ್ ಜೋಡಿ 15–21, 9–21ರಲ್ಲಿ ಡೆನ್ಮಾರ್ಕ್‌ನ ಮಾಡ್ಸ್ ವೆಸ್ಟರ್‌ಗಾರ್ಡ್- ಕ್ರಿಸ್ಟಿಯನ್ ಬುಷ್ ಜೋಡಿಯ ಎದುರು ಸೋಲನುಭವಿಸಿತು.

ಧ್ರುವ್ ಕಪಿಲ- ತನಿಶಾ ಕ್ರಾಸ್ಟೊ ಜೋಡಿ ಮೂರು ಗೇಮ್‌ಗಳ ಸೆಣಸಾಟದಲ್ಲಿ 11–21, 21–16, 14–21ರಲ್ಲಿ ಎರಡನೇ ಶ್ರೇಯಾಂಕದ ತಾಂಗ್ ಜೀ ಚೆನ್ - ಈ ವೀ ತೊಹ್ (ಮಲೇಷ್ಯಾ) ಜೋಡಿಯೆದುರು ಹಿಮ್ಮೆಟ್ಟಿತು.

ಗಾಯತ್ರಿ–ಟ್ರಿಸಾ ಮುನ್ನಡೆ: ಮಹಿಳೆಯರ ಡಬಲ್ಸ್ ಮೊದಲ ಸುತ್ತಿನಲ್ಲಿ ಭಾರತದ ಗಾಯತ್ರಿ ಗೋಪಿಚಂದ್– ಟ್ರೀಸಾ ಜೋಳಿ 21–14, 22–20 ರಿಂದ ಉಕ್ರೇನ್‌ನ ಪಿ. ಬುಹ್ರೋವಾ- ವೈ. ಕಾಂಟೆಮಿರ್ ಜೋಡಿಯನ್ನು ಸೋಲಿಸಿತು.

ನಾರ್ವೆ ಚೆಸ್: ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ ಹಂಪಿ

ನಕಾಮುರಗೆ ಮಣಿದ ಗುಕೇಶ್

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಹಿಕಾರು ನಕಾಮುರ ಅವರು ನಾರ್ವೆ ಚೆಸ್ ಟೂರ್ನಿಯಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಅವರ ಗೆಲುವಿನ ಸರಪಣಿಯನ್ನು ಮುರಿದು ಅಮೋಘ ಜಯ ಸಾಧಿಸಿದರು. ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ ಅವರು ಮಂಗಳವಾರ ಎಂಟನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು ಸೋಲಿಸಿದರು.

ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಹಾಗೂ ಮಾಜಿ ಚಾಂಪಿಯನ್ ನಕಾಮುರ ಅವರು 19 ವರ್ಷ ವಯಸ್ಸಿನ ಗುಕೇಶ್ ಅವರನ್ನು ಸೋಲಿಸುವ ಮೂಲಕ ಮೂರನೇ ಸುತ್ತಿನಲ್ಲಿ ಅನುಭವಿಸಿದ ಸೋಲಿಗೆ ಸೇಡನ್ನೂ ತೀರಿಸಿಕೊಂಡರು. ನಾಲ್ಕೂವರೆ ಗಂಟೆ ಕಾಲ ಬೆಳೆದ ಎಂಟನೇ ಸುತ್ತಿನ ಪಂದ್ಯದಲ್ಲಿ 37 ವರ್ಷ ವಯಸ್ಸಿನ ನಕಾಮುರ ಅವರು ಗುಕೇಶ್ ಅವರಿಗೆ ಚೇತರಿಸಲು ಸ್ವಲ್ಪವೂ ಅವಕಾಶ ನೀಡಲಿಲ್ಲ.



ಡಿ.ಗುಕೇಶ್



ಹಿಕಾರು ನಕಾಮುರ

ಇನ್ನು ಎರಡು ಸುತ್ತಿನ ಪಂದ್ಯಗಳು ಉಳಿದಿದ್ದು, ಗುಕೇಶ್ ಮತ್ತು ನಕಾಮುರ ತಲಾ 11.5 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ಇರಿಗೇಶಿ ಅವರಿಗೆ ಸೋತರೂ ಕರುವಾನ 12.5 ಪಾಯಿಂಟ್ಸ್ ಕಲೆಹಾಕಿದ್ದು ಅಗ್ರ ಸ್ಥಾನ ಉಳಿಸಿಕೊಂಡಿದ್ದಾರೆ.

ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (12 ಪಾಯಿಂಟ್) ಎರಡನೇ ಸ್ಥಾನದಲ್ಲಿ ಇದ್ದಾರೆ.

ಕಾರ್ಲ್‌ಸನ್ ಎಂಟನೇ ಸುತ್ತಿನಲ್ಲಿ ಚೀನಾದ ವೀ ಯಿ (8) ಅವರ ಎದುರು ಆರ್ಮ್‌ಗೆಡನ್‌ನಲ್ಲಿ ಸೋಲನುಭವಿಸಬೇಕಾಯಿತು. ಇರಿಗೇಶಿ (10.5 ಪಾಯಿಂಟ್ಸ್) ಆರನೇ ಸ್ಥಾನದಲ್ಲಿದ್ದಾರೆ.

ಹಂಪಿಗೆ ಮುನ್ನಡೆ: ಎರಡು ಬಾರಿಯ ವಿಶ್ವ ರ‍್ಯಾಪಿಡ್ ಚಾಂಪಿಯನ್ ಕೋನೇರು ಹಂಪಿ (13.5 ಪಾಯಿಂಟ್ಸ್) ಅವರು ಮಹಿಳಾ ವಿಭಾಗದ ಎಂಟನೇ ಸುತ್ತಿನಲ್ಲಿ ಸ್ಪೇನ್‌ನ ಸಾರಾ ಖಾಡೆಮ್ ಅವರನ್ನು ಮಣಿಸಿ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು. ಈ ವಿಭಾಗದ ಇತರ ಎರಡು ಪಂದ್ಯಗಳು ಆರ್ಮ್‌ಗೆಡನ್‌ವರೆಗೆ ಬೆಳೆದವು.

ವಿಶ್ವ ಚಾಂಪಿಯನ್, ಚೀನಾದ ವೆನ್‌ಜುನ್ (12.5) ಎರಡನೇ ಸ್ಥಾನದಲ್ಲಿದ್ದಾರೆ. ಜು ಅವರ ಆರು ಪಂದ್ಯಗಳ ಗೆಲುವಿನ ಸರಣಿಯನ್ನು ಭಾರತದ ಆರ್. ವೈಶಾಲಿ ಅವರು ಟೈಬ್ರೇಕ್ ಪಂದ್ಯದ ಮೂಲಕ ಮುರಿದರು. ವೈಶಾಲಿ (9.5) ಐದನೇ ಸ್ಥಾನದಲ್ಲಿದ್ದಾರೆ.

ಇನ್ನೊಂದು ಪಂದ್ಯದಲ್ಲಿ ಉಕ್ರೇನಿನ ಅನ್ನಾ ಮುಝಿಚುಕ್ (12.5 ಪಾಯಿಂಟ್ಸ್), ಚೀನಾದ ಲೀ ಟಿಂಗ್ಜೀ (10 ಪಾಯಿಂಟ್ಸ್) ಅವರನ್ನು ಟೈಬ್ರೇಕ್‌ನಲ್ಲಿ ಸೋಲಿಸಿದರು.